ತೀರ್ಥಹಳ್ಳಿ ಪರಿಸರದ ಶಾಸನ ಮತ್ತು ಸ್ಮಾರಕಗಳ ಅಧ್ಯಯನ

(ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಪ್ರಬಂಧ)

ಸಂಶೋಧನಾ ವಿದ್ಯಾರ್ಥಿನಿ

ಅನಿತಾ ವೈ..

ಮಾರ್ಗದರ್ಶಕರು

ಡಾ.ವಾಸುದೇವ ಬಡಿಗೇರ

ಪ್ರಾಧ್ಯಾಪಕರು

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಶಾಸನಶಾಸ್ತ್ರ ವಿಭಾಗ

ಸಮಾಜವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೬

1259

ತೀರ್ಥಹಳ್ಳಿ ಪರಿಸರದ ಶಾಸನ ಮತ್ತು ಸ್ಮಾರಕಗಳ ಅಧ್ಯಯನ

(ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ನಿಬಂಧ)

ಸಂಶೋಧನಾ ವಿದ್ಯಾರ್ಥಿನಿ
ಅನಿತಾ ವೈ.,

ಮಾರ್ಗದರ್ಶಕರು
ಡಾ.ವಾಸುದೇವ ಬಡಿಗೇರ
ಪ್ರಾಧ್ಯಾಪಕರು
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಶಾಸನಶಾಸ್ತ್ರ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬
೨೦೧೬

ಮಾರ್ಗದರ್ಶಕರ ದೃಢೀಕರಣ ಪತ್ರ

"ತೀರ್ಥಹಳ್ಳಿ ಪರಿಸರದ ಶಾಸನ ಮತ್ತು ಸ್ಮಾರಕಗಳ ಅಧ್ಯಯನ" ಎಂಬ ಶೀರ್ಷಿಕೆಯ ಪ್ರಬಂಧವನ್ನು **ಎಂ.ಫಿಲ್** ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಸಮಾಜವಿಜ್ಞಾನಗಳ ನಿಕಾಯದ ಶಾಸನಶಾಸ್ತ್ರ ವಿಭಾಗದಲ್ಲಿ ೨೦೧೫-೨೦೧೬ನೇ ಶೈಕ್ಷಣಿಕ ಸಾಲಿನಲ್ಲಿ **ಅನಿತಾ.ವೈ** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ನಿಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಲಿ ಅಥವಾ ಇತರ ಉದ್ದೇಶಗಳಿಗಾಗಲಿ ಇವರು ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಮಾರ್ಗದರ್ಶಕರು
ಡಾ.ವಾಸುದೇವ ಬಡಿಗೇರ
ಪ್ರಾಧ್ಯಾಪಕರು
ಪ್ರಾಚೀನ ಇತಿಹಾಸ ಮತ್ತು
ಪುರಾತತ್ವ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ: ವಿದ್ಯಾರಣ್ಯ
ದಿನಾಂಕ:

ಸಂಶೋಧಕರ ದೃಢೀಕರಣ ಪತ್ರ

"ತೀರ್ಥಹಳ್ಳಿ ಪರಿಸರದ ಶಾಸನ ಮತ್ತು ಸ್ಮಾರಕಗಳ ಅಧ್ಯಯನ" ಎಂಬ ಪ್ರಬಂಧವನ್ನು ಪ್ರಾಧ್ಯಾಪಕರಾದ **ಡಾ.ವಾಸುದೇವ ಬಡಿಗೇರ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ೨೦೧೫–೧೬ನೇ ಶೈಕ್ಷಣಿಕ ಸಾಲಿನ **ಎಂ.ಫಿಲ್** ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಸಮಾಜವಿಜ್ಞಾನಗಳ ನಿಕಾಯದ ಶಾಸನಶಾಸ್ತ್ರ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ.

ಪ್ರಸ್ತುತ ಪ್ರಬಂಧವು ಮೂಲವಾಗಿದ್ದು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

Anitha Y

ಅನಿತಾ.ವೈ

ಸಂಶೋಧನಾ ವಿದ್ಯಾರ್ಥಿನಿ

ಶಾಸನಶಾಸ್ತ್ರ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ: ವಿದ್ಯಾರಣ್ಯ

ದಿನಾಂಕ: 30-07-2016

ಪರಿವಿಡಿ

ಅಧ್ಯಾಯ–ಒಂದು

ಪ್ರಸ್ತಾವನೆ

೧.೧. ಅಧ್ಯಯನದ ಉದ್ದೇಶ
೧.೨. ಅಧ್ಯಯನದ ವ್ಯಾಪ್ತಿ
೧.೩. ಅಧ್ಯಯನದ ಸ್ವರೂಪ
೧.೪. ಅಧ್ಯಯನದ ವಿಧಾನ
೧.೫. ಅಧ್ಯಯನದ ಸಮೀಕ್ಷೆ

ಅಧ್ಯಾಯ–ಒಂದು

ಪ್ರಸ್ತಾವನೆ

ಪೀಠಿಕೆ

ಒಂದು ಪ್ರದೇಶದ ಅಥವಾ ಸ್ಥಳದ ಅನಾದಿಕಾಲದಿಂದ ಇತ್ತೀಚಿನವರೆಗಿನ ಮಾನವ ಸಮಾಜದ ಸಾಂಸ್ಕೃತಿಕ ಪರಂಪರೆಯನ್ನು ಪುನರಚಿಸಲು ತಿಳಿಯಲಿ ಅಲ್ಲಿಯ ಪುರಾತತ್ವ ಆಕಾರಗಳು ಒಂದು ಪ್ರಮುಖ ಆಕಾರ. ಅದರಲ್ಲೂ ಮಾನವನ ಸಾಂಸ್ಕೃತಿಕ ಪ್ರಗತಿಯ ಪಥದಲ್ಲಿ ತನ್ನ ಭಾವನೆಗಳನ್ನು ತಿಳುವಳಿಕೆಗಳನ್ನು ತನ್ನ ಜನರಿಗೆ ತಿಳಿಯಲು ಬರವಣಿಗೆ ಸಾಧನವನ್ನು ರೂಪಿಸಿಕೊಂಡು ಬಳಸಿದ ಹಂತದ ಪೂರ್ವದ ಜೀವನ ಶೈಲಿ ಸಂಸ್ಕೃತಿಯನ್ನು ತಿಳಿಯಲು ಒಂದೇ ಆಕಾರ ತತ್ಸಬಂಧ ಪುರಾತತ್ವ ಅವಶೇಷಗಳು ಮತ್ತು ಅವುಗಳಿಂದ ಮಾತ್ರ ಸಾಧ್ಯ. ಅಷ್ಟೇ ಅಲ್ಲ, ಮುಖ್ಯ ಆಕಾರಗಳಲ್ಲಿ ಒಂದಾದ ಸಾಹಿತ್ಯದಿಂದ ಮಾನವ ಕೆಲವೇ ಸಾವಿರ ವರ್ಷಗಳಿಂದ ಇತಿಹಾಸ ಮತ್ತು ಸಂಸ್ಕೃತಿಯ ಪ್ರಗತಿಯನ್ನು ಪುನರಚಿಸಲು ಸಾಧ್ಯವಾದರೆ ಪುರಾತತ್ವ ಆಕಾರಗಳಿಂದ ಮಾನವನು ತನ್ನ ಜೀವನನೋಪಾಯ ಎಂದಿನಿಂದ ನಿಸರ್ಗದಲ್ಲಿ ಸಹಜವಾಗಿ ದೊರೆಯುವ ಕಲ್ಲು, ಮರ, ಮೊದಲಾದ ಸಾಧನಗಳನ್ನು ಮಾಡಿಕೊಳ್ಳಲು ಆರಂಭಿಸಿದ ಆ ಹಂತದಿಂದ ಲಕ್ಷಾಂತರ ವರ್ಷಗಳ ಪ್ರಗತಿಯ ಸ್ಥೂಲ ಸ್ವರೂಪವನ್ನು ತಿಳಿಯಲು ಸಾಧ್ಯ.

ಒಟ್ಟಿನಲ್ಲಿ ಮಾನವನು ತನ್ನ ಜೀವನೋಪಾಯಕ್ಕಾಗಿ ಉದ್ದೇಶ ಪೂರ್ವಕವಾಗಿ ರಚಿಸಿದ ಅಥವಾ ಉಪಯೋಗಿಸಿದ ವಸ್ತುಗಳನ್ನು ಪುರಾತತ್ವ ಅವಶೇಷಗಳೆಂದು ಕರೆಯಲಾಗುತ್ತದೆ. ಒಂದು ಪ್ರದೇಶದ ಚರಿತ್ರೆಯನ್ನು ತಿಳಿಯಲು ಆ ಸ್ಥಳದ ಪ್ರಾಚ್ಯಾವಶೇಷಗಳು ಅತೀ ಪ್ರಮುಖವಾಗಿ ಪಾತ್ರವಹಿಸುತ್ತವೆ. ಪ್ರತಿಯೊಂದು ನೆಲೆಯಲ್ಲಿ ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿದ್ದು ಆಯಾ ಪ್ರದೇಶದಲ್ಲಿ ಕಂಡುಬರುವ ಐತಿಹಾಸಿಕ ಪ್ರಾಚ್ಯಾವಶೇಷಗಳಾದ ದೇವಾಲಯಗಳು, ಕಟ್ಟಡಗಳು ಮೂರ್ತಿಗಳು ಒಂದು ವ್ಯವಸ್ಥಿತವಾದ ಧಾರ್ಮಿಕ ಹಾಗೂ ಧಾರ್ಮಿಕೇತರ ಸಮಾಜವನ್ನು

ಉಳಿಸಿಕೊಂಡು ಬಂದಿರುವುದನ್ನು ನೋಡಬಹುದಾಗಿದೆ. ಪ್ರಾಚ್ಯಾವಶೇಷಗಳ ಇತಿಹಾಸ ಬದ್ಧತೆ ಹಾಗೂ ಸತ್ಯ, ಐತಿಹಾಸಿಕ ನಿಜಾಂಶವನ್ನು ತಿಳಿಯಪಡಿಸುವಲ್ಲಿ ಸಾಕಷ್ಟು ಸಹಾಯಕವಾಗುತ್ತದೆ.

ಕರ್ನಾಟಕದ ಮಲೆನಾಡು ವ್ಯಾಪ್ತಿಯಲ್ಲಿ ಬರುವ ಶಿವಮೊಗ್ಗ ಜಿಲ್ಲೆಯು ಐತಿಹಾಸಿಕ, ಸಾಂಸ್ಕೃತಕ ಮತ್ತು ಪ್ರಾಕೃತಿಕವಾಗಿ ಸಂಪದ್ಭರಿತವಾದದಂತಹ ಜಿಲ್ಲೆಯಾಗಿದೆ. ಇತಿಹಾಸದ ಉಲ್ಲೇಖ ಆಧಾರಗಳು ಭೌಗೋಳಿಕ ಲಕ್ಷಣ, ಶಾಸನಗಳು, ಅರಸುಗಳ ರಾಜಕೀಯ ವ್ಯವಸ್ಥೆ ಸಾಹಿತ್ಯ ಕೊಡುಗೆ ಕಲೆವಾಸ್ತುಶಿಲ್ಪದ ಬಗ್ಗೆ ಪ್ರಮುಖವಾಗಿ ಅವಶೇಷಗಳು ಜಿಲ್ಲೆಯಲ್ಲಿ ದೊರಕಿದ್ದು ಇವು ಜಿಲ್ಲೆಯ ಇತಿಹಾಸ ಅರಿಯಲು ಮೂಲ ಸಾಮಾಗ್ರಿಗಳಾಗಿದೆ, ಶಿವಮೊಗ್ಗ ಜಿಲ್ಲೆಯ ಪ್ರಾಗೈತಿಹಾಸಿಕ ಸಂಸ್ಕೃತಿಗಳ ಅವಶೇಷಗಳು ದೇವಾಲಯಗಳು, ಮೂರ್ತಿಶಿಲ್ಪಗಳು, ಶಾಸನಗಳು, ಸ್ಮಾರಕಗಳು, ಹಸ್ತಪ್ರತಿಗಳು ಮುಂತಾದವುಗಳು ಇತಿಹಾಸ ಕಾಲದ ಅವಶೇಷಗಳು ಕಂಡುಬರುತ್ತವೆ.

ಈ ಅವಶೇಷಗಳು ಜಿಲ್ಲೆಯಲ್ಲಿನ ೭ ತಾಲ್ಲೂಕುಗಳಲ್ಲಿ ಹರಡಿದ್ದು ಅವುಗಳ ಮೂಲಕ ಸೂಕ್ಷ್ಮ ಅಧ್ಯಯನಕ್ಕೆ ತಕ್ಕಂತೆ ಮತ್ತು ಅಧ್ಯಯನದ ಅವಶ್ಯಕತೆ ಇರುವುದರಿಂದ "ತೀರ್ಥಹಳ್ಳಿ ಪರಿಸರದ ಶಾಸನ ಮತ್ತು ಸ್ಮಾರಕಗಳ ಅಧ್ಯಯನ" ಎಂಬ ಶೀರ್ಷಿಕೆಯಡಿಯಲ್ಲಿ ಸಂಶೋಧನೆಯನ್ನು ನಡೆಸಲಾಗಿದೆ.

ಅಧ್ಯಯನದ ಉದ್ದೇಶ

ಸಂಶೋಧನೆಯ ಅಧ್ಯಯನಕ್ಕೆ ಉದ್ದೇಶ ಬಹುಮುಖ್ಯ, ಉದ್ದೇಶವು ಅಧ್ಯಯನಕ್ಕೆ ಗುರಿ ಇದ್ದಂತೆ. ಸಮಸ್ಯೆಯ ರೂಪದಲ್ಲಿ ಎತ್ತಿದ ಪ್ರಶ್ನೆಗಳಿಗೆ ಉತ್ತರ ಹುಡುಕುವ ಕೆಲಸವನ್ನು ಮಾಡುತ್ತಿದೆ. ಇದನ್ನೇ ಇನ್ನೊಂದು ವಿಧಾನದಲ್ಲಿ ಹೇಳುವುದಾದರೆ ಅಧ್ಯಯನ ಏನನ್ನು ಶೋಧಿಸಲು ಅಥವಾ ಪರೀಕ್ಷಿಸಲು ಅಥವಾ ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದೆ ಎನ್ನುವುದನ್ನು ಹೇಳುತ್ತದೆ. ಅಧ್ಯಯನದ ಉದ್ದೇಶಗಳು ಸಂಶೋಧನಾ ಕೆಲಸಕ್ಕೆ ಒಂದು ಮಾರ್ಗಸೂಚಿಯಂತೆ ಕೆಲಸ ಮಾಡುತ್ತದೆ. ಆದ್ದರಿಂದ ಸಂಶೋಧನಾ ಅಧ್ಯಯನಕ್ಕೆ ಉದ್ದೇಶವಿರಲೇಬೇಕು. ಕೆಲವೊಂದು ನಿರ್ದಿಷ್ಟ ಉದ್ದೇಶಗಳನ್ನಿಟ್ಟುಕೊಂಡು ಅಧ್ಯಯನ ಅಥವಾ ಸಂಶೋಧನೆಯನ್ನು ಕೈಗೊಂಡು ಕಾರ್ಯನಿರ್ವಹಿಸಿದಾಗ ಅದು ಪರಿಪೂರ್ಣವೆನಿಸುತ್ತದೆ. ಕರ್ನಾಟಕ ಇತಿಹಾಸದಲ್ಲಿ ಶಿವಮೊಗ್ಗ ಜಿಲ್ಲೆಯು ಒಂದು ಪ್ರಮುಖ ಐತಿಹಾಸಿಕ ಮಹತ್ವವನ್ನು ಪಡೆದಿದೆ. ಈ ಜಿಲ್ಲೆಯ ಮಧ್ಯಭಾಗದಲ್ಲಿರುವ ತೀರ್ಥಹಳ್ಳಿಯು ಚಾರಿತ್ರಿಕವಾಗಿ ಐತಿಹಾಸಿಕವಾಗಿ ಶ್ರೀಮಂತವಾಗಿರುವ ಪ್ರಸ್ತುತ ಈ ಪರಿಸರ ಮಲೆನಾಡು ಪ್ರದೇಶ ಎಂದು ಹೆಸರು ಪಡೆದಿದೆ.

ಪ್ರಸ್ತುತ ಅಧ್ಯಯನವು "ತೀರ್ಥಹಳ್ಳಿ ಪರಿಸರದ ಶಾಸನ ಮತ್ತು ಸ್ಮಾರಕಗಳ ಅಧ್ಯಯನ" ಎಂಬ ಶೀರ್ಷಿಕೆಯನ್ನು ಹೊಂದಿದ್ದು ಅಜ್ಞಾತವಾಗಿರುವ ತೀರ್ಥಹಳ್ಳಿ ಪರಿಸರದ ಚರಿತ್ರೆ ಮತ್ತು ಸಂಸ್ಕೃತಿಯನ್ನು ಈ ಮೂಲಕ ಬೆಳಕಿಗೆ ತರುವ ಉದ್ದೇಶವನ್ನು ಹೊಂದಲಾಗಿದೆ.

ಈ ಪ್ರದೇಶ ನೈಸರ್ಗಿಕವಾದ ಬೆಟ್ಟಗುಡ್ಡ, ಗವಿ, ಕಲ್ಲಾಸರೆಯನ್ನು, ಹೊಂದಿದ್ದು ಭೌಗೋಳಿಕವಾಗಿ ವಿಶಿಷ್ಟವಾಗಿವೆ. ಭೌಗೋಳಿಕ ಅಂಶಗಳು ಇಲ್ಲಿನ ಚರಿತ್ರೆ ಮತ್ತು ಸಂಸ್ಕೃತಿಯ ಮೇಲೆ ಬೀರಿರುವ

ಪ್ರಭಾವವನ್ನು ಕುರಿತು ಚರ್ಚಿಸಲಾಗುತ್ತದೆ. ಚಾರಿತ್ರಿಕವಾಗಿ ಸಾಂತರು, ಚಾಲುಕ್ಯರು, ಹೊಯ್ಸಳರು, ವಿಜಯನಗರದ ಅರಸರು ಮೈಸೂರಿನ ಒಡೆಯರು ಆಳ್ವಿಕೆಯ ಪ್ರಾಚೀನ ಕುರುಹುಗಳನ್ನು ದೊರೆತ ಆಧಾರವನ್ನು ಪ್ರಧಾನವಾಗಿ ಇಟ್ಟುಕೊಂಡು ವಿಶ್ಲೇಷಿಸಲಾಗಿದೆ. ನೈಸರ್ಗಿಕವಾಗಿ ಸ್ಥಳನಾಮಗಳು ವಿಶಿಷ್ಟವಾಗಿದೆ. ಅಂತಹ ಸ್ಥಳನಾಮ ಅಧ್ಯಯನಕ್ಕೆ ಅನುಗುಣವಾಗಿ ವ್ಯವಸ್ಥಿತವಾಗಿ, ಭೌಗೋಳಿಕ, ಪ್ರಾಗೈತಿಹಾಸಿಕವಾಗಿ ಹಾಗೂ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ. ಚಾರಿತ್ರಿಕ ಅಧ್ಯಯನ ಮಾಡುವ ಸಂದರ್ಭದಲ್ಲಿ ಇಲ್ಲಿನ ಪ್ರಾಚೀನ ವಾಸ್ತುಶಿಲ್ಪ, ಮೂರ್ತಿಶಿಲ್ಪ, ದೇವಾಲಯ, ಕೋಟೆ, ಸ್ಮಾರಕಶಿಲ್ಪಗಳು, ಶಾಸನಗಳ ಕುರಿತು ವಿವರವಾಗಿ ಇಲ್ಲಿನ ದೇವಾಲಯಗಳನ್ನು ಕಲ್ಯಾಣ ಚಾಲುಕ್ಯ, ವಿಜಯನಗರ, ಪಾಳೇಗಾರ, ಕೆಳದಿ ಇಕ್ಕೇರಿ ಇತ್ಯಾದಿಯಾಗಿ ಚರ್ಚಿಸುತ್ತಾ, ಯಾವ ಮತ್ತು ಯಾರ ಕಾಲಕ್ಕೆ ಸೇರಿದ್ದು ಶೈಲಿಯನ್ನು ಕುರಿತು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಒಟ್ಟಾರೆ ಇಲ್ಲಿನ ಪುರಾತತ್ವೀಯ ಸಾಹಿತ್ಯಿಕ ಹಾಗೂ ಮೌಖಿಕ ಆಕರಗಳ ಮೂಲಕ ಇಡೀ ತೀರ್ಥಹಳ್ಳಿ ಪರಿಸರದ ಸಮಗ್ರ ಚಾರಿತ್ರಿಕ ಅಧ್ಯಯನ ನಡೆಸುವ ಉದ್ದೇಶ ಪ್ರಸ್ತುತ ಅಧ್ಯಯನದ್ದು.

ಅಧ್ಯಯನದ ವ್ಯಾಪ್ತಿ

ಯಾವುದೇ ಒಂದು ಸಂಶೋಧನೆಗೆ ಚೌಕಟ್ಟು ಬಹಳ ಮುಖ್ಯ ಅಂತೆಯೇ ಒಂದು ಅಧ್ಯಯನಕ್ಕೆ ವ್ಯಾಪ್ತಿ ಇರಲೇಬೇಕು. ಈ ಮಿತಿಯಲ್ಲಿ ಅಧ್ಯಯನ ಕೈಗೊಂಡಾಗ ಮಾತ್ರ ಪರಿಪೂರ್ಣವಾಗುತ್ತದೆ. ಈ ಚೌಕಟ್ಟಿನ ಕ್ರಮಬದ್ಧತೆಯಿಂದಾಗಿ ಸ್ಪಷ್ಟವಾದ ಇತಿಹಾಸವನ್ನು ರಚಿಸಲು ಸಾಧ್ಯವಾಗುತ್ತದೆ. ಇಲ್ಲವಾದರೆ ಅಧ್ಯಯನವು ಗೊಂದಲಮಯವಾಗಿ, ಅಸ್ಪಷ್ಟವಾದ ಚರಿತ್ರೆ ರೂಪುಗೊಳ್ಳುವ ಸಾಧ್ಯತೆ ಇರುತ್ತದೆ.

ಈ ಅಧ್ಯಯನವು "ತೀರ್ಥಹಳ್ಳಿ ಪರಿಸರದ ಶಾಸನ ಮತ್ತು ಸ್ಮಾರಕಗಳ ಅಧ್ಯಯನ" ಭೌಗೋಳಿಕವಾಗಿ ವ್ಯಾಪ್ತಿಗೆ ಅನುಗುಣವಾಗಿ ಅಲ್ಲದೆ ಸಂದರ್ಭಾನುಸಾರ ಇತರ ಗ್ರಾಮಗಳನ್ನು ಅಧ್ಯಯನಕ್ಕೆ ಒಳಪಡಿಸಿಕೊಂಡು ಪ್ರಾಗೈತಿಹಾಸ ಕಾಲದಿಂದ ಇತಿಹಾಸ ಕಾಲದ ವರೆಗೂ ವಿವಿಧ ಆಯಾಮಗಳನ್ನು ಚಾರಿತ್ರಿಕ, ಸಾಂಸ್ಕೃತಿಕ, ಸಂಗತಿಗಳ ಮೂಲಕ ಮುಖೇನ ಗುರುತಿಸುವ ಪ್ರಯತ್ನವನ್ನು ಮಾಡಲಾಗಿದೆ. ತೀರ್ಥಹಳ್ಳಿ ಪರಿಸರದಲ್ಲಿ ಕಂಡುಬರುವ ಐತಿಹಾಸಿಕ ಕುರುಹುಗಳು ಅಲ್ಲಿ ನಂಬಿಕೊಂಡು ಬಂದಿರುವ ಐತಿಹ್ಯ ಆಚರಣೆಗಳನ್ನು ಮಾತ್ರ ವ್ಯಾಪ್ತಿಗೆ ಸೇರಿಸಿಕೊಂಡು ಅಧ್ಯಯನ ಮಾಡಲಾಗಿದೆ.

ಅಧ್ಯಯನ ಸ್ವರೂಪ

ಪ್ರಸ್ತುತ ಕಿರು ಪ್ರಬಂಧವನ್ನು ಅಧ್ಯಯನದ ಅನುಕೂಲಕ್ಕಾಗಿ ಐದು ಅಧ್ಯಾಯಗಳಾಗಿ ವಿಭಾಗಿಸಿದೆ.

ಮೊದಲನೇ ಅಧ್ಯಾಯವು ಪ್ರಸ್ತಾವನೆ, ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಸ್ವರೂಪ ಸಮೀಕ್ಷೆಗಳನ್ನು ಒಳಗೊಂಡಿದ್ದು ಅಧ್ಯಯನದ ಒಟ್ಟು ರೂಪು-ರೇಷೆಯನ್ನು ಕುರಿತು ಚಚಿಸುತ್ತದೆ.

ಎರಡನೇ ಅಧ್ಯಾಯನವು ಭೌಗೋಳಿಕ ಹಾಗೂ ಚಾರಿತ್ರಿಕ ಹಿನ್ನೆಲೆಯನ್ನು ಒಳಗೊಂಡಿದೆ. ಭೌಗೋಳಿಕ ಹಿನ್ನೆಲೆಯಲ್ಲಿ ತೀರ್ಥಹಳ್ಳಿ ತಾಲ್ಲೂಕಿನ ಭೌಗೋಳಿಕ ಪರಿಸರ ವಿಶಿಷ್ಟವಾಗಿದ್ದು ಇದೊಂದು ಮಲೆನಾಡು ಪ್ರದೇಶ, ಇಲ್ಲಿನ ಭೌಗೋಳಿಕ ಸನ್ನಿವೇಶಗಳು ಚಾರಿತ್ರಿಕ ಚರಿತ್ರೆ ನಿರ್ಮಾಣದಲ್ಲಿ ಹೇಗೆ ಪೂರಕವಾಗಿದೆ ಎಂಬುದನ್ನು ಕುರಿತು ಚರ್ಚಿಸಲಾಗಿದೆ. ಈ ತಾಲ್ಲೂಕಿನಲ್ಲಿ ಕಂಡುಬಂದಿರುವ ಪಾಂಡ್ಯರು, ಶಾಂತರು, ಕಲ್ಯಾಣದ ಚಾಲುಕ್ಯರು, ಹೊಯ್ಸಳರು, ವಿಜಯನಗರ ಅರಸರು, ಮೈಸೂರು ಒಡೆಯರು ಆಳ್ವಿಕೆ ಒಳಗೊಂಡಂತೆ ಹಲವು ಚಾರಿತ್ರಿಕ ಕುರುಹುಗಳನ್ನು ಚಾರಿತ್ರಿಕ ಹಿನ್ನೆಲೆಲಯಲ್ಲಿ ಎಂಬ ಉಪಶೀರ್ಷಿಕೆಯಡಿ ಚರ್ಚಿಸಲಗಿದೆ. ಕ್ಷೇತ್ರಕಾರ್ಯದಲ್ಲಿ ಬಳಸಿದ ದಾಖಲೆ, ಶಾಸನ, ಸಮಕಾಲೀನ ಸಾಹಿತ್ಯಿಕ ಆಧಾರಗಳನ್ನು ಅಧ್ಯಯನಕ್ಕೆ ಬಳಸಲಾಗಿದೆ.

ಮೂರನೇ ಅಧ್ಯಾಯದಲ್ಲಿ ತೀರ್ಥಹಳ್ಳಿ ಪರಿಸರದಲ್ಲಿ ಇದುವರೆಗೂ ದೊರೆತ ಶಾಸನಗಳಿಂದ ಅಲ್ಲಿಯ ಸಂಸ್ಕೃತಿ ಚರ್ಚಿಸಲು ಸಹಾಯಕವಾಗಿದೆ. ಹಾಗೂ ರಾಜಕೀಯ ಐತಿಹಾಸಿಕ, ತುಂಬಾ ಸಹಕಾರಿಯಾಗಿದೆ. ಕೆಲವು ಪ್ರಕಟಿತ, ಶಾಸನ ಮತ್ತು ಅಪ್ರಕಟಿತ ಶಾಸನಗಳು, ವೀರಗಲ್ಲು, ಮಹಾಸತಿಗಲ್ಲುಗಳ ಮೇಲೆ ಶಾಸನ ರಹಿತ ಶಿಲ್ಪಗಳು ಇರುವುದರಿಂದ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ರಾಜಕೀಯದ ಬಗ್ಗೆ ತಿಳಿಯಲು ಸಹಾಯಕವಾಗಿದೆ.

ನಾಲ್ಕನೇ ಅಧ್ಯಾಯದಲ್ಲಿ ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪದ ಭಾಗದಲ್ಲಿ ದೇವಾಲಯದ ಉಗಮ ವಿಕಾಸ, ಇಲ್ಲಿಯ ಶೈವ, ವೈಷ್ಣವ, ಶಾಕ್ತ, ಜೈನಬಸದಿ ದೇವಾಲಯಗಳೆಂದೂ ವಿಂಗಡನೆಯೊಂದಿಗೆ ವಿಶ್ಲೇಷಸಲಾಗಿದೆ.

ಐದನೇ ಅಧ್ಯಾಯವು ಸಮಾರೋಪವಾಗಿದ್ದು ಇದು ಇಡೀ ಅಧ್ಯಯದಲ್ಲಿ ಕಂಡುಕೊಂಡ ಒಟ್ಟಾರೆ ಸಂಶೋಧನೆಯ ಫಲಿತಾಂಶಗಳ ಸಂಕ್ಷಿಪ್ತ ರೂಪವನ್ನು ಒಳಗೊಂಡಿದೆ.

ಪ್ರಸ್ತುತ ಅಧ್ಯಯನಕ್ಕೆ ಬಳಸಿಕೊಂಡ ಕೃತಿ ಲೇಖನ, ಶಾಸನಸಂಪುಟ, ಅಪ್ರಕಟಿತ ಸಂಶೋಧನ ಪ್ರಬಂಧ ಮುಂತಾದ ವಿವರಗಳನ್ನು, ಗ್ರಂಥಋಣದಲ್ಲಿ ನೀಡಲಾಗಿದೆ. ಅಧ್ಯಯನಕ್ಕೆ ಸಂಬಂಧಿಸಿದ . ಛಾಯಾಚಿತ್ರಗಳು ಅಗತ್ಯ ನಕ್ಷೆಗಳನ್ನು ಅನುಬಂಧದಲ್ಲಿ ಅಳವಡಿಸಲಾಗಿದೆ.

ಅಧ್ಯಯನದ ವಿಧಾನ

ಒಂದು ಕಾರ್ಯ ಯಶಸ್ವಿಯಾಗಬೇಕಾದರೆ ಕ್ರಮಬದ್ಧತೆ ಅತೀ ಮುಖ್ಯ. ಹಾಗಾಗಿ ಸಂಶೋಧನಾ ಕಾರ್ಯಕ್ಕೂ ವ್ಯವಸ್ಥಿತ ಅಧ್ಯಯನ ಮುಖ್ಯ. ಅಧ್ಯಯನ ವಿಧಾನವು ವೈಜ್ಞಾನಿಕವಾದ ಮಾರ್ಗ, ಪ್ರಸ್ತುತ ಅಧ್ಯಯನ ವಿಧಾನವು ಬಹುತೇಕ ಕ್ಷೇತ್ರಕಾರ್ಯ ಆಧಾರಿತವಾಗಿದೆ. ಸಂಶೋಧನೆಗಾಗಿ ತೀರ್ಥಹಳ್ಳಿ ಪರಿಸರ ಆಯ್ದುಕೊಂಡಾಗ ಪಟ್ಟಣದ (ತಾಲ್ಲೂಕ್) ಮಾಹಿತಿ, ನಕಾಶೆ, ಇತರ ಮಾಹಿತಿಯನ್ನು ಪಡೆದು ಸ್ಮಾರಕ, ದೇವಾಲಯ, ಮೂರ್ತಿಶಿಲ್ಪ, ಶಾಸನ ಇತ್ಯಾದಿ ವಿವರ ಸಂಗ್ರಹಿಸಿಕೊಂಡು ಇವರೆಗಿನ ಅಧ್ಯಯನಗಳನ್ನು ಗಮನಿಸಿ ಅಧ್ಯಯನ ಮಾಡಲಾಗುವುದು. ಅಲ್ಲದೆ ಅವುಗಳ ಛಾಯಾಚಿತ್ರಗಳನ್ನು ತೆಗೆದುಕೊಳ್ಳುವುದರ ಮೂಲಕ ಜೊತೆಗೆ ಅಗತ್ಯ ನಕ್ಷೆಗಳನ್ನು, ರಚಿಸಿಕೊಳ್ಳಲಾಗುವುದು. ಕೇವಲ ಪರಿಸರವನ್ನು ಮಾತ್ರ ಕ್ಷೇತ್ರಕಾರ್ಯ ಕೈಗೊಂಡು ಪರಿಸರದಲ್ಲಿರುವಂತಹ

ಕುರುಹುಗಳನ್ನು ಪ್ರಾಗೈತಿಹಾಸ ಕಾಲದ ಮಾನವ ನೆಲೆಗಳನ್ನು ದಾಖಲಿಸಲಾಯಿತು. ಹೀಗೆ ಪಟ್ಟಣದ ಪರಿಸರದ ಭೌಗೋಳಿಕ, ಪ್ರಾಗೈತಿಹಾಸಿಕ, ಚಾರಿತ್ರಿಕ, ಪುರಾತತ್ವೀಯ ಸಾಂಸ್ಕೃತಿಕ ಅಂಶಗಳನ್ನು ಕ್ಷೇತ್ರಕಾರ್ಯದ ಮೂಲಕ ದಾಖಲಿಸಿಕೊಳ್ಳಲಾಗಿದೆ.

ಈ ಕ್ಷೇತ್ರಕಾರ್ಯದ ಮಾಹಿತಿಯಿಂದ ಸಂಶೋಧನೆ ಪರಿಪೂರ್ಣವಾಗಲಾರದು. ಇದಕ್ಕೆ ಪೂರಕವಾಗಿ ಅನುಷಂಗಿಕ ಆಕಾರಗಳು ಬೇಕು. ಕರ್ನಾಟಕದ ವಿವಿಧ ವಿಶ್ವವಿದ್ಯಾಲಯಗಳ ಗ್ರಂಥಾಲಯಕ್ಕೆ ಭೇಟಿ ಮಾಡಿ ಅನುಷಂಗಿಕ ಆಕಾರಗಳನ್ನು ಸಂಗ್ರಹಿಸಿ ಜೊತೆಗೆ ವಿದ್ವಾಂಸರನ್ನು ಭೇಟಿ ಮಾಡಿ ಮಾಹಿತಿ ಪಡೆದು ಪ್ರಾಥಮಿಕ ಅನುಷಂಗಿಕ ದತ್ತಾಂಶಗಳನ್ನು ವಿಮರ್ಶಿಸಿ ಕಿರುಪ್ರಬಂಧವನ್ನು ರಚಿಸಲಾಗಿದೆ.

ಅಧ್ಯಯನದ ಸಮೀಕ್ಷೆ

ತೀರ್ಥಹಳ್ಳಿ ಪರಿಸರದಲ್ಲಿ ಈವರೆಗೆ ಕೆಲವು ವಿದ್ವಾಂಸರು ಪುರಾತತ್ವ ಸಂಶೋಧನ ಕಾರ್ಯಗಳನ್ನು ಮಾಡಿದ್ದಾರೆ. ಈ ಭಾಗದಲ್ಲಿ ದೊರೆತ ಆಧಾರಗಳು ಎಂದರೆ ದೇವಾಲಯಗಳು, ಹಾಗೂ ಶಾಸನಗಳು. ಹಾಗಾಗಿ ಇಡೀ ಅಧ್ಯಯನವು ಕ್ಷೇತ್ರಕಾರ್ಯವನ್ನು ಆಧರಿಸಿ ತಯಾರಾಗಿದೆ.

ತೀರ್ಥಹಳ್ಳಿ ತಾಲ್ಲೂಕು ಪ್ರಾಚೀನತೆ, ರಾಜಕೀಯ ಚರಿತ್ರೆ, ಐತಿಹಾಸಿಕ ಸ್ಥಳಗಳ ಪರಿಚಯ ಮತ್ತು ಜನಪದ ಸಾಹಿತ್ಯ ಮುಂತಾದ ವಿಷಯಗಳನ್ನು ಕುರಿತಂತೆ ಕೆಲವು ಅಧ್ಯಯನಗಳು ನಡೆದಿದ್ದು ಕೆಲವು ಬಿಡಿ ರೇಖನ ಪರಿಚಯ ಕೈಪಿಡಿ, ಸ್ಮರಣ ಸಂಚಿಕೆಗಳು ಒಳಗೊಂಡಿವೆ.

* ಗೋಪಾಲ್ ಆರ್, ೨೦೦೮, ಶಿವಮೊಗ್ಗ ಜಿಲ್ಲೆ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು

ಈ ಪುಸ್ತಕದಲ್ಲಿ ಶಿವಮೊಗ್ಗ ಜಿಲ್ಲೆಗೆ ಸಂಬಂಧಿಸಿದ ಆಯ್ದ ವಿದ್ವಾಂಸರಿಂದ ಲೇಖನಗಳನ್ನು ಸಂಗ್ರಹಿಸಿ ಈ ಕೃತಿಯಲ್ಲಿ ಪ್ರಕಟಿಸಲಾಗಿದೆ. ಈ ಪುಸ್ತಕದಲ್ಲಿ ಮೃಗವಧೆ ಎಂಬ ಪ್ರಾಗೈತಿಹಾಸಿಕ ನೆಲೆಯ ಬಗ್ಗೆ ವಿವರಣೆ ನೀಡಿದೆ.

* ಚಂದ್ರಶೇಖರ್ ಟಿ.ದೇವಂಗಿ, ೧೯೮೬, ತೀರ್ಥಹಳ್ಳಿ ತಾಲ್ಲೂಕು ದರ್ಶನ, ಐಬಿಎಚ್ ಪ್ರಕಾಶನ, ಗಾಂಧಿನಗರ ಬೆಂಗಳೂರು.

ಈ ಪುಸ್ತಕದಲ್ಲಿ ತೀರ್ಥಹಳ್ಳಿ ಭೌಗೋಳಿಕ ಹಿನ್ನೆಲೆಯನ್ನು ಕುರಿತು ಬರೆಯಲಾಗಿದ್ದು ಮೃಗವಧೆಯಲ್ಲಿ ಕೆಳದಿ ನಾಯಕರ ಕಾಲದ ಪ್ರಸಿದ್ಧವಾದ ಶ್ರೀ ಮಲ್ಲಿಕಾರ್ಜುನ ಸ್ವಾಮಿ ದೇವಾಲಯವಿದೆ ಎಂದು ಉಲ್ಲೇಖವಿದೆ.

* ಶಿವತಾರಕ್ ಕೆ.ಬಿ, ೨೦೦೧, ಕರ್ನಾಟಕದ ಪುರಾತತ್ವ ನೆಲೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಈ ಕೃತಿಯಲ್ಲಿ ಕರ್ನಾಟಕದಲ್ಲಿ ಇಲ್ಲಿಯವರೆಗೂ ಅನ್ವೇಷಿಸಿದ ಪ್ರಾಗೈತಿಹಾಸಿಕ ನೆಲೆಗಳ ಬಗ್ಗೆ ಬಳಸಲಾಗಿದ್ದು ಅದರಲ್ಲಿ ತೀರ್ಥಹಳ್ಳಿ ತಾಲೂಕಿನ ಪ್ರಾಗೈತಿಹಾಸ ನೆಲೆಯ ಬಗ್ಗೆ ಮಾಹಿತಿ ನೀಡಲಾಗಿದೆ.

* ಮೃಗವಧೆ ಸೂರ್ಯನಾರಾಯಣ, ೧೯೯೭, "ಶ್ರೀ ಮೃಗವಧಾ ಕ್ಷೇತ್ರದ ಸಮಗ್ರ ಪರಿಚಯ",

ಈ ಪುಸ್ತಕದಲ್ಲಿ ಮೃಗವಧೆ ಪರಿಸರದ ಬಗ್ಗೆ ಮಾಹಿತಿ ನೀಡಲಾಗಿದ್ದು ಅಲ್ಲಿಯ ದೇವಾಲಯ ಶಾಸನಗಳು ಹಾಗೂ ಕೆಲವೊಂದು ವೈಶಿಷ್ಟ್ಯಗಳ ಬಗ್ಗೆ ಮಾಹಿತಿ ನೀಡಿದ್ದಾರೆ.

* ಎಫಿಗ್ರಾಫಿಯ ಕರ್ನಾಟಕ ಸಂಪುಟ ಹದಿಮೂರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ೨೦೦೬

ಇದರಲ್ಲಿ ತೀರ್ಥಹಳ್ಳಿ ತಾಲ್ಲೂಕಿಗೆ ಸಂಬಂಧಿಸಿದ ೨೨೪ ಶಾಸನಗಳು ಪ್ರಕಟಗೊಂಡಿವೆ ಇವುಗಳು ಪ್ರಸ್ತುತ ಪ್ರಬಂಧದ ರಚನೆಗೆ ಸಹಕಾರಿಯಾಗಿದೆ.

* ರಾಮಭಟ್ಟ ಬಿ.ಎಸ್, ೨೦೦೧, ಶಿವಮೊಗ್ಗ ಜಿಲ್ಲೆಯ ಇತಿಹಾಸ ಮತ್ತು ಸಂಸ್ಕೃತಿ, ರಾಷ್ಟ್ರೀಯ ಶಿಕ್ಷಣ ಸಮಿತಿ ಶಿವಮೊಗ್ಗ.

ಈ ಪುಸ್ತಕದಲ್ಲಿ ತೀರ್ಥಹಳ್ಳಿ ಪರಿಸರದ ದೇವಾಲಯಗಳು ಜೈನಬಸದಿಗಳ ಕುರಿತಾಗಿ ವಿವರಣೆ ಇದೆ.

* ಜಗನ್ನಾಥ ಶಾಸ್ತ್ರಿ ಕೆ, ೧೯೮೩, ಕೌಲೇದುರ್ಗ, ಐಬಿಎಚ್ ಪ್ರಕಾಶನ, ಗಾಂಧೀನಗರ, ಬೆಂಗಳೂರು

ಈ ಪುಸ್ತಕದಲ್ಲಿ ಕೌಲೇದುರ್ಗ ಕೋಟೆಯ ಬಗ್ಗೆ ಪರಿಪೂರ್ಣವಾದಂತಹ ವಿವರವಿದೆ.

* ವೆಂಕಟೇಶ್ ಜೋಯಿಸಾ ಕೆಳದಿ, ೨೦೦೬, ಮರೆಯಲಾಗದ ಕೆಳದಿ ಸಾಮ್ರಾಜ್ಯ, ಸರಸ್ವತಿ ಸೇವಾ ಸಮಿತಿ ಸಾಗರ.

ಈ ಪುಸ್ತಕದಲ್ಲಿ ಕೌಲೇದುರ್ಗಕೋಟೆ ಹಾಗೂ ತೀರ್ಥಹಳ್ಳಿಯ ರಾಮೇಶ್ವರ ದೇವಾಲಯದ ಬಗ್ಗೆ ಚರ್ಚಿಸಲಾಗಿದೆ. ಇದುವರೆಗಿನ ಅಧ್ಯಯನಗಳನ್ನು ಗಮನಿಸಿದರೆ ತೀರ್ಥಹಳ್ಳಿ ತಾಲ್ಲೂಕಿನ ರಾಜಕೀಯ ಚರಿತ್ರೆ, ಜನಪದ ಆಚರಣೆ, ಐತಿಹಾಸಿಕ ಸ್ಥಳದ ಪರಿಚಯಾತ್ಮಕ ಅಧ್ಯಯನಗಳು ನಡೆದಿವೆಯೇ ಹೊರತು ಇಡೀ ತೀರ್ಥಹಳ್ಳಿ ಪರಿಸರದ ವ್ಯವಸ್ಥಿತವಾದ ಚಾರಿತ್ರಿಕ ಅಧ್ಯಯನ ನಡೆದಿಲ್ಲವೆಂದೆ ಹೇಳಬಹುದು. ಆದುದರಿಂದ ಪ್ರಸ್ತುತ ಅಧ್ಯಯನ ಮುಖೇನ ತೀರ್ಥಹಳ್ಳಿ ಪರಿಸರದ ಚಾರಿತ್ರಿಕ, ಸಾಂಸ್ಕೃತಿಕ ಸಂಗತಿಗಳನ್ನು ವ್ಯವಸ್ಥಿತವಾಗಿ ಕಟ್ಟಿಕೊಡುವ ಪ್ರಯತ್ನವನ್ನು ಈ ಅಧ್ಯಯನದಲ್ಲಿ ಮಾಡಲಾಗಿದೆ.

ಅಧ್ಯಾಯ–ಎರಡು

ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೆಲೆ

೨.೧. ಭೌಗೋಳಿಕತೆ

೨.೨. ಐತಿಹ್ಯ–ಸ್ಥಳ ಪುರಾಣ–ಸ್ಥಳನಾಮ

೨.೩. ಚಾರಿತ್ರಿಕ ಹಿನ್ನಲೆ

೨.೩.೧. ಪ್ರಾಗಿತಿಹಾಸ ಕಾಲ

೨.೩.೨. ಇತಿಹಾಸ ಕಾಲ

ಅಧ್ಯಾಯ-ಎರಡು

ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೆಲೆ

ಪ್ರಸ್ತಾವನೆ

ಜಗತ್ತಿನ ಬಹುತೇಕ ನಾಗರೀಕತೆಗಳು ಉಗಮವಾಗುವುದು ನದಿ ಬಯಲಿನಲ್ಲಿ ಹಾಗೂ ಉತ್ತಮ ಹವಾಗುಣವಿರುವ ಪರಿಸರದಲ್ಲಿಯೇ ಆದ ಕಾರಣ ಇತಿಹಾಸ ಮತ್ತು ಭೂಗೋಳ ಅವಿನಾಭಾವ ಸಂಬಂಧವಿದೆ. ಸಹಜವಾಗಿ ಮಾನವನು ಅನಾದಿ ಕಾಲದಿಂದಲೂ ನೀರಿನ ಸೌಲಭ್ಯವಿರುವ ಕಡೆ ವಾಸಿಸುತ್ತಾ ಬಂದಿದ್ದಾನೆ. ಫಲವತ್ತಾದ ಮಣ್ಣು ಈ ಪ್ರದೇಶಗಳಲ್ಲಿ ಸಿಗುವುದರಿಂದ ಕೃಷಿಗೆ ಯೋಗ್ಯ ಭೂಮಿ ದೊರೆತು ಜನಜೀವನವನ್ನು ಉತ್ತಮಪಡಿಸಿಕೊಳ್ಳಲು ಹಾಗೂ ನಾಗರೀಕತೆ, ಸಂಸ್ಕೃತಿ, ಕಲೆ ಮತ್ತು ಸಾಹಿತ್ಯದ ಅಭಿವೃದ್ಧಿಗೆ ಸಹಕಾರಿಯಾಗುತ್ತದೆ. ಪ್ರಾಕೃತಿಕವಾಗಿ ಸುಭದ್ರವಾದ ಕಡೆ ಮಾನವ ವಾಸಿಸುತ್ತಿದ್ದರೆ ಆ ಪ್ರಕೃತಿಯೇ ಆತನಿಗೆ ರಕ್ಷಣೆಯಾಗಿ ನಿಲ್ಲುತ್ತದೆ.

೨.೧.ಭೌಗೋಳಿಕತೆ

ಕರ್ನಾಟಕ ವಿಭಿನ್ನ ರೀತಿಯ ಭೌಗೋಳಿಕ ಅಂಶಗಳನ್ನೊಳಗೊಂಡ ಪ್ರದೇಶ. ಇದರಲ್ಲಿ ನಿಸರ್ಗದ ವಿಶೇಷ ಭೌತಿಕ ಲಕ್ಷಣಗಳನ್ನು ಪಡೆದು ಶಿವಮೊಗ್ಗ ಜಿಲ್ಲೆಯಿಂದ ಉತ್ತರಕ್ಕೆ ೬೦ ಕಿ.ಮಿ ದೂರದಲ್ಲಿರುವ ತಾಲ್ಲೂಕು ಆಡಳಿತ ಕೇಂದ್ರ ಸ್ಥಳವೇ ತೀರ್ಥಹಳ್ಳಿ. ಶಿವಮೊಗ್ಗ ಜಿಲ್ಲೆ ಮತ್ತು ತೀರ್ಥಹಳ್ಳಿಯ ಸುತ್ತಮುತ್ತಲಿನ ಪ್ರದೇಶವು ಪ್ರಾಗಿತಿಹಾಸ ಕಾಲದಿಂದಲೆ ಜನ ವಸತಿ ಬೆಳೆದು, ನಂತರ ವಿವಿಧ ರಾಜಮನೆತನಗಳ ಆಳ್ವಿಕೆಯಿಂದ ಇದೊಂದು ಸಾಂಸ್ಕೃತಿಕ ಕೇಂದ್ರವಾಗಿ ನೆಲೆಗೊಳ್ಳಲು ಇಲ್ಲಿನ ಭೌಗೋಳಿಕ ಪರಿಸರವೇ ಪೂರಕ ಅಂಶವಾಗಿ ಕಾಣುತ್ತದೆ.

* **ವಿಸ್ತೀರ್ಣ:**

ತೀರ್ಥಹಳ್ಳಿ ೧೫೨ ಗ್ರಾಮಗಳನ್ನೊಳಗೊಂಡು ೭೬೪೧೦ ಹೆಕ್ಟೇರ್ ವಿಸ್ತೀರ್ಣ ಹೊಂದಿದೆ. ಶಿವಮೊಗ್ಗ ಜಿಲ್ಲೆಯಲ್ಲಿ ಸೊರಬ, ಸಾಗರ, ಶಿಕಾರಿಪುರ, ಶಿವಮೊಗ್ಗ, ತೀರ್ಥಹಳ್ಳಿ, ಹೊಸನಗರ

ಮತ್ತು ಭದ್ರಾವತಿ ತಾಲ್ಲೂಕುಗಳು ಸೇರಿವೆ. ತೀರ್ಥಹಳ್ಳಿ ಅಕ್ಷಾಂಶ ೭೫.೩೨° ಮತ್ತು ರೇಖಾಂಶ ೧೩.೬೨°ರ ಮಧ್ಯದಲ್ಲಿದೆ.

*** ಮೇಲ್ಮೈ ಲಕ್ಷಣ**

ಶಿವಮೊಗ್ಗ ಜಿಲ್ಲೆಯ ಮೇಲ್ಮೈ ಲಕ್ಷಣದಲ್ಲಿ ಪೂರ್ವಭಾಗ ಸಮತಟ್ಟಾಗಿದ್ದು ಕಪ್ಪು ಮತ್ತು ಕೆಂಪು ಮಣ್ಣಿನಿಂದ ಕೂಡಿದೆ. ಪಶ್ಚಿಮ ಭಾಗದ ತೀರ್ಥಹಳ್ಳಿ ತಾಲ್ಲೂಕು ಉಬ್ಬು ತಗ್ಗುಗಳಿಂದ ಸಹ್ಯಾದ್ರಿ ಪರ್ವತಗಳಿಂದ ಆವೃತ್ತವಾಗಿದೆ. ತೀರ್ಥಹಳ್ಳಿ ಸಾಗರ ಮತ್ತು ಹೊಸನಗರ ಕಪ್ಪು ಮಣ್ಣಿನ ಪ್ರದೇಶಗಳಾಗಿವೆ. ಭದ್ರಾವತಿಯ ಪಶ್ಚಿಮ ಭಾಗ ಮತ್ತು ಶಿಕಾರಿಪುರ ಭಾಗಗಳು ಮರಳು ಮಿಶ್ರಿತ ಕೆಂಪು ಮಣ್ಣಿನಿಂದ ಆವೃತ್ತವಾಗಿವೆ. ತೀರ್ಥಹಳ್ಳಿ ತಾಲ್ಲೂಕು ಒಟ್ಟಾರೆ ಶೇ.೮೫ರಷ್ಟು ಕಪ್ಪು ಮಣ್ಣು ಮತ್ತು ಶೇ.೧೫% ಮಧ್ಯದ್ದು ಕಪ್ಪು ಮಣ್ಣಿನಿಂದ ಕೂಡಿದೆ.

*** ಬೆಟ್ಟಗುಡ್ಡ**

ತೀರ್ಥಹಳ್ಳಿ ಪರಿಸರವನ್ನು ಮಲೆನಾಡು ಪ್ರದೇಶ ಎಂದು ಕರೆಯುವುದುಂಟು. ಪಶ್ಚಿಮ ಭಾಗದಲ್ಲಿ ಹರಡಿರುವ ಗುಡ್ಡಗಳು ಅಗ್ನಿಶಿಲೆ, ಅಲ್ಲಲ್ಲಿ ಜಂಬಿಟ್ಟಿಗೆ ಕಲ್ಲುಗಳಿಂದ ಕೂಡಿವೆ. ಕೊಡಚಾದ್ರಿ ಮತ್ತು ಕುಂದಾದ್ರಿ ಎಂಬ ಎತ್ತರವಾದ ಎರಡು ಬೆಟ್ಟಗಳಿದ್ದು, ಕ್ರಮವಾಗಿ ೬೭೮ಮೀ ಮತ್ತು ೮೩೧ಮೀ. ಎತ್ತರವಾಗಿದೆ. ಪಶ್ಚಿಮ ದಿಕ್ಕಿನಲ್ಲಿ ಸಹ್ಯಾದ್ರಿ ಪರ್ವತ ಶ್ರೇಣಿ ಹಾಗೂ ಮಧ್ಯ ಮತ್ತು ಪೂರ್ವ ದಿಕ್ಕಿನಲ್ಲಿ ಚಿಕ್ಕದಾದ ಬೆಟ್ಟಗುಡ್ಡಗಳಿವೆ.

*** ಅರಣ್ಯ ಸಂಪತ್ತು**

ಶಿವಮೊಗ್ಗ ಜಿಲ್ಲೆಯಲ್ಲಿ ನಿಸರ್ಗದತ್ತವಾದ ಅರಣ್ಯ ಸಂಪತ್ತನ್ನು ತೀರ್ಥಹಳ್ಳಿ, ಹೊಸನಗರ, ಸಾಗರ ತಾಲೂಕುಗಳಲ್ಲಿ ಕಾಣುತ್ತೇವೆ. ಎಲೆ ಉದುರುವ ವೃಕ್ಷಗಳು, ನಿತ್ಯಹರಿದ್ವರ್ಣ, ಅರೆಹರಿದ್ವರ್ಣ, ಕುರುಚಲು ಗಿಡಗಳು ಅಲ್ಲಲ್ಲಿ ಹರಡಿವೆ. ದಟ್ಟವಾದ ಕಾಡುಗಳಲ್ಲಿ ತೇಗ, ಶ್ರೀಗಂಧ, ಹಲಸು, ಆಲ, ಬೀಟೆ, ಶಿವನಿ, ಹೊನ್ನೆ, ಮಾವು, ಹುಣಸೆ, ಬಿದಿರು, ನೇರಳೆ, ಹಾಗೂ ಸಾಗುವಾನಿ ಈ ಅರಣ್ಯ ಪ್ರದೇಶದಲ್ಲಿದೆ.

ಕಾಡು ಪ್ರಾಣಿಗಳಾದ ಕಾಡುಕೋಣ, ಚಿರತೆ, ಜಿಂಕೆ, ಕಾಡುಹಂದಿ, ಕಾಡುಬೆಕ್ಕು, ಸಾರಂಗ ಮೊದಲಾದವು ವಿಶೇಷವಾಗಿ ದಟ್ಟವಾದ ಅರಣ್ಯದಲ್ಲಿವೆ. ಈಗ ತೀರ್ಥಹಳ್ಳಿ ತಾಲೂಕಿನಲ್ಲಿ ಒಟ್ಟು ೮೩೭ ಹೆಕ್ಟೇರ್ ಅರಣ್ಯ ಪ್ರದೇಶವಿದೆ.

*** ಖನಿಜ ಸಂಪನ್ಮೂಲ**

ಶಿವಮೊಗ್ಗ ಜಿಲ್ಲೆಯ ಆರ್ಥಿಕ ರಂಗದ ಮೇಲೆ ಮಹತ್ತರವಾದ ಪ್ರಭಾವ ಬೀರುವ ಮತ್ತು ಲಾಭ ತರಬಹುದಾದ ಮುಖ್ಯ ಖನಿಜಗಳು ಈ ಪರಿಸರದಲ್ಲಿ ಹೇರಳವಾಗಿವೆ. ವಿವಿಧ ಖನಿಜಗಳಾದ ಕಬ್ಬಿಣ, ಮ್ಯಾಂಗನೀಸ್, ಸುಣ್ಣದಕಲ್ಲು, ಬೆಣಚುಗಲ್ಲು, ಬಳಪದ ಕಲ್ಲು, ಮುಂತಾದವುಗಳು ಇಲ್ಲಿ ದೊರೆಯುತ್ತವೆ. ಲಿಮೋನೊಟಿಕ್ ಖನಿಜಗಳು ಶಂಕರಗುಡ್ಡ ಮತ್ತು

ಚಟ್ಟನಹಳ್ಳಿ ಸುತ್ತಮುತ್ತ ಹಾಗೂ ಆಗುಂಬೆ ಬೆಟ್ಟದಲ್ಲಿ ದೊರೆಯುತ್ತವೆ. ಇತ್ತೀಚಿಗೆ ಕಬ್ಬಿಣದ ನೆಲೆಗಳನ್ನು ಸಹ್ಯಾದ್ರಿ ಪರ್ವತ ಶ್ರೇಣಿಯ ಮಟ್ಟಿಮನೆ, ಕೊಡಚಾದ್ರಿ, ಅಂಬಾರ ಗುಡ್ಡದ ಪ್ರದೇಶಗಳಲ್ಲಿ ಶೋಧಿಸಲಾಗಿದೆ.

*** ಜಲಸಂಪನ್ಮೂಲ**

ಈ ಜಿಲ್ಲೆಯ ನದಿ ಹಾಗೂ ಸಣ್ಣ ಪುಟ್ಟ ಹಳ್ಳಿಗಳೇ ಜಲಸಂಪನ್ಮೂಲಗಳಾಗಿವೆ. ತುಂಗಾಭದ್ರಾ, ವರದಾ, ಕುಮುದ್ವತಿ, ಶರಾವತಿ, ನದಿಗಳ ಬಯಲು ಪ್ರದೇಶದಲ್ಲಿ ವಾಸಮಾಡುವ ಜನರ ಬದುಕಿನ ಮೇಲೆ ಮಹತ್ತರ ಪ್ರಭಾವ ಬೀರಿದೆ. ಪ್ರಾಚೀನ ಕಾಲದಿಂದಲೇ ಪ್ರಮುಖ ನಾಗರೀಕತೆಗಳು ನದಿ ತೀರ ಪ್ರದೇಶದಲ್ಲಿ ಬೆಳೆದು ಬಂದಿರುವುದನ್ನು ಸ್ಮರಿಸಬಹುದು.

ಸಹ್ಯಾದ್ರಿ ಪರ್ವತ ಶ್ರೇಣಿಯಲ್ಲಿ ಉಗಮವಾಗುವ ನದಿಗಳು ಈ ಪ್ರದೇಶದ ಜೀವನಾಡಿ, ತುಂಗಾ ಮತ್ತು ಭದ್ರಾ ನದಿಗಳು ಕೂಡಲಿಯಲ್ಲಿ ಸಂಗಮವಾಗಿ ತುಂಗಾಭದ್ರಾ ಎಂಬ ಹೆಸರಿನಿಂದ ಸಾಗುತ್ತಾ ಕುಮುದ್ವತಿ ಮತ್ತು ವರದಾ ನದಿಗಳನ್ನೊಳಗೊಂಡು ಉತ್ತರ ಮತ್ತು ಈಶಾನ್ಯಾಭಿಮುಖವಾಗಿ ಪ್ರವಹಿಸುತ್ತದೆ. ಶರಾವತಿಯು ವಾಯುವ್ಯ ದಿಕ್ಕಿಗೆ ಸಾಗಿ ಹೊನ್ನಾವರದ ಹತ್ತಿರ ಅರಬ್ಬಿ ಸಮುದ್ರದಲ್ಲಿ ವಿಲೀನಗೊಳ್ಳುತ್ತದೆ. ಈ ಜಿಲ್ಲೆಯು ಹೇರಳವಾಗಿ ಮಳೆ ಬೀಳುವ ಪ್ರದೇಶವಾಗಿದ್ದು, ಪಶ್ಚಿಮ ಘಟ್ಟದ ಆಗುಂಬೆ ಅತೀ ಹೆಚ್ಚು ಮಳೆ ಬೀಳುವ ಕ್ಷೇತ್ರ.

*** ಮಳೆ ಮತ್ತು ಹವಾಮಾನ**

ತೀರ್ಥಹಳ್ಳಿ ತಾಲೂಕು ಪಶ್ಚಿಮ ಭಾಗ ಕಿರುಗುಡ್ಡ ಮತ್ತು ಕಾಡುಗಳಿಂದ ಆವೃತ್ತವಾದ ಸಾಗರ ಮತ್ತು ತೀರ್ಥಹಳ್ಳಿ ತಾಲೂಕುಗಳಲ್ಲಿ ಮಳೆಯ ಪ್ರಮಾಣ ಉಳಿದ ತಾಲೂಕುಗಳಿಂಗಿತಲೂ ಅಧಿಕವಾಗಿ ಕಂಡುಬರುತ್ತದೆ. ಆದ್ದರಿಂದ ಇದನ್ನು ಮಲೆನಾಡು ಪ್ರದೇಶವೆಂದೂ ಕರೆಯಲಾಗಿದೆ. ಕಳೆದ ೫೦ ವರ್ಷಗಳಿಂದ ಈ ಜಿಲ್ಲೆಯಲ್ಲಿ ಅತೀ ಹೆಚ್ಚು ಮಳೆಬೀಳುವ ತಾಲ್ಲೂಕುಗಳಲ್ಲಿ ತೀರ್ಥಹಳ್ಳಿ ಪ್ರಥಮ ಸಾಗರ ದ್ವಿತೀಯ ಸ್ಥಾನದಲ್ಲಿನ ವಾರ್ಷಿಕ ಸರಾಸರಿ ೯೩೩.೪ ಮೀ.ಮೀ ಮಳೆಯಾಗುತ್ತದೆ

ಈ ಪ್ರದೇಶದಲ್ಲಿ ಮೇ ತಿಂಗಳಿಂದ ಅಕ್ಟೋಬರ್‌ವರೆಗೆ ಮಳೆಬೀಳುವ ಸಮಯದಾದರೆ, ನವೆಂಬರ್, ಡಿಸೆಂಬರ್ ಮತ್ತು ಜನವರಿ ತಿಂಗಳುಗಳಲ್ಲಿ ವಾತಾವರಣ ಚಳಿಯಿಂದ ಕೂಡಿರುತ್ತದೆ. ಶಿವಮೊಗ್ಗ ಜಿಲ್ಲೆಯ ಉಳಿದ ತಾಲೂಕುಗಳಿಂಗಿತಲೂ ತಂಪಾದ ಹಿತಕರವಾದ ಹವಾಗುಣ ಹೊಂದಿದ ಪ್ರದೇಶವಾಗಿದೆ.

*** ಕೃಷಿ**

ಈ ಪ್ರದೇಶದ ಜನರ ಮುಖ್ಯ ಉದ್ಯೋಗ ಕೃಷಿ (ವ್ಯವಸಾಯ), ಈ ಜಿಲ್ಲೆಯು ಮಲೆನಾಡು ಪ್ರದೇಶವಾಗಿದ್ದರಿಂದ ಹೆಚ್ಚಾಗಿ ಮಳೆಯನ್ನಾಧರಿಸಿ ಭತ್ತ, ರಾಗಿ, ಕಬ್ಬು, ಅಡಿಕೆ, ಶುಂಠಿ, ಬಾಳೆ ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ. ಜಿಲ್ಲೆಯ ಪೂರ್ವ ಮತ್ತು ದಕ್ಷಿಣ

ಭಾಗದಲ್ಲಿ ಜೋಳ, ಮೆಕ್ಕೆಜೋಳ ಬೆಳೆಯುತ್ತಾರೆ. ಒಟ್ಟಾರೆ ತೀರ್ಥಹಳ್ಳಿ ಪ್ರದೇಶ ೩೭೦೫ ಹೆಕ್ಟೇರ್ ತೋಟಗಾರಿಕೆ ಬೆಳೆಯ ವಿಸ್ತಾರತೆ ಪಡೆದಿದೆ.

೨.೨. ಐತಿಹ್ಯಗಳು–ಸ್ಥಳಪುರಾಣ–ಸ್ಥಳನಾಮ

ಅಲೆಮಾರಿ ಜೀವನದಿಂದ ಆರಂಭವಾದ ಮಾನವನ ಬದುಕು ಕ್ರಮೇಣ ಒಂದೆಡೆ ನಿಲ್ಲುವಂತಾಯಿತು. ಅಲೆಮಾರಿತನವನ್ನು ತೊರೆದು ಒಂದೆಡೆ ನೆಲೆಸುವಿಕೆಯು ಗ್ರಾಮ ಕಲ್ಪನೆಯ ಪೂರ್ವ ಸ್ಥಿತಿಯೆಂದೂ ತಿಳಿಯಲಾಗಿದೆ. ಅದರಂತೆ ಆಯಾ ಭೌಗೋಳಿಕ ಪರಿಸರದಲ್ಲಿ ವಾಸಿಸುತ್ತಿದ್ದಗುಂಪುಗಳ ವಸತಿ ಆರಂಭವಾಯಿತು. ಈ ನೆಲೆಗಳಿಗೆ ಗುರುತು ಹೇಳುವ ಸಲುವಾಗಿ ಒಂದು ಹೆಸರಿನ ಅಗತ್ಯ ತೋರಿಬಂದಿತು. ಈ ಅಗತ್ಯವೇ ಆಯಾ ನೆಲೆಗಳಿಗೆ ಹೆಸರಿಸುವ ಗ್ರಾಮ ಸ್ಥಳನಾಮಗಳ ಕುರುಹು ಎನ್ನಬಹುದು. ಆಯಾ ಪ್ರಾದೇಶಿಕ ಮಟ್ಟದಲ್ಲಿ ನೆಲೆಸುವ ಸಮುದಾಯಗಳು ಆರಂಭದಲ್ಲಿ ಪ್ರಾಕೃತಿಕ ಚಹರೆಯೊಂದಿಗೆ ತಮ್ಮ ನೆಲೆಗಳಿಗೆ ಹೆಸರನ್ನಿಟ್ಟುಕೊಂಡರು ಬೆಟ್ಟ, ಗುಡ್ಡ, ಗಿಡ, ಮರ, ಕಲ್ಲು, ಮಣ್ಣು, ಇವುಗಳ ಗಾಢ ಸಂಬಂಧವು ಹೆಸರುಗಳಿಗೆ ಪ್ರೇರೇಪಿಸಿರಬೇಕು.

ಪ್ರಾಚೀನ ಕಾಲದಿಂದ ಜನವಸತಿ ಬೆಳೆದುಬಂದಿದ್ದು ಬೆಟ್ಟ, ಅಂಚಿನ ದಿನ್ನೆ ಪ್ರದೇಶ ಮತ್ತು ತಮಗೆ ಅಗತ್ಯವಾಗಿ ಬೇಕಾದಂತಹ ನೀರಿನ ಅನುಕೂಲತೆ ಇರುವಲ್ಲಿ, ಜಗತ್ತಿನ ಬಹುತೇಕ ಪ್ರಾಚೀನ ನಾಗರೀಕತೆಗಳು ಆರಂಭವಾಗಿದ್ದು ನದಿಯ ದಂಡೆಯ ಮೇಲೆ ಎಂಬುದನ್ನು ಗಮನಿಸಿದರೆ ಸಮುದಾಯಗಳ ನೆಲೆಸುವಿಕೆಯ ಆಯ್ಕೆಯು ಸ್ಪಷ್ಟವಾಗಿ ಗೋಚರಿಸುತ್ತದೆ. ತಮ್ಮ ವೃತ್ತಿಯೊಂದಿಗೆ ವಾಸದ ನೆಲೆಗಳನ್ನು ಸಮುದಾಯಗಳು ಅಲ್ಲಿಯೇ ನಿರ್ಮಿಸಿಕೊಂಡರು ಈ ಕಾರಣದಿಂದಾಗಿ ಪ್ರಕೃತಿಯ ಗಾಢವಾದ ಸಂಬಂಧದೊಂದಿಗೆ ತಳುಕು ಹಾಕಿಕೊಂಡ ಮಾನವರು ಆರಂಭಿಕ ಹಂತದಲ್ಲಿ ಪ್ರಕೃತಿ ನಿಷ್ಠ ಗ್ರಾಮನಾಮಗಳ ಉದಯಕ್ಕೆ ನಾಂದಿಯಾಯಿತು. ಹೀಗೆ ಗ್ರಾಮ ಸಮಾಜಗಳು ಆರಂಭಗೊಂಡವು.

ಇತಿಹಾಸ ಮತ್ತು ಸಂಸ್ಕೃತಿಯನ್ನು ಕುರಿತ ಆಳವಾದ ಅಧ್ಯಯನವೆಂದರೆ ಅದು ಸ್ಥಳನಾಮ ಅಧ್ಯಯನ ಎಂದು ಹೇಳಿದರೆ ತಪ್ಪಾಗಲಾರದು. ಆಯಾಯ ಕಾಲಘಟ್ಟದಲ್ಲಿ ಹೆಸರಿಸಲ್ಪಟ್ಟ ಗ್ರಾಮನಾಮಗಳಿಂದ ಆ ಸ್ಥಳಗಳ ಸಾಂಸ್ಕೃತಿಕ ಮತ್ತು ಚಾರಿತ್ರಿಕ ಅಧ್ಯಯನಕ್ಕೆ ಆಕರವಾಗುವುದರಲ್ಲಿ ಸಂಶಯವಿಲ್ಲ. ಈ ಹಿನ್ನಲೆಯಲ್ಲಿ ಸ್ಥಳನಾಮಗಳ ಚಾರಿತ್ರಿಕ ಅಧ್ಯಯನ ಅವಶ್ಯಕವಾಗಿದೆ. ಸೂಕ್ಷ್ಮವಾಗಿ ವಿಮರ್ಶಿಸಿದಷ್ಟು ಹಿಂದೆ ಆಗಿಹೋದ ಅನೇಕ ಪ್ರಾಚೀನ ಐತಿಹಾಸಿಕ ಘಟನೆಗಳಿಗೆ ಶಾಸನದಲ್ಲಿ ದೊರೆಯದ ಆಧಾರಗಳು ಸ್ಥಳ ನಾಮದಲ್ಲಿ ಸಿಕ್ಕುತ್ತಿದೆ.

ಐತಿಹ್ಯಗಳು

ನಿರ್ದಿಷ್ಟ ಸ್ಥಳವೊಂದಕ್ಕೆ ಸಂಬಂಧಿಸಿದ ಪರಂಪರಾಗತ ನಂಬಿಕೆಗಳೇ ಐತಿಹ್ಯ ವಾಸ್ತವ ಸಂಗತಿಯೊಂದರ ಆಚಾರದಿಂದ ಕಲ್ಪನಾ ವಿವರಗಳನ್ನು ಬೆಳೆಸಿಕೊಳ್ಳುತ್ತಾ ತಲೆತಲಾಂತರದಿಂದ ನಂಬಿಕೊಂಡ ಸಂಗತಿಯಾಗಿದೆ.

ಕಿಟಲ್ ನಿಘಂಟಿನಲ್ಲಿ Oral tradition a legend ಎಂಬುದನ್ನು ಸಮಾನಾರ್ಥಕವಾಗಿ ಬಳಸಿದಲ್ಲದೆ, ಕನ್ನಡದಲ್ಲಿ ಅದಕ್ಕೆ ಐತಿಹ್ಯ ಎಂಬ ಪದವನ್ನು ಗುರುತಿಸಲಾಗಿದೆ. ಐತಿಹ್ಯಗಳು ಪುರಾತನವಾದ ಐತಿಹಾಸಿಕ ಘಟನೆಗಳ ಪುರಾವೆಗಳು ಎಂದು ಕಂಡು ಬಂದರೂ ಪೌರಾಣಿಕ ಮತ್ತು ಕಾಲ್ಪನಿಕ ಅಂಶಗಳ ಕಡೆ ಇವು ತಮ್ಮ ಬೆಳಕು ಚೆಲ್ಲುತ್ತವೆ.

ಸ್ವರೂಪದಲ್ಲಿ ಐತಿಹ್ಯಗಳು ಚಿಕ್ಕದಾಗಿ ತೋರಿದರೂ ಅನೇಕ ವಿವರಣಾತ್ಮಕ ಸಂಗತಿಗಳನ್ನು ತಮ್ಮ ಗರ್ಭದಲ್ಲಿ ಅಡಗಿಸಿಕೊಂಡಿವೆ. ಕೆಲವು ಐತಿಹ್ಯಗಳು ಗದ್ಯಾತ್ಮಕವಾಗಿಯೂ ಒಂದು ಅಥವಾ ಎರಡು ಆಶಯಗಳ ವ್ಯಾಪ್ತಿಯನ್ನಷ್ಟೇ ಪಡೆದಿರುತ್ತದೆ. ಇಂತಹ ಐತಿಹ್ಯಗಳು ಒಂದು ಘಟನೆ, ವ್ಯಕ್ತಿಯ ಸವಿವರವಾದ ಕತೆಯಾಗಿರುತ್ತದೆ. ಯಾವುದೇ ಐತಿಹ್ಯಗಳು ಆ ಭೌಗೋಳಿಕತೆಗೆ ಹೆಚ್ಚು ಹೊಂದಿಕೊಂಡಿರುವುದು ಕಂಡುಬರುತ್ತದೆ.

ತೀರ್ಥಹಳ್ಳಿ ಕ್ಷೇತ್ರದ ಸ್ಥಳ ಪುರಾಣ

ತೀರ್ಥಹಳ್ಳಿಗೆ ಮೊದಲು ತೀರ್ಥರಾಜಪುರ ಎಂಬ ಹೆಸರಿತ್ತು. ಪೌರಾಣಿಕ ಹಿನ್ನಲೆಯಿಂದ ಇಲ್ಲಿನ ಹೆಸರಿನ ಹಿಂದಿನ ಐತಿಹ್ಯವೆಂದರೆ ಪರಶುರಾಮ ಲೋಕಕಂಠಕರನ್ನು ತನ್ನ ಪರಶುವಿನಿಂದ ಸಂಹರಿಸಿ ತನ್ನ ಪೂರ್ವಜರಿಗೆ ಸದ್ಗತಿ ತರಲೆಂದು ಸ್ನಾನಮಾಡಿ ತೀಲತರ್ಪಣ ಇಲ್ಲಿಯ ತುಂಗಾ ನದಿಯಲ್ಲಿ ನೀಡಿದ್ದರಿಂದ ಶ್ರೇಷ್ಠ ತೀರ್ಥಾವಳಿಯಾಗಿ ಕ್ರಮೇಣ ತೀರ್ಥಹಳ್ಳಿ ಎಂದು ಹೆಸರಾಗಿದೆ.

ತೀರ್ಥಹಳ್ಳಿಯಲ್ಲಿ ಕಂಡುಬರುವ ಕೆಲವೊಂದು ಪ್ರದೇಶಗಳ ಐತಿಹ್ಯಗಳು

* **ಆರಗ**

ಮಹಾಭಾರತದಲ್ಲಿ ಬರುವ ವರಣಾವತದ ಲಾಕ್ಷಗೃಹ ಇದೇ ಊರಿನಲ್ಲಿತ್ತು ದುರ್ಯೋಧನ ಪಾಂಡವರನ್ನು ಅರಗಿನ ಮನೆಯಲ್ಲಿ ಭಸ್ಮ ಮಾಡುವ ಕುತಂತ್ರ ಮಾಡಿ ನಿರ್ಮಿಸಿದ ಲಾಕ್ಷಗೃಹ ಈ ಆರಗದಲ್ಲಿಯೇ ಇತ್ತು. ಅರಗಿನ ಮನೆ (ಆರಗ) ಅಂದರೆ ಮೇಣದ ಮನೆ ಆ ಹೆಸರೇ ಈ ಊರಿಗೆ ಆರಗ ಎಂಬ ಹೆಸರಾಗಿದೆ.

* **ಭೀಮನಕಟ್ಟೆ**

ಪಾಂಡವರು ವನವಾಸದ ಸಮಯದಲ್ಲಿ ತೀರ್ಥಹಳ್ಳಿಯ ತುಂಗಾ ನದಿಯ ಹತ್ತಿರ ಸ್ವಲ್ಪ ಕಾಲ ವಾಸವಾಗಿದ್ದರು. ದಿನನಿತ್ಯದ ಬಳಕೆಗಾಗಿ ತುಂಗಾ ನದಿ ನೀರನ್ನು ಬಳಸುತ್ತಿದ್ದರು. ಕ್ರಮೇಣ ನೀರು ಕಡಿಮೆಯಾಗುತ್ತದೆ ಎಂಬ ಸುದ್ದಿಯನ್ನು ತಿಳಿದು ತುಂಗಾನದಿಗೆ ಕಟ್ಟೆಯನ್ನು ನಿರ್ಮಿಸಿದರು. ಭೀಮ ನಿರ್ಮಿಸಿದ ಕಟ್ಟೆಯಾದ್ದರಿಂದ ಭೀಮನಕಟ್ಟೆ ಎಂದು ಕರೆಯುತ್ತಾರೆ. ಇಲ್ಲಿ ಈಗಲೂ ಭೀಮೇಶ್ವರ ದೇವರಿಗೆ ಪೂಜೆ ನಡೆಯುತ್ತದೆ.

* **ಮೃಗವಧೆ**

ರಾಮಾಯಣದಲ್ಲಿ ಕಂಡುಬರುವಂತಹ ಒಂದು ಘಟನೆಯಾಗಿದೆ. ರಾಮ, ಸೀತೆ, ಲಕ್ಷ್ಮಣ ವನವಾಸದಲ್ಲಿದ್ದಾಗ ಮಾಯಾ ಜಿಂಕೆಯನ್ನು (ಮಾರಿಚ) ರಾಮನು ತೀರ್ಥಹಳ್ಳಿ ಈ ಪ್ರದೇಶದಲ್ಲಿ ವಧೇ ಮಾಡಿದ್ದರಿಂದಾಗಿ ಈ ಸ್ಥಳಕ್ಕೆ ಮೃಗವಧೆ ಎಂಬ ಹೆಸರು ಬಂದಿದೆ.

*** ದೂರ್ವಾಸಪುರ**

ಈ ಪ್ರದೇಶವು ತುಂಗಾ ಮತ್ತು ಮಾಲತಿ ನದಿ ಸಂಗಮ ತೀರದಲ್ಲಿದೆ. ಮಹಾನ್ ಕೋಪಿಷ್ಟ ಬ್ರಹ್ಮರ್ಷಿ ದೂರ್ವಾಸಮುನಿ ಈ ತುಂಗಾನದಿಯ ತೀರದಲ್ಲಿ ತಪಸ್ಸು ಮಾಡಿದ್ದರಿಂದ ಇದಕ್ಕೆ ದೂರ್ವಾಸಪುರ ಎಂಬಾ ಹೆಸರು ಬಂದಿದೆ.

ಸ್ಥಳನಾಮಗಳ ವರ್ಗೀಕರಣ

೧. ಪ್ರಾಕೃತಿಕ ಸ್ಥಳನಾಮ

೨. ಸಾಂಸ್ಕೃತಿಕ ಸ್ಥಳನಾಮ

ಮಾನವ ಪ್ರಕೃತಿಯೊಂದಿಗೆ ಸಹಜವಾಗಿ ಬದುಕುತ್ತಿರುವ ಸಂದರ್ಭದಲ್ಲಿ ಕಲ್ಲು, ಬೆಟ್ಟ, ಗುಡ್ಡ, ಗಿರಿಗಳಲ್ಲಿ ನೆಲೆ ಮಾಡಿಕೊಂಡಿದ್ದ ಆಸರೆಗಳನ್ನು ಗುರುತಿಸುವ ಸಂದರ್ಭದಲ್ಲಿ ಆ ಕಲ್ಲು ಗುಡ್ಡಗಳಿಂದ ಹೆಸರಿಸಲು ಪ್ರಾರಂಭಿಸಿದನು.

೧. **ಪ್ರಾಕೃತಿಕ ಸ್ಥಳನಾಮಗಳನ್ನು:-** ಜಲವಾಚಕ, ಖನಿಜವಾಚಕ, ಶಿಲಾವಾಚಕ, ಪ್ರಮಾಣ ವಾಚಕ, ದಿಕ್ಕುವಾಚಕ, ಸಸ್ಯವಾಚಕ ಎಂಬುದಾಗಿ ವಿಭಾಗಿಸಿ ಅಧ್ಯಯನ ಮಾಡಲಾಗಿದೆ.

*** ಜಲವಾಚಕ**

ಆದಿಮಾನವ ತನ್ನ ಜೀವನವನ್ನು ಪ್ರಾರಂಭಿಸಿದದ್ದು ನೀರಿನ ತಾಣಗಳಲ್ಲೇ ಅಲ್ಲಿಯೇ ಮಾನವನ ಸಂಸ್ಕೃತಗಳು ಪ್ರಸಿದ್ಧಿಗೆ ಬಂದಿರುವುದು ನದಿ, ಪರಿಸರ, ಕೆರೆ, ಹಳ್ಳ, ಕೃತಕ ಜಲಸಂಗ್ರಾಹಕಗಳನ್ನು ನಿರ್ಮಿಸಿಕೊಂಡು ಗ್ರಾಮಗಳನ್ನು ನಿರ್ಮಿಸಿಕೊಂಡರು.

ತೀರ್ಥಹಳ್ಳಿ ಪರಿಸರದಲ್ಲಿ ಕಂಡುಬರುವ ಜಲವಾಚಿ ಸ್ಥಳನಾಮಗಳೆಂದರೆ ೧.ಹೀರೆಕೆರೆ, ೨.ಹೊನ್ನೆಕೆರೆ, ೩.ಅಂಬುತೀರ್ಥ, ೪.ಅಂದಿಗೆರೆ, ೫.ಜಿಗಳಗೋಡು

*** ಪ್ರಾಣಿ-ಪಕ್ಷಿ ವಾಚಕ**

ಪ್ರಾಣಿ-ಪಕ್ಷಿಗಳು ಪ್ರಕೃತಿಯಲ್ಲಿ ತಮ್ಮದೇ ಆದ ಸ್ಥಾನವನ್ನು ಪಡೆದುಕೊಂಡಿವೆ. ಮಾನವ. ತನ್ನ ಜೀವನದೊಂದಿಗೆ ಬದುಕುವ ಅಥವಾ ತಮಗೆ ಅತಿಮಾನುಷವೆಂದು ತೋರುವ ಪ್ರಾಣಿ-ಪಕ್ಷಿಗಳ ಹೆಸರನ್ನು ತಮ್ಮ ವಾಸದ ನೆಲೆಗಳಿಗೆ ನಿರ್ದೇಶಿಸುತ್ತಾರೆ. ಈ ಪರಿಸರದಲ್ಲಿ ಕಂಡುಬರುವ ಸ್ಥಳನಾಮಗಳೆಂದರೆ

೧.ಕೋಣಂದೂರು, ೨.ಮೃಗವಧೆ, ೩.ಹುಲಿಸರ, ೪.ಕೋಗಿಲೆ

*** ಸಸ್ಯವಾಚಕ**

ಪ್ರಾಚೀನ ಕಾಲದಿಂದಲೂ ಪ್ರಾಕೃತಿಕ ಸಂಪತ್ತುಗಳ ಮಧ್ಯೆ ಬದುಕುತ್ತಿರುವ ಮಾನವನು ಗಿಡ-ಮರಗಳ ಬಗ್ಗೆ ಒಂದು ರೀತಿಯ ಆರಾಧನಾ ಮನೋಭಾವನೆ ಬೆಳೆಸಿಕೊಂಡು ಬಂದಿದ್ದಾನೆ. ಈ ಪರಿಸರದಲ್ಲಿ ಸಾಮಾನ್ಯವಾಗಿ ಗಿಡ-ಮರಗಳ ಹೆಸರಿನಲ್ಲಿ ಕಂಡುಬರುತ್ತವೆ ಅತ್ತಿಗಾರು, ಮೇಘರವಳ್ಳಿ, ಮರಗಳಲೆ, ಮೇಳಿಗೆ, ಕೆಸ್ತೂರು ಇವು ತೀರ್ಥಹಳ್ಳಿ ಪ್ರದೇಶದಲ್ಲಿ ಕಂಡುಬರುವ ಸಸ್ಯವಾಚಕಗಳಾಗಿವೆ.

* **ಪ್ರಮಾಣ ವಾಚಕ**

ಒಂದೇ ಹೆಸರಿನ ಹಲವಾರು ಸ್ಥಳಗಳು ಇರುವ ಕಡೆ ಆ ಪ್ರದೇಶವನ್ನು ಗುರುತಿಸಲು ಹಿರಿದು–ಕಿರಿದು, ಚಿಕ್ಕದು–ದೊಡ್ಡದು, ಮೇಲೆ–ಕೆಳಗೆ ಎಂಬ ಪ್ರಮಾಣವನ್ನು ಬಳಸಿಕೊಂಡರು.

೧.ಹೆದ್ದೂರು, ೨.ಹಿರಿಯೂರು, ೩.ಎಡೇಗುಡ್ಡ

* **ದಿಕ್ಕು ಸೂಚಕ**

ಒಂದು ಪ್ರದೇಶದ ಸ್ಥಳಗಳನ್ನು ಗುರುತಿಸುವಲ್ಲಿ ದಿಕ್ಕು, ರಸ್ತೆ, ಗುಡಿ ಮುಂತಾದ ವರ್ಗಗಳನ್ನು ಒಳಗೊಂಡ ಸ್ಥಳನಾಮಗಳು ಕಂಡುಬರುತ್ತವೆ.

೧.ಬಂಡೀ ಘಡಿ, ೨.ನಡಬೂರು,

೨. ಸಾಂಸ್ಕೃತಿಕ ಸ್ಥಳನಾಮ

ಬಹಳಷ್ಟು ಸ್ಥಳನಾಮಗಳು ವ್ಯಕ್ತಿವಾಚಿಯಾಗಿ ಜಾತಿಯನ್ನು ಸೂಚಿಸುತ್ತಾ ದೇವರನ್ನು ಸೂಚಿಸುವ ಸ್ಥಳನಾಮಗಳು ಸೇರಿವೆ, ಪುರುಷ ಹೆಸರಿನ ಸ್ಥಳನಾಮಗಳು ಹಾಗೂ ಸ್ತ್ರೀ ಹೆಸರಿನ ಸ್ಥಳನಾಮಗಳು ಕಂಡುಬರುವುದು ವಿಶೇಷ.

* **ವ್ಯಕ್ತಿವಾಚಕ**

ತೀರ್ಥಹಳ್ಳಿ ಪರಿಸರದಲ್ಲಿ ಕಂಡುಬರುವ ಪ್ರಮುಖವಾದ ವ್ಯಕ್ತಿವಾಚಗಳೆಂದರೆ ಅಗಸಕೊಪ್ಪ ಮತ್ತು ಬೆಜ್ಜವಳ್ಳಿ -

* **ಜಾತಿವಾಚಕ**

ಜಾತಿನಾಮಗಳಲ್ಲಿ ಜಾತಿಗೆ ಸಂಬಂಧಿಸಿದ ಅಂಶಗಳು ಬಹುಮುಖ್ಯ ಪಾತ್ರವನ್ನು ವಹಿಸುತ್ತವೆ. ಜನಾಂಗೀಯ ಅಧ್ಯಯನಕ್ಕೆ ಈ ಬಗೆಯ ಹೆಸರುಗಳು ಮಹತ್ವದ ಆಕರಗಳಾಗಿವೆ.

* **ದೈವವಾಚಿ**

ಸಂಸ್ಕೃತಿಯಲ್ಲಿ ದೇವರ ಪತ್ರ ಅನನ್ಯವಾದದು. ಜೀವನದ ಹಲವಾರು ಸಂಗತಿಗಳಲ್ಲಿ ದೈವ ಅಸ್ಥಿತ್ವವನ್ನು ಕಂಡುಕೊಳ್ಳುವುದು ನಮ್ಮ ಸಂಸ್ಕೃತಿಯ ಪರಂಪರೆಯಾಗಿ ಮುಂದುವರೆಯುತ್ತಿದೆ. ಹಾಗೆಯೇ ಗ್ರಾಮ, ಊರುಗಳ ಹೆಸರುಗಳಿಗೂ ದೇವರ ನಾಮವನ್ನು ಹೆಸರಿಸುವುದು ವಾಡಿಕೆಯಾಗಿದೆ, ಸಮುದಾಯಗಳು ತಾವು ನಂಬಿದ ಕುಲದೈವ, ಮನೆದೈವ, ಗ್ರಾಮದೇವತೆ, ಪ್ರಾದೇಶಿಕ ದೇವತೆ ಹೀಗೆ ಹಲವಾರು ದೇವತೆಗಳ ಹೆಸರನ್ನು ತಮ್ಮ ನೆಲೆಗಳಲ್ಲಿ ಇಟ್ಟುಕೊಂಡಿದ್ದಾರೆ. ಈ ಮೂಲಕ ತಮ್ಮ ಸಂಸ್ಕೃತಿಯ ಒಂದು ಭಾಗವೆಂದು ದೇವರನ್ನು ಸ್ವೀಕರಿಸಲಾಗಿದೆ. ಪಟ್ಟಣದ ದೈವವಾಚಿ ಸ್ಥಳನಾಮಗಳ ಕುರಿತು ಹೀಗೆ ವಿಶ್ಲೇಷಿಸಬಹುದು.

೧.ಶಿವರಾಜಪು, ೨.ಹರಿಹರಿಪು, ೩.ಕುಂದಾದ್ರಿ, ೪.ಭದ್ರಾಪುರ

* **ಕುರುಬರ ಬೀದಿ**

ಪಟ್ಟದಲ್ಲಿ ಕುರುಬರು ನೆಲೆಸಿರುವರು. ಇವರ ಆರಾಧ್ಯ ದೈವ ಬೀರಪ್ಪ ಕುರುಬರಿಗಾಗಿ ಪ್ರತ್ಯೇಕ ಕೇರಿಯೇ ಇದೆ. ಇಲ್ಲಿ ಕುರುಬ ಜನಾಂಗದವರು ಮಾತ್ರ ವಾಸವಾಗಿದ್ದಾರೆ. ಹಿಂದಿನಿಂದಲೂ ಈ ಜಾಗಕ್ಕೆ ಕುರುಬರ ಓಣಿ, ಕುರುಬರ ಬೀದಿ ಎನ್ನುವರು.

೨.೩.೧. ಪ್ರಾಗಿತಿಹಾಸ ಕಾಲ

ಕರ್ನಾಟಕ ವಿಭಿನ್ನ ರೀತಿಯ ಭೌಗೋಳಿಕ ಅಂಶಗಳನ್ನು ಒಳಗೊಂಡ ಪ್ರದೇಶ. ಇದರಲ್ಲಿ ನಿಸರ್ಗದ ವಿಶೇಷ ಭೌತಿಕ ಲಕ್ಷಣಗಳನ್ನು ಪಡೆದಿದೆ. ಶಿವಮೊಗ್ಗ ಜಿಲ್ಲೆಯಿಂದ ಪಶ್ಚಿಮಕ್ಕೆ ಸುಮಾರು ೬೦ ಕಿ.ಮೀ ದೂರದಲ್ಲಿರುವ ಆಡಳಿತ ಕೇಂದ್ರ ಸ್ಥಳವೇ ತೀರ್ಥಹಳ್ಳಿ. ಶಿವಮೊಗ್ಗ ಜಿಲ್ಲೆ ಮತ್ತು ತೀರ್ಥಹಳ್ಳಿಯ ಸುತ್ತಮುತ್ತಲಿನ ಪ್ರದೇಶವು ಪ್ರಾಗಿತಿಹಾಸ ಕಾಲದಿಂದಲೇ ಜನವಸತಿ ಬೆಳೆದು ನಂತರ ವಿವಿಧ ರಾಜಮನೆತನಗಳ ಆಳ್ವಿಕೆಯಿಂದ ಇದೊಂದು ಸಾಂಸ್ಕೃತಿಕ ಕೇಂದ್ರವಾಗಿ ನೆಲೆಗೊಳ್ಳಲು ಇಲ್ಲಿನ ಭೌಗೋಳಿಕ ಅಂಶ ಪೂರಕವಾಗಿ ಕಾಣುತ್ತದೆ.

ಆದಿ ಮಾನವನ ಬರವಣಿಗೆಯ ಕಲೆಯನ್ನು ಕರಗತ ಮಾಡಿಕೊಳ್ಳದೇ ಇದ್ದದ್ದರಿಂದ ಆತ ಬೆಳೆಸಿ ಬಿಟ್ಟು ಹೋಗಿರುವ ಭೌತಿಕ ಅವಶೇಷಗಳನ್ನು ತಿಳಿದುಕೊಳ್ಳಬೇಕಗಿದೆ.

"ಬರವಣಿಗೆ ಕಲೆಯನ್ನು ತಿಳಿಯುವ ಮುನ್ನ ಘಟಿಸಿದ ಒಂದು ಪ್ರದೇಶ, ದೇಶ, ಜನಾಂಗಕ್ಕೆ ಸಂಬಂಧಿಸಿದಂತೆ ಇತಿಹಾಸವನ್ನು ಇತಿಹಾಸ ಪೂರ್ವಕಾಲ" ಎಂದು ಡಾ.ಹೆಚ್.ಡಿ.ಸಂಕಾಲಿಯಾ ವಿಶ್ಲೇಷಿಸಿದ್ದಾರೆ.[೪]

ಪ್ರಾಗೈತಿಹಾಸ ಕಾಲದಲ್ಲಿ ಪ್ರಮುಖವಾಗಿ ೦೫ ವಿಧಗಳಾಗಿ ವಿಂಗಡಿಸಿ ಅಧ್ಯಯನ ನಡೆಸಲಾಗುತ್ತದೆ. ೦೧. ಹಳೇಶಿಲಾಯುಗ, ೦೨. ಸೂಕ್ಷ್ಮಶಿಲಾಯುಗ, ೦೩. ತಾಮ್ರಶಿಲಾಯುಗ, ೦೪. ನವಶಿಲಾಯುಗ, ೦೫. ಬೃಹತ್‌ಶಿಲಾಯುಗ.

ಪುರಾತತ್ವ ಶಾಸ್ತ್ರಜ್ಞರು ಇತಿಹಾಸ ಕಾಲವನ್ನು ೦೫ ಲಕ್ಷವರ್ಷಗಳಿಂದ ಕ್ರಿ.ಶ.ಶಕೆಯು ಆರಂಭವಾಗುವವರೆಗೂ ಎಂದು ನಿಗದಿಪಡಿಸಿದ್ದಾರೆ.[೫] ತೀರ್ಥಹಳ್ಳಿ ಪ್ರದೇಶವು ಬೆಟ್ಟಗುಡ್ಡಗಳಿಂದ ಆವೃತವಾಗಿರುವುದರಿಂದ ಶಿಲಾಯುಗದ ಮಾನವನಿಗೆ ವಾಸಯೋಗ್ಯ ಸ್ಥಳವಾಗಿತ್ತು. ಮಾನವನು ಪ್ರಾಣಿಗಳನ್ನು ಬೇಟೆಯಾಡಲು, ಕತ್ತರಿಸಲು ಮತ್ತು ಚರ್ಮಬೇರ್ಪಡಿಸಲು ಮರದ ತೊಗಟೆ ತೆಗೆಯಲು ಮೊದಲಾದ ಕೆಲಸಗಳಿಗೆ ವಿವಿಧ ಶೈಲಿಯಿಂದ ಮಾಡಿದ ಆಯುಧಗಳನ್ನು ಬಳಸುತ್ತಿದ್ದರು. ಈ ಕಾಲವನ್ನು ಶಿಲಾಯುಗ ಎನ್ನುವರು ಈ ಪ್ರದೇಶದಲ್ಲಿ ಹಳೇ ಶಿಲಾಯುಗದ ನೆಲೆಗಳು ಕಂಡುಬಂದಿಲ್ಲಾ ಸೂಕ್ಷ್ಮ ಶಿಲಾಯುಗದ ಅವಶೇಷಗಳು ತಿಟ್ಟಮತ್ತೂರು, ತೀರ್ಥಹಳ್ಳಿ, ನಡಬೂರು, ಸಿಲ್‌ಗಲ್ ಗ್ರಾಮದಲ್ಲಿ ಕಂಡುಬಂದಿವೆ. ಈ ನೆಲೆಯಲ್ಲಿ ಹೆರೆಚಕ್ಕೆ, ನೀಳಚಕ್ಕೆ, ದೊರೆತಿವೆ. ಇವುಗಳು ಕ್ವಾರ್ಟ್ಜ್ ಶಿಲೆಯಿಂದ ರೂಪಿತವಾಗಿವೆ. ನಂತರದ ಕಾಳಘಟ್ಟದಲ್ಲಿ ಮಾನವನು ಆಯುಧೋಪಕರಣಗಳನ್ನು ಉಜ್ಜಿ ನಯಗೊಳಿಸಿ ಅದರ ಸೌಂದರ್ಯವನ್ನು ವೃದ್ಧಿಸಿ ತನಗೆ ಅನುಕೂಲವಾಗುವಂತೆ ಮಾಡಿಕೊಂಡು ಉಪಯೋಗಿಸಲು ಆರಂಭಿಸಿದ್ದರಿಂದ ಈ ಯುಗವನ್ನು ನವಶಿಲಾಯುಗ ಎನ್ನುವರು.[೬] ಕೃಷಿ ಹಂತದಲ್ಲಿ ಮಾನವ ಒಂದೆಡೆಯಿಂದ ನೆಲೆನಿಂತು ಕೃಷಿ ಮತ್ತು ಪಶುಪಾಲನೆಯನ್ನು ಆರಂಭಿಸಿದನು ತೀರ್ಥಹಳ್ಳಿ ಪರಿಸರದಲ್ಲಿ ನವಶಿಲಾಯುಗದ ಅವಶೇಷಗಳು ಅರೆಹಳ್ಳಿ, ಮೇಳಿಗೆ, ಎಡಗುಡ್ಡೆ, ಗ್ರಾಮದಲ್ಲಿ ಕಂಡುಬಂದಿವೆ. ಯಡಗುಟ್ಟೆ ಮತ್ತು ಅರೆಹಳ್ಳಿಯಲ್ಲಿ (೧೯೭೪-೭೫)ರಲ್ಲಿ ಅ ಸುಂದರ ಅವರು ಅನ್ವೇಷಿಸಿ ನೆಲೆಯನ್ನು ಪತ್ತೆಹಚ್ಚಿದ್ದಾರೆ.[೭]

ಕಬ್ಬಿಣದ ಬಳಕೆಯನ್ನು ತಿಳಿದಿದ್ದ ಜನರು ತಾವು ವಾಸಿಸುತ್ತಿದ್ದ ಪ್ರದೇಶದಲ್ಲಿ ವರ್ತುಲಾಕಾರದ ಬೃಹತ್ ಶಿಲಾ ಸಮಾಧಿಗಳು, ಸ್ವಸ್ತಿಕಾರದ ಬೃಹತ್ ಶಿಲಾ ಸಂಸ್ಕೃತಿಯ ಒಳಗೆ ಮೆರಗು ಹಾಕಿರುವ ದೊಡ್ಡ ಮಡಿಕೆಗಳ ಮಾನವನ ಅಸ್ಥಿ ಮೊದಲಾದವು ಬೃಹತ್ ಶಿಲಾಯುಧಕ್ಕೆ ಸಂಬಂಧಿಸಿದ ಅವಶೇಷಗಳಾಗಿವೆ.[೮]

ಬಂಕ್ಲಾಪುರ ಗ್ರಾಮದಲ್ಲಿ ಶಿಲಾವೃತ್ತ ೧೫ ಶಿಲಾಗೋರಿಗಳು ದೊರೆತಿವೆ. ೧೦ ಗೋರಿಗಳು ಹಾಳಾಗಿವೆ ಸ್ವಸ್ತಿಕ್ ಮಾದರಿಯ ಕೋಣೆ ಗೋರಿಗಳು ಒಂದು ನಿಲುಸುಗಲ್ಲು ಸಹ ದೊರಕಿದೆ, ಅರೆಹಳ್ಳಿ ಮತ್ತು ಬಂಡಿಗಡಿಯಲ್ಲಿ ಕೋಣೆ ಗೋರಿ ಕಲ್ಮನೆ ಮಾದರಿಯ ಗೋರಿಗಳು ಕಂಡುಬಂದಿದೆ.

ಒಟ್ಟಾರೆ ಮಾನವನು ಅನಾದಿಕಾಲದಿಂದಲೂ ಬೆಳೆದು ಬಂದ ಹಾದಿಯನ್ನು ವಿವಿಧ ಹಂತಗಳಲ್ಲಿ ಆತನು ಬಿಟ್ಟು ಹೋದ ಅವಶೇಷಗಳ ಮೂಲಕ ಅಧ್ಯಯನ ಮಾಡಲಾಗಿದೆ. ತುಂಗೆ-ಭದ್ರೆಯ ಮಡಿಲಿನಲ್ಲಿ ಒಂದು ಪ್ರತ್ಯೇಕ ನಾಗರೀಕತೆ ಬೆಳೆದಿದ್ದು ಇದು ಹರಪ್ಪಾ ಮೆಹೆಂಜೋದಾರೋ ಸಮಕಾಲೀನ ನಾಗರೀಕತೆಯಾಗಿರಬೇಕೆಂದು ಇತಿಹಾಸ ಸಂಶೋಧಕರಾದಂತಹ ಅ.ಸುಂದರ್‌ರವರು ಅಭಿಪ್ರಾಯಪಟ್ಟಿದ್ದಾರೆ.[೯]

೨.೩.೨. ಇತಿಹಾಸಕಾಲ

ತೀರ್ಥಹಳ್ಳಿ ಪ್ರದೇಶವು ಐತಿಹಾಸಿಕ, ಧಾರ್ಮಿಕ, ಕೇಂದ್ರವಾಗಿದ್ದು, ಈ ಪಟ್ಟಣದಲ್ಲಿ ೭-೮ನೇ ಶತಮಾನದಿಂದ ಹಿಡಿದು ೧೫-೧೬ನೇ ಶತಮಾನದವರೆಗೂ, ಸಾಂತರು, ಕಲ್ಯಾಣದ ಚಾಲುಕ್ಯರು ಸೇವುಣರು, ಹೊಯ್ಸಳರು, ವಿಜಯನಗರ, ಕೆಳದಿನಾಯಕರು, ಹೈದರಾಲಿ, ಮೈಸೂರು ಒಡೆಯರ್ ಕಾಲದವರೆಗೂ ವಿವಿಧ ಅರಸೊತ್ತಿಗೆಗಳ ಅರಸರು ದಂಡನಾಯಕರು ಆಳ್ವಿಕೆ ಮಾಡಿದ್ದಾರೆ.

೧. ಸಾಂತರರು

ಪೊಂಬುಜವು ಶಿವಮೊಗ್ಗ ಜಿಲ್ಲೆಯ ಒಂದು ಪ್ರಸಿದ್ಧ ಜೈನಕೇಂದ್ರ. ಈ ಪ್ರದೇಶವನ್ನು ಮೊದಲು ದಕ್ಷಿಣ ಕನ್ನಡ ಜಿಲ್ಲೆಯ ಅಳುಪರು ಆಳುತ್ತಿದ್ದರು. ಇದಕ್ಕೆ ಪೊಂಬುರ್ಚ, ಪೊಂಬುಜ, ಪೊಟ್ಟಿ ಪೊಂಬುಚ ಮುಂತಾದ ಹೆಸರುಗಳಿಂದ ಗುರುತಿಸಲಾಗಿತ್ತು.[೧೦] 'ಸ್ವಸ್ತಿಶ್ರೀ ಮಚ್ಚಿತ್ರವಾಹನ ಪೊನ್ನುಬ್ಬಾಳೆ' ಎಂಬಾ ಶಾಸನ ಸಾಲುಗಳ ಆಧಾರದಿಂದ ಪೊಂಬುಚವನ್ನು ಅಳುಪರ ಚಿತ್ರವಾಹನನು ಆಡಳಿತ ನಡೆಸುತ್ತಿದ್ದನೆಂದೂ ತಿಳಿಯಬಹುದು[೧೧] ಸಾಂತರರು ಅಳುಪರನ್ನು ಸೋಲಿಸಿ ಹೊಂಬುಜವನ್ನು ತಾವು ವಶಪಡಿಸಿಕೊಂಡರು.

ಸಾಂತರನ್ನು ಶಾಸನಗಳಲ್ಲಿ ಸಂತಾರರು, ಶಾನ್ತರು, ಶಾಂತರು ಇತ್ಯಾದಿ ಹೆಸರುಗಳಿಂದ ಕರೆದಿದೆ. ಇವರು ಆಳಿದ ನಾಡನ್ನು ಸಾನ್ತಳಿಗೆ ಸಾವಿರ, ಸಾನ್ತಳಿಗೆ ಸಾಯಿರ ಎಂದು ಶಾಸನದಲ್ಲಿದೆ.[೧೨]

ತೀರ್ಥಹಳ್ಳಿ ತಾಲ್ಲೂಕಿನ ಆರಗದ ಸಾಂತವೇರಿಯಿಂದ ಈ ರಾಜ್ಯಕ್ಕೆ ಸಾನ್ತಳಿಗೆ ಎಂಬಾ ಹೆಸರು ಬಂದಿತೆಂದು ಹೇಳಲಾಗಿದೆ.[೧೩] ಸಾನ್ತಳಿಗೆ ಸಾವಿರವು ಇಂದಿನ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ, ಸಾಗರ, ಹೊಸನಗರ, ಮತ್ತು ಸೊರಬ ತಾಲ್ಲೂಕು ಹಾಗೂ ಚಿಕ್ಕಮಗಳೂರು

ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಕಳಸದ ಸೀಮೆ ಮತ್ತು ಶೃಂಗೇರಿ ತಾಲ್ಲೂಕಿನ ಕಿಗ್ಗ ಸೀಮೆಯನ್ನು ಒಳಗೊಂಡಿತ್ತು.[೧೪]

ತೀರ್ಥಹಳ್ಳಿ ೧೭೩ನೆಯ ಶಾಸನವು ಚಾಲುಕ್ಯ ಅರಸ ತ್ರಿಭುವನ ಮಲ್ಲ ದೇವನ ಆಳ್ವಿಕೆಗೆ ಸೇರಿದ್ದು ಆತನ ಕೈ ಕೆಳಗೆ ತೈಲ ಎಂಬಾ ಸಾಂತರ ದೊರೆ ಆಡಳಿತ ನಡೆಸುತ್ತಿದ್ದ. ಈ ಶಾಸನದ ಕಾಲ ಕ್ರಿ.ಶ.೧೧೦೩ ಸಾಂತರ ವಂಶಾವಳಿಯನ್ನು ಇದು ನೀಡುತ್ತದೆ. ಒಡ್ಡುಗ ಆತನ ತಮ್ಮ ತೈಲ, ಆತನ ಮಗ ವೀರ, ಮತ್ತು ಬೀರಲದೇವಿ ಮಕ್ಕಳು ವಿಕ್ರಮ ಶಾಂತರನ ಹೆಂಡತಿ ಪಾಂಡ್ಯ ಕುಲದ ಚಂದಲದೇವಿ, ಅವರಿಬ್ಬರ ಮಗ ತೈಲ, ಈ ಆಧಾರದ ಮೇಲೆ ತೀರ್ಥಹಳ್ಳಿ ಪ್ರದೇಶದ, ಸಾಂತರ ಆಳ್ವಿಕೆಗೆ ಒಳಪಟ್ಟಿತ್ತು ಎಂದು ತಿಳಿದುಬರುತ್ತದೆ.

೨. ಕಲ್ಯಾಣದ ಚಾಲುಕ್ಯರು

ಬಾದಾಮಿ ಚಾಲುಕ್ಯರ ಉತ್ತರಾಧಿಕಾರಿಗಳೆಂದು ಕರೆದುಕೊಳ್ಳುವ ಕಲ್ಯಾಣದ ಚಾಲುಕ್ಯರು ರಾಷ್ಟ್ರಕೂಟರನ್ನು ಸೋಲಿಸಿ ಅಧಿಕಾರವನ್ನು ಪಡೆದವರು. ಈ ವಂಶದ ಎರಡನೇ ತೈಲನು ೯೭೩ರಲ್ಲಿ ಪಟ್ಟವೇರಿದ ವಿಚಾರ ಆರನೇ ವಿಕ್ರಮಾದಿತ್ಯನ ಗದುಗಿನ ಶಾಸನದಿಂದ ತಿಳಿದುಬರುತ್ತದೆ. ಈಗಿನ ಬೀದರ್ ಜಿಲ್ಲೆಯ ಬಸವಕಲ್ಯಾಣ ಅವರ ರಾಜಧಾನಿಯಾಗಿತ್ತು.[೧೫] ತೀರ್ಥಹಳ್ಳಿಯನ್ನು ಒಳಗೊಂಡಂತೆ ಶಿವಮೊಗ್ಗ ಜಿಲ್ಲೆಯ ಭಾಗಗಳು ಕಲ್ಯಾಣದ ಚಾಲುಕ್ಯರ ಆಳ್ವಿಕೆಗೆ ಒಳಪಟ್ಟಿತ್ತು ಎಂಬುದಕ್ಕೆ ಕೆಲವು ಶಾಸನಗಳು ಮಾಹಿತಿ ನೀಡುತ್ತವೆ.

ಸುಮಾರು ೫೦ ವರ್ಷಗಳ ಕಾಲ ದಕ್ಷತೆಯಿಂದ ಆಳ್ವಿಕೆ ನಡೆಸಿ ಕರ್ನಾಟಕಕ್ಕೆ ಶಾಶ್ವತ ಕೀರ್ತಿಯನ್ನು ತಂದುಕೊಟ್ಟು ಕಲ್ಯಾಣ ಚಾಲುಕ್ಯರ ವಂಶದಲ್ಲಿ ಸರ್ವಶ್ರೇಷ್ಠವಾದ ದೊರೆ ೬ನೇ ವಿಕ್ರಮಾದಿತ್ಯ. ತೀರ್ಥಹಳ್ಳಿಯ ೧೭೩ನೇ ೨೧೧ನೇ ಶಾಸನಗಳು ಈತನ ಬಿರುದುಗಳನ್ನು ಉಲ್ಲೇಖಿಸುತ್ತವೆ. ಈ ಶಾಸನಗಳು ತೀರ್ಥಹಳ್ಳಿ ತಾಲ್ಲೂಕಿನ ಮೃಗವದೆಯ ಮಲ್ಲಿಕಾರ್ಜುನ ದೇವಾಲಯ ಉತ್ತರದಿಕ್ಕಿನ ಬಲಗಡೆ ನೆಟ್ಟಿರುವ ಶಾಸನಗಳಿಂದ ತಿಳಿದುಬರುತ್ತದೆ. ಈ ಆಧಾರದ ಮೇಲೆ ಶಿವಮೊಗ್ಗ ಜಿಲ್ಲೆಯನ್ನು ಒಳಗೊಂಡಂತೆ ತೀರ್ಥಹಳ್ಳಿ ಪ್ರದೇಶವು ಕಲ್ಯಾಣ ಚಾಲುಕ್ಯರ ಆಳ್ವಿಕೆಗೆ ಒಳಪಟ್ಟಿತ್ತು.

೩. ಹೊಯ್ಸಳರು

ಕ್ರಿ.ಶ.೧೧ನೇ ಶತಮಾನದಲ್ಲಿ ಕರ್ನಾಟಕದಲ್ಲಿ ಪ್ರಾಬಲ್ಯಕ್ಕೆ ಬಂದು ಸುಮಾರು ಮೂರು ಶತಮಾನಗಳಿಗೂ ಹೆಚ್ಚು ಕಾಲ ಆಳ್ವಿಕೆ ನಡೆಸಿದವರೆಂದರೆ ಹೊಯ್ಸಳರು, ಕರ್ನಾಟಕದ ಇತಿಹಾಸದಲ್ಲಿ ಕಲ್ಯಾಣದ ಚಾಲುಕ್ಯರ ಸಾಮಂತರಾಗಿ ಆಳ್ವಿಕೆಯನ್ನು ಪ್ರಾರಂಭಿಸಿದರು. ತಮ್ಮ ವೈಭವಯುತ ಆಳ್ವಿಕೆಯಿಂದ ಮುಂದೆ ವಿಜಯನಗರ ಸಾಮ್ರಾಜ್ಯಕ್ಕೆ ಪ್ರೇರಣೆಯಾಗಿದ್ದಂತಹ ಹೊಯ್ಸಳರು ಕ್ರಿ.ಶ.ಸುಮಾರು ೧೧ನೇ ಶತಮಾನದಿಂದ ೧೪ನೇ ಶತಮಾನದವರೆಗೆ ದಕ್ಷಿಣ ಭಾರತದಲ್ಲಿ ಇವರ ಆಳ್ವಿಕೆ ವ್ಯಾಪಿಸಿತು.

ತೀರ್ಥಹಳ್ಳಿಯ ಇತಿಹಾಸಕ್ಕೆ ಸಂಬಂಧಿಸಿದಂತೆ ಕಣಿವೆಯ ಕಲ್ಲು ಎಂಬ ಪ್ರದೇಶದಲ್ಲಿ ದೊರೆತಿರುವ ಶಾಸನದಲ್ಲಿ ಹೊಯ್ಸಳ ದೇವನ ಮಂತ್ರಿ ಚಂದಿರಮಯ್ಯನನ್ನು ಉಲ್ಲೇಖಿಸುತ್ತದೆ. ಈ ಶಾಸನದ ಕಾಲ ಎಂದರೆ ಕ್ರಿ.ಶ.೧೧೯೦-೯೧ ಎಂದು ಹೇಳಲಾಗಿದೆ.[೧೬]

ಕ್ರಿ.ಶ.೧೦೪೬ರ ಸೋಗ್ಗಾನೆಯ ಶಾಸನದಲ್ಲಿ ಶಿವಮೊಗ್ಗೆಯ ಉಲ್ಲೇಖವಿದ್ದು. ತುಂಗಾನದಿ ಪಕ್ಕದಲ್ಲಿ ಹೊಯ್ಸಳ ದೊರೆ ೨ನೇ ಬಲ್ಲಾಳನನ್ನು ಭೀಮೇಶ್ವರನೆದುರು ಸೋಗಾನೆ ಗ್ರಾಮವನ್ನು ಬ್ರಾಹ್ಮಣರಿಗೆ ದಾನ ಮಾಡಿ ಆ ಅಗ್ರಹಾರಕ್ಕೆ ಹೊಳಸೇಳಪುರವೆಂದು ನಾಮಕರಣ ಮಾಡಿದ್ದು ಶಾಸನದಿಂದ ತಿಳಿದುಬರುತ್ತದೆ.[೧೭] ಈ ಎರಡು ಶಾಸನಗಳ ಆಧಾರದ ಮೇಲೆ ತೀರ್ಥಹಳ್ಳಿ ಪ್ರದೇಶವು ಹೊಯ್ಸಳರ ಆಳ್ವಿಕೆಗೆ ಒಳಪಟ್ಟಿತ್ತು.

೪. ಸೇವುಣರು

ಸೇವುಣರು ಕರ್ನಾಟಕದ ಕ್ಷತ್ರಿಯರೆಂದೂ ಕರೆದುಕೊಂಡಿದ್ದಾರೆ. ಅಂದರೆ ಇವರ ಮೂಲಸ್ಥಾನ ದಕ್ಷಿಣದ ಕನ್ನಡ ಪ್ರಾಂತ್ಯವಾಗಿತ್ತು. ಹೀಗೆ ಸೇವುಣರು ಕರ್ನಾಟಕದಲ್ಲಿ ಹಲವು ಪ್ರದೇಶದಲ್ಲಿ ಆಳ್ವಿಕೆ ಮಾಡಿದ್ದಾರೆ. ಇವರ ಆಡಳಿತವು ತೀರ್ಥಹಳ್ಳಿಯ ಕೆಲವು ಭಾಗಗಳಿಗೂ ವ್ಯಾಪಿಸಿತ್ತು.

ಸೇವುಣರ ಇತಿಹಾಸಕ್ಕೆ ಸಂಬಂಧಿಸಿದಂತೆ ತೀರ್ಥಹಳ್ಳಿ ಕೋದೂರಿನ ಮಲ್ಲಿಕಾರ್ಜುನ ದೇವಸ್ಥಾನ ಮುಂದೆ ಕಟ್ಟಿರುವ ಕಲ್ಲಿನ ಮುಂದೆ ಇವರ ಶಾಸನವಿರುವುದನ್ನು ನೋಡಬಹುದಾಗಿದೆ. ಇದರ ಪ್ರಕಾರ ಸಿಂಘಣ ದೇವನ ದಳವಾಯಿಯಾದ ಸಾರಂಗದೇವ ಅಣ್ಣವ್ರ ವಗ್ಗಡೆಯ ವಿರುದ್ಧ ದಂಡೆತ್ತಿ ಬಂದ ಕೋದೂರಿನ ಮೇಲೆ ದಾಳಿ ಮಾಡಿ ಸುಟ್ಟು ಹಾಕಿದನು. ಈ ಶಾಸನದಲ್ಲಿ ಕೋದೂರನ್ನು ವಜ್ರಧಾನಿ ಎಂದು ಉಲ್ಲೇಖಿಸಿದೆ.[೧೮] ಈ ಶಾಸನದ ಕಾಲ ಕ್ರಿ.ಶ.೧೨೩೪ ಆದರೆ ಈ ಹೊತ್ತಿಗಾಗಲೇ ಸಿಂಘಣ್ಣನ ಆಳ್ವಿಕೆ ಕೊನೆಗೊಂಡಿತ್ತು.

೫. ವಿಜಯನಗರ

೧೪ನೇ ಶತಮಾನದ ಪೂರ್ವಾರ್ಧದಲ್ಲಿ ವಿಜಯನಗರ ಸಾಮ್ರಾಜ್ಯವು ಸ್ಥಾಪನೆಯಾಯ್ತು ೧೩೩೬ರಲ್ಲಿ ಅಧಿಕಾರಕ್ಕೆ ಬಂದು ಕ್ರಿ.ಶ.೧೫೬೫ರವರೆಗೆ ಅಂದರೆ ಸುಮಾರು ೨೯ ವರ್ಷಗಳ ಕಾಲ ಆಳ್ವಿಕೆ ಮಾಡಿದರು. ತೀರ್ಥಹಳ್ಳಿ ಪ್ರದೇಶದಲ್ಲಿ ವಿಜಯನಗರ ಕಾಲಕ್ಕೆ ಸಂಬಂಧಿಸಿದ ಹೆಚ್ಚು ಶಾಸನಗಳು ದೊರೆತಿರುವುದು ನೋಡಬಹುದು.

ಈ ಪ್ರದೇಶದಲ್ಲಿ ವಿಜಯನಗರದ ಸಾಮಂತರಾಗಿ ಆರಗ ಒಡೆಯರು ಆಳ್ವಿಕೆ ನಡೆಸಿದರು ಹರಿಹರನ ತಮ್ಮನಾದಂತಹ ಮಾರಪ್ಪನನ್ನು ಮಲೆಯ ರಾಜ್ಯ ಎಂದು ಕರೆಯಲಾಗುತ್ತಿದ್ದ ಆರಗ ರಾಜ್ಯದ ರಾಜ್ಯಪಾಲನಾಗಿ ನೇಮಿಸಿದ ಅರಗವೇ (ತೀರ್ಥಹಳ್ಳಿ ಒಂದು ಪ್ರದೇಶ) ರಾಜಧಾನಿಯಾಯಿತು.[೧೯]

ಕ್ರಿ.ಶ.೧೩೪೬ರ ಚಟ್ಟಕೊಡಗಿ ಶಾಸನವು ವೀರ ಹರಿಯಪ್ಪ ಒಡೆಯರ್ ನನ್ನು ಶ್ರೀಮನ್ಮ್ ಹಾಂಮಡಲೇಶ್ವರ ಪೂರ್ವ ಪಶ್ಚಿಮ ಸಮುದ್ರಾಧಿಪತಿ ಎಂದು ವರ್ಣಿಸಿದೆ ಈ ಹೊತ್ತಿಗಾಗಲೇ ಹರಿಹರನ ಆಳ್ವಿಕೆ ಆರಂಭವಾದದ್ದು ಸ್ಪಷ್ಟ ಎಂದು ತೋರುತ್ತದೆ.[೨೦]

ತೀರ್ಥಹಳ್ಳಿ-೨೨೧ ಶಾಸನವು ವಿಜಯನಗರ ವಂಶಾವಳಿಯನ್ನು ತಿಳಿಸುತ್ತದೆ. ಕ್ರಿ.ಶ.೧೩೬೨ರಲ್ಲಿ ಆರಗ ರಾಜ್ಯದ ರಾಜಪಾಲಕನಾಗಿದ್ದ ವಿರೂಪಾಕ್ಷ ಒಡೆಯನೆಂದೂ ಪರಿಚಿತನಾಗಿದ್ದ ಈತನ ಹೆಸರಿನಲ್ಲಿ ವಿರೂಪಾಕ್ಷಪುರವೆಂಬ ಅಗ್ರಹಾರ ಸ್ಥಾಪಿಸಿದನು. ಹಾಗೂ ಭೂಮಿಯ ಮೇರೆಗಳ ವಿಷಯದಲ್ಲಿ ಹೆದ್ದೂರಿನ ಜನತೆ ಮತ್ತು ಆಚಾರ್ಯರಿಗೂ, ಸೂರಿಗಳಿಗೂ ನಡೆದಂತಹ ಜಗಳ ಬಗೆಹರಿಸಲ್ಪಟ್ಟಿದ್ದು ಈ ಶಾಸನದಿಂದ ತಿಳಿದುಬರುತ್ತದೆ.[21]

ತೀರ್ಥಹಳ್ಳಿಯ ೧೮೦ನೇ ಶಾಸನ ೧೫೬೦ ಸದಾಶಿವನಾಯಕನ ಆಳ್ವಿಕೆಗೆ ಸೇರಿದ್ದು ಈತನು ಆರಗ ರಾಜ್ಯವನ್ನು ಪಾಲಿಸುತ್ತಿದ್ದನು. ಈ ಶಾಸನದಲ್ಲಿ ಬಳ್ಳಗೋಡು ಲಕ್ಷ್ಮಿನಾರಾಯಣ ದೇವಾಲಯದ ನಿರ್ಮಾಣ ದೇವಪ್ರತಿಷ್ಠಾಪನೆ ಮಾಡಿದ ವಿಷಯ ತಿಳಿಸುತ್ತದೆ.[22] ತೀರ್ಥಹಳ್ಳಿ ೨೧೫ನೇ ಶಾಸನ ವೆಂಕಟಪತಿ ಪೆನುಗೊಂಡದಿಂದ ಆಳುತ್ತಿದ್ದ ದೇವರ ಸೇವೆ ದಾನ ನೀಡುತ್ತಿದ್ದು ಮೇಳಿಗೆಯಲ್ಲಿ ಅನಂತ ತೀರ್ಥಂಕರ ಬಸದಿಯನ್ನು ಕಟ್ಟಿಸಿದನು.

೬. ಕೆಳದಿ ನಾಯಕರು

ಕ್ರಿ.ಶ.೧೪೯೯ರಲ್ಲಿ ಜನ್ಮತಾಳಿದ ಕೆಳದಿ ಸಂಸ್ಥಾನಕ್ಕೆ ದಕ್ಷಿಣ ಭಾರತದ ಇತಿಹಾಸದಲ್ಲಿ ವಿಶಿಷ್ಟ ಸ್ಥಾನವಿದೆ. ಮಧ್ಯಕಾಲೀನ ಇತಿಹಾಸ ಕೊನೆಯ ಹಾಗೂ ಆಧುನಿಕ ಯುಗದ ಅರಸು ಮನೆತನಗಳಲ್ಲಿ ಕೆಳದಿ ಅರಸುಮನೆತನವು ಪ್ರಮುಖವಾದದು. ಕ್ರಿ.ಶ.೧೫೬೫ರಲ್ಲಿ ವಿಜಯನಗರ ಪತನದ ನಂತರ ಸ್ವತಂತ್ರರಾದರೂ ಅವರು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆದರು ತಮ್ಮ ೨೬೫ವರ್ಷ ಆಡಳಿತದ ಅವಧಿಯಲ್ಲಿ ರಾಜಕೀಯ, ಆಡಳಿತ, ಸಾಂಸ್ಕೃತಿಕ ವಿಶೇಷ ನೈಪುಣ್ಯತೆಯನ್ನು ತೋರುತ್ತ ವಿಜಯನಗರ ಸಂಸ್ಕೃತಿಗೆ ಕುಂದು ಬಾರದಂತೆ ನಡೆದು ಬಂದರು ಲಿಂಗಣ್ಣ ಕವಿಯ 'ಕೆಳದಿ ನೃಪವಿಜಯ' ಮತ್ತು ಬಸವ ಭೂಪಾಲನ "ಶಿವತತ್ವರತ್ನಾಕರ" ಗ್ರಂಥಗಳ ಪ್ರಕಾರ ಈ ರಾಜ್ಯದ ಸಂಸ್ಥಾಪಕ ಚೌಡಪ್ಪ ಮತ್ತು ಭದ್ರಪ್ಪ ಇಬ್ಬರು ವೀರಶೈವ ಸಹೋದರರು. ಶಿವಮೊಗ್ಗ ಜಿಲ್ಲೆಯ ಸಾಗರ(ತಾ) ಕೆಳದಿ ಗ್ರಾಮದ ನಿವಾಸಿಗಳಾದ ಇವರು ಹೊಲವನ್ನು ಉಳುತ್ತಿದ್ದಾಗ ಗುಪ್ತನಿಧಿ ದೊರಕಿತು, ಈ ಸಂಪತ್ತನ್ನು, ಆಧರಿಸಿ ರಾಜ್ಯ ಸ್ಥಾಪನೆ ಮಾಡಲಾಗಿದೆ. ಇವರ ಸಾಧನೆಯನ್ನು ತಿಳಿದ ಶ್ರೀಕೃಷ್ಣದೇವರಾಯ ಚೌಡಪ್ಪನಿಗೆ "ಕೆಳದಿಯ ಮೂಲ ಸಂಸ್ಥಾನದ ಚೌಡಪ್ಪ ನಾಯಕ" ಎಂಬ ಬಿರುದನ್ನು ನೀಡಿದನು ಚೌಡಪ್ಪ ನಾಯಕ ಕೆಳದಿ ರಾಜ್ಯದ ಮೊದಲ ಅರಸ ಎಂದು ಕೆಳದಿಯ ನೃಪವಿಜಯ ತಿಳಿಸುತ್ತದೆ. ಈ ವಂಶದಲ್ಲಿ ವೆಂಕಟಪ್ಪ ನಾಯಕ, ಸದಾಶಿವನಾಯಕ, ವೀರಭದ್ರ ನಾಯಕ, ಶಿವಪ್ಪನಾಯಕ, ಸೋಮಶೇಖರ ನಾಯಕನ ಪ್ರಮುಖರಾದವರು. ಕಳಸದಲ್ಲಿನ ಶಾಸನದಲ್ಲಿ ತೀರ್ಥಹಳ್ಳಿ (ಮೃಗವಧೆ)ಯಲ್ಲಿ ಕೆಳದಿ ಅರಸರ ನೆಲೆಸಿದ್ದರು ಎಂದು ತಿಳಿದುಬರುತ್ತದೆ.[23]

ಕ್ರಿ.ಶ.೧೫೮೬-೧೬೨೦ರವರೆಗೂ ಆಳಿದ ಹಿರಿಯ ವೆಂಕಟಪ್ಪ ನಾಯಕ ಇಕ್ಕೇರಿ ಅರಸರಲ್ಲಿ ಪ್ರಸಿದ್ಧನಾದವನು ಪಟ್ಟಾಭಿಶಕ್ತನಾದ ಕೆಲವೇ ದಿನಗಳಲ್ಲಿ ವಿಜಯನಗರ ರಾಜರ ಅಧೀನತೆಯಿಂದ ಸ್ವತಂತ್ರ್ಯ ರಾಜನಾದನು. ಈ ಸಮಯದಲ್ಲಿ ಕೌಲೇದುರ್ಗದಲ್ಲಿ ತೊಲೆ ತಮ್ಮ ಮತ್ತು ಮುಂಡಿಗೆ

ತಮ್ಮನ ಮದವನ್ನಳಿಸಿ ಕೌಲೇದುರ್ಗ ವಶಪಡಿಸಿಕೊಂಡ ಅಲ್ಲಿ ಅರಮನೆ ಕಾಶೀ ವಿಶ್ವೇಶ್ವರ ದೇವಾಲಯ ನಿರ್ಮಿಸಿದನು. ಕ್ರಿ.ಶ.೧೫೫೪ರಲ್ಲಿ ಒಂದು ಮಸೀದಿಯನ್ನು ಕಟ್ಟಿಸಿ ಅದಕ್ಕೆ ದತ್ತಿಯನ್ನು ಬಿಟ್ಟ ದಾಖಲೆ ಇದೆ.[೨೪] ಈತನ ನಂತರ ಆತನ ಮಗ ವೀರಭದ್ರ ನಾಯಕ ಕ್ರಿ.ಶ.೧೬೩೦-೧೬೪೬ರವರೆಗೆ ಆಳ್ವಿಕೆ ನಡೆಸಿದನು. ಈತನ ಕಾಲಾವಧಿಯಲ್ಲಿ ವಿಜಾಪುರದ ಆದಿಲ್ ಷಾಹಿ ಸುಲ್ತಾನ ದಂಡನಾಯಕ ರಣದುಲ್ಲಾ ಖಾನ್‌ನ ದಾಳಿಗೆ ತುತ್ತಾಯಿತು. ೧೬೫೯ರಲ್ಲಿ ರಾಜಧಾನಿಯನ್ನು ಇಕ್ಕೇರಿಯಿಂದ ಬಿದನೂರಿಗೆ ಸ್ಥಳಾಂತರಿಸಿದನು ಬಿದನೂರನ್ನು (ವೇಣುಪುರ, ನಗರ) ಎಂದು ಕರೆಯುತ್ತಿದ್ದರು. ಈ ನಗರವನ್ನು "ದಕ್ಷಿಣ ಭಾರತದ ಕಣಜ" ಎಂದು ಜಾಕೋಬಸ್ ಕ್ಯಾಂಟರ್ ವರ್ಣಿಸಿದ್ದಾನೆ.[೨೫]

ನಂತರದಲ್ಲಿ ಕೆಳದಿ ರಾಜವಂಶದಲ್ಲಿ ಪ್ರಖ್ಯಾತನಾದವನು ಚಾಣಕ್ಷದೊರೆ (೧೬೩೦-೧೬೪೬) ಶಿವಪ್ಪನಾಯಕ ಆಡಳಿತ ನಡೆಸಿದನು ಶಿವಪ್ಪ ನಾಯಕನ ಶಿಸ್ತು ಮನೆಮಾತಾಗಿ ಉಳಿದಿದೆ. ಕೆಳದಿ ರಾಜ್ಯದಲ್ಲಿ ಸಾಗುವಳಿ ಭೂಮಿಯನ್ನು ಗುಣಮಟ್ಟದ ಮೇಲೆ ಉತ್ತಮ, ಮಧ್ಯಮ, ಕನಿಷ್ಟ, ಅಧಮ ಹಾಗೂ ಅಧಮಾಧಮ ಎಂದು ೫ ತರದ ವಿಂಗಡನೆ ಮಾಡಿದನು. ಕಂದಾಯವನ್ನು ಅಚ್ಚುಕಟ್ಟಾಗಿ ನಿಭಾಯಿಸಿದ್ದರಿಂದ "ಶಿವಪ್ಪನಾಯಕನ ಸಿಸ್ತು" ಎಂದು ಕರೆಯಲಾಗಿದೆ. ತುಂಗಾನದಿ ತೀರದಲ್ಲಿ ಶಿವರಾಜಪುರ ಅಗ್ರಹಾರ ನಿರ್ಮಿಸಿದನು. ಶೃಂಗೇರಿ ಮತ್ತು ಇತರ ಮಠಗಳಲ್ಲಿ ಈ ಹಿಂದಿನಿಂದ ಬಂದಂತಹ ರಾಜಾಶ್ರಯ ಮುಂದುವರಿಸಿದನು. ಕೆಳದಿ ರಾಜ್ಯವನ್ನು ವಾಣಿಜ್ಯ ಕೇಂದ್ರವಾಗಿ ಮಾಡುವುದು ಈತನ ಗುರಿಯಾಗಿತ್ತು. ನಂತರ ಸೋಮಶೇಖರ ನಾಯಕ ಕ್ರಿ.ಶ.೧೬೬೪-೧೬೭೨ ಆಳ್ವಿಕೆ ನಡೆಸಿದನು. ಈ ಅವಧಿಯಲ್ಲಿ ಮರಾಠರು ಕೌಲೇದುರ್ಗವನ್ನು ಮುತ್ತಿದಾಗ ವೀರಾವೇಶದಿಂದ ಹೋರಾಡಿ ಕೋಟೆ ರಕ್ಷಿಸಿದನು ಇದಾದ ಸ್ವಲ್ಪ ಸಮಯದಲ್ಲಿ ಮರಣ ಹೊಂದಿದನು ನಂತರ ಈತನ ಪತ್ನಿ, ಶಿವಪ್ಪನಾಯಕನ ಸೊಸೆ ೧೬೭೨ರಲ್ಲಿ ಕೌಲೇದುರ್ಗ ಅರಮನೆಯಿಂದ ಬಿದನೂರು ರಾಜ್ಯದ ರಾಣಿಯಾಗಿ ಅಭಿಶಕ್ತಳಾದಳು. ನಂತರ ಬಿಜಾಪುರ ಸೈನ್ಯವನ್ನು ಸೋಲಿಸಿದಳು. ಕ್ರಿ.ಶ.೧೬೯೦ರ ವೇಳೆಗೆ ಶಿವಾಜಿಯ ಮಗ ರಾಜಾರಾಮನಿಗೆ ಆಶ್ರಯ ನೀಡಿದ್ದು ತಪ್ಪೆಂದು ಸಾರಿ ಮೊಘಲ್ ಚಕ್ರವರ್ತಿ ಔರಂಗಜೇಬನು ತನ್ನ ಮಗ ಅಜಮತಾರನೊಂದಿಗೆ ದೊಡ್ಡ ಸೈನ್ಯವನ್ನು ಕಳುಹಿಸಿದನು. ರಕ್ಷಣಾದುರ್ಗವಾದ ಕೌಲೇದುರ್ಗವನ್ನು ಮುತ್ತಿತು ಚನ್ನಮ್ಮಾಜಿ ಬಂದು ಔರಂಗಜೇಬನ ಸೈನ್ಯವನ್ನು ಎದುರಿಸಿದಳು. ಮುಂದುವರಿದು ಸೋದೆ, ಬನವಾಸಿ, ಶಿರಸಿ, ಮೈಸೂರಿನ ದಳವಾಯಿಗಳನ್ನು ಸೋಲಿಸಿದಳು. ಕೆಳದಿ ರಾಜ್ಯದ ಗಡಿಗಳನ್ನು ಭದ್ರಪಡಿಸಿದಳು.

೭. ಬೀಳಗಿ ಅರಸರು

ಕವಲೇದುರ್ಗದ ಮೂರನೇ ತಾಮ್ರಪಟ ಶಾಸನದಲ್ಲಿ ತಿಳಿಸಿರುವಂತೆ ಬೀಳಗಿಯ ಮಹಾಪ್ರಭು ಘಂಟೆವಡೇರ ಮೊಮ್ಮಗ ಶಿವಪ್ಪ ನಾಯಕನ ಮಗನು ಆದ ಇಮ್ಮಡಿ ಶಿವಪ್ಪ ನಾಯಕನ ಆಳ್ವಿಕೆಯನ್ನು ಅದು ಉಲ್ಲೇಖಿಸುತ್ತದೆ. ತೀರ್ಥಹಳ್ಳಿ ತಾಲ್ಲೂಕಿನ ಹುಲುಗನ ಹಳ್ಳಿಯ ಗುರುಶಾಂತ

ದೇವರ ಶಿಷ್ಯರಾದ ಕೊಳೂರು ದೇವರಿಗೆ ೯೦೦ ಗದ್ಯಾಣಗಳಿಗೆ ಹಿಂದೆ ನೀಡಿದ ಕ್ರಯದಾನವನ್ನು ಆಗಿನಿಂದ ಅದನ್ನು ಅವರು ಅನುಭೋಗಿಸುತ್ತಿದ್ದ ವಿಷಯವನ್ನು ಅದು ಪ್ರಸ್ತಾಪಿಸುತ್ತದೆ.[೨೬]

೮. ಹೈದರಾಲಿ ಮತ್ತು ಟಿಪ್ಪು ಸುಲ್ತಾನ್

ಕ್ರಿ.ಶ. ೧೭೬೩ರಲ್ಲಿ ವೀರಮ್ಮಾಜಿ ಬಿದನೂರಿನ ರಾಣಿಯಾಗಿದ್ದಾಗ ಚಿತ್ರದುರ್ಗದ ಮದಕರಿ ನಾಯಕನ ಸಹಾಯದಿಂದ ಹೈದರಾಲಿ ಬಿದನೂರು ಕೋಟೆಯನ್ನು ಮುತ್ತಿದರು. ಸೋತ ವೀರಮ್ಮಾಜಿ ತಲೆ ತಪ್ಪಿಸಿಕೊಂಡು ಕೌಲೇದುರ್ಗಕ್ಕೆ ಓಡಿಹೋದಳು. ಹೈದರನು ಅವಳ ಬೆನ್ನಟ್ಟಿ ಕೌಲೇದುರ್ಗಕ್ಕೆ ಓಡಿಬಂದು ಅವಳನ್ನು ಮತ್ತು ದತ್ತುಪುತ್ರನನ್ನು ಸೆರೆಹಿಡಿದು ಮಧುಗಿರಿ ದುರ್ಗಕ್ಕೆ ಕಳುಹಿಸಿಕೊಟ್ಟರು.

ಅನಂತರ ಹೈದರನು ಬಿದನೂರನ್ನು ಹೈದರ್‌ನಗರವೆಂತಲೂ, ಕೌಲೇದುರ್ಗವನ್ನು ಕಾವಲುದುರ್ಗವೆಂತಲೂ ನಾಮಕರಣ ಮಾಡಿದನು. ಅಂದಿನಿಂದ ಕೌಲೇದುರ್ಗ ಹೈದರ್‌ನ ವಶವಾಯಿತು.[೨೬]

ಕ್ರಿ.ಶ.೧೭೯೯ರಲ್ಲಿ ನಾಲ್ಕನೇ ಆಂಗ್ಲೋ-ಮೈಸೂರು ಯುದ್ಧ ನಡೆದು ಟಿಪ್ಪುಸುಲ್ತಾನ್ ಮಡಿದನು ಆಗ ಅವನ ರಾಜ್ಯ ಬ್ರಿಟೀಷರ ವಶವಾಯಿತು. ಆಗ ಕೌಲೇದುರ್ಗವು ಬ್ರಿಟೀಷರ ವಶವಾಯಿತು.

೯. ಮೈಸೂರು ಒಡೆಯರು

ಕರ್ನಾಟಕ ಇತಿಹಾಸದಲ್ಲಿ ಒಡೆಯರ ಇತಿಹಾಸ ಸ್ವಾರಸ್ಯಪೂರ್ಣವಾಗಿದೆ. ಇವರುಗಳ ತೀರ್ಥಹಳ್ಳಿ ಭಾಗದಲ್ಲಿ ಆಳ್ವಿಕೆ ಮಾಡಿದ್ದು ಕಂಡುಬರುತ್ತದೆ. ಮುಳುಬಾಗಿಲು ಮಠದ ವಶದಲ್ಲಿದ್ದ ತಾಮ್ರಶಾಸನವು ಮೈಸೂರು ದೊರೆ ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಸಂಬಂಧಿಸಿದೆ. ಇದು ಮುಳಬಾಗಿಲಿನ ಶ್ರೀ ಕೃಷ್ಣನಂದ ಸ್ವಾಮಿಮಠಕ್ಕೆ ೧೦೬ ಹೈದರಿ ವರಹ ಮತ್ತು ೦೪ವರಹ ಹಣ ನೀಡಿದ ಸಂಗತಿಯನ್ನು ನಿರೂಪಿಸುತ್ತದೆ. ಈ ಮಠವು ಭಾಗದ ಸಂಪ್ರದಾಯವನ್ನು ಅನುಸರಿಸುತ್ತ ಮಠದ ಸ್ವಾಮಿಯವರು ದೊರೆಯ ಮುಂದೆ ಹಾಜರಿದ್ದು ಮತ್ತು ದೊರೆಯ ಸಹಿಯಿದೆ.[೨೭]

೧೦. ಸ್ವಾತಂತ್ರ್ಯ ಹೋರಾಟ

ಶಿವಮೊಗ್ಗ ಜಿಲ್ಲೆ ರಾಜಕೀಯ ಪ್ರಜ್ಞೆಯಲ್ಲಿ ಮುಂಚೂಣಿಯಲ್ಲಿದ್ದ ಪ್ರದೇಶವಾಗಿತ್ತು. ೧೯೨೦-೧೯೨೧ರಿಂದಲೇ ಸ್ವಾತಂತ್ರ್ಯ ಚಳುವಳಿಯ ಬಿರುಸು ತೀರ್ಥಹಳ್ಳಿ ತಾಲ್ಲೂಕಿನಾದ್ಯಂತ ಹರಡಿತ್ತು.

೧೯೨೭ರಲ್ಲಿ ಆಗಸ್ಟ್ ತಿಂಗಳಿನಲ್ಲಿ ಮಹಾತ್ಮ ಗಾಂಧೀಜಿಯವರು ಅವರ ಪತ್ನಿ ಶ್ರೀಮತಿ ಕಸ್ತೂರ ಬಾ ಅವರೊಂದಿಗೆ ಮಹಾದೇವ ದೇಸಾಯಿ, ಸರ್ದಾರ್ ವಲ್ಲಭ ಬಾಯಿ ಪಟೇಲ, ಗಂಗಾಧರ ರಾವ್ ದೇಶಪಾಂಡೇ, ಮುಂತಾದ ಗಣ್ಯರು ಶಿವಮೊಗ್ಗ, ತೀರ್ಥಹಳ್ಳಿಗೆ ಭೇಟಿ ಕೊಟ್ಟು ಸ್ವಾತಂತ್ರ್ಯ ಮತ್ತು ಅಹಿಂಸಾತ್ಮಕ ಹೋರಾಟಗಳ ತಿಳುವಳಿಕೆ ನೀಡಿ ಹೋಗಿದ್ದು ಒಂದು ಐತಿಹಾಸಿಕ ಘಟನೆ.[೨೮]

ತೀರ್ಥಹಳ್ಳಿ ಭಾಗದ ಪ್ರಮುಖ ಹೋರಾಟಗಾರರೆಂದರೆ ಭೂಪಾಳಂ ಚಂದ್ರಶೇಖರಯ್ಯ, ಶ್ಯಾಮಯ್ಯಗೌಡ ಬಸವಾನಿ ರಾಮಶರ್ಮ, ಶಿವರಾಮ ಜೋಯಿಸಾ, ಶಿವರುದ್ರಪ್ಪ ಹೀರೆಮಠ, ನೀಲಕಂಠಪ್ಪ, ಮಹಾದೇವಪ್ಪ, ರಾಘವೇಂದ್ರ ಚಾರ್ಯ ಸಿ, ಮುಂತಾದವರು.

ಮೇಲೆ ತಿಳಿಸಿದ ಎಲ್ಲಾ ರಾಜಮನೆತನಗಳ ಒಂದು ಆಡಳಿತವು ತೀರ್ಥಹಳ್ಳಿ ಪರಿಸರಕ್ಕೆ ಸೀಮಿತವಾಗಿರದೆ ತಾಲೂಕಿನಾದ್ಯಂತ ಮತ್ತು ಅಕ್ಕಪಕ್ಕದ ತಾಲೂಕಿನಾದ್ಯಂತ ಅರಸರು, ನಾಯಕರುಗಳು ಆಳ್ವಿಕೆ ನಡೆಸಿ ಪ್ರದೇಶವನ್ನು ವಿಸ್ತರಿಸಿ ಆಳ್ವಿಕೆ ನಡೆಸಿದ ಮತ್ತು ಅನೇಕ ದಾನದತ್ತಿಗಳು ನೀಡಿರುವುದು ಅಲ್ಲದೆ ದೇವಾಲಯಗಳ ನಿರ್ಮಾಣ, ಅನೇಕ ಧಾರ್ಮಿಕ ಕಾರ್ಯಗಳನ್ನು ಕೈಗೊಂಡಿರುವುದು ತೀರ್ಥಹಳ್ಳಿ ತಾಲೂಕಿನ ಇತಿಹಾಸದಿಂದ ತಿಳಿದುಬರುತ್ತದೆ.

ಅಡಿಟಿಪ್ಪಣಿ

೧. ಗೋಪಾಲ್ ಆರ್., ೨೦೦೮, ಶಿವಮೊಗ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ ಪ್ರಾಚ್ಯವಸ್ತು ಸಂಗ್ರಹಾಲಯ, ಮೈಸೂರು, ಪುಟಸಂಖ್ಯೆ-೧೭

೨. ಚಂದ್ರಶೇಖರ ಟಿ.ದೇವಂಗಿ, ೧೯೮೬, ತೀರ್ಥಹಳ್ಳಿ ತಾಲ್ಲೂಕು ದರ್ಶನ, ಐಬಿಹೆಚ್, ಪ್ರಕಾಶನ, ಬೆಂಗಳೂರು, ಪುಟಸಂಖ್ಯೆ-೦೫

೩. ಗಿರಿಜ ಟಿ, ೨೦೦೭, ಭಾರತದ ನದಿಗಳು, ದಾವಣಗೆರೆ ನಿಹಾರಿಕಾ ಪ್ರಕಾಶನ, ಪುಟಸಂಖ್ಯೆ-೦೮

೪. ಮಲ್ಲೇಶ್ವರ ಜಿ.ವೆಂಕಟೇಶ್ (ಸಂ)., ೧೯೯೯, ಬಸವರಾಜ ಭೂಪಾಲ ಶಿವತತ್ವರತ್ನಾಕರ, ಸಂಪುಟ-೦೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೫. ಶಿವತಾರಕ್ ಕೆ.ಬಿ., ೨೦೦೧, ಕರ್ನಾಟಕದ ಪುರಾತತ್ವ ನೆಲೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲ, ಹಂಪಿ, ಪುಟಸಂಖ್ಯೆ-೧೦

೬. ಹೆಗ್ಗಡ ರಾಜಾರಾಂ, ೨೦೦೫, ಭಾರತದಲ್ಲಿ ಪ್ರಾಕ್ತನಶಾಸ್ತ್ರ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ, ಪುಟಸಂಖ್ಯೆ-೧೨

೭. ರಾಮಭಟ್ಟ ಬಿ.ಎಸ್., ೨೦೦೧, ಶಿವಮೊಗ್ಗ ಜಿಲ್ಲೆಯ ಇತಿಹಾಸ ಮತ್ತು ಸಂಸ್ಕೃತಿ, ರಾಷ್ಟ್ರೀಯ ಶಿಕ್ಷಣ ಸಮಿತಿ, ಶಿವಮೊಗ್ಗ, ಪುಟಸಂಖ್ಯೆ-೦೯

೮. ರಾಮಭಟ್ಟ ಬಿ.ಎಸ್., ೨೦೦೧, ಪೂರ್ವೋಕ್ತ, ಪುಟಸಂಖ್ಯೆ-೧೪

೯. ರಾಮಭಟ್ಟ ಬಿ.ಎಸ್., ೨೦೦೧, ಪೂರ್ವೋಕ್ತ, ಪುಟಸಂಖ್ಯೆ-೧೬

೧೦.ರಾಮಭಟ್ಟ ಬಿ.ಎಸ್., ೨೦೦೧, ಪೂರ್ವೋಕ್ತ, ಪುಟಸಂಖ್ಯೆ-೩೧

೧೧.ರಾಮಭಟ್ಟ ಬಿ.ಎಸ್., ೨೦೦೧, ಪೂರ್ವೋಕ್ತ, ಪುಟಸಂಖ್ಯೆ-೩೧

೧೨.ರಾಜಾರಾಂ ಹೆಗ್ಗಡೆ, ಅಶೋಕ್ ಶೆಟ್ಟರ್ (ಸಂ)., ೨೦೦೧, ಮಲೆಕರ್ನಾಟಕದ ಅರಸು ಮನೆತನಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೩.ಗೋಪಾಲ್ ಆರ್., ೨೦೦೮, ಶಿವಮೊಗ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯವಸ್ತು ಸಂಗ್ರಹಾಲಯ, ಮೈಸೂರು, ಪುಟಸಂಖ್ಯೆ-೪೩

೧೪.ರಾಮಭಟ್ಟ ಜಿ.ಎಸ್., ೨೦೦೧, ಪೂರ್ವೋಕ್ತ, ಪುಟಸಂಖ್ಯೆ-೧೯

೧೫.ಸೂರ್ಯನಾಥ ಕಾಮತ್, ಕರ್ನಾಟಕದ ಸಂಕ್ಷಿಪ್ತ ಇತಿಹಾಸ, ಪುಟಸಂಖ್ಯೆ–೮೭

೧೬.ರೈಸ್ ಬಿ.ಎಲ್., ೨೦೦೬, ಎಪಿಗ್ರಾಫಿಕ ಕರ್ನಾಟಕ, ಸಂಪುಟ–೧೩, ಪುಟಸಂಖ್ಯೆ–x-vi

೧೭.ಅದೇ ಸಂಪುಟ, ಪುಟಸಂಖ್ಯೆ–x-vi

೧೮.ಅದೇ ಸಂಪುಟ, ಪುಟಸಂಖ್ಯೆ–x-vi

೧೯.ಗೋಪಾಲ್ ಆರ್., ೨೦೦೮, ಪೂರ್ವೋಕ್ತ, ಪುಟಸಂಖ್ಯೆ–೭೦

೨೦.ಗೋಪಾಲ್ ಆರ್., ೨೦೦೮, ಪೂರ್ವೋಕ್ತ, ಪುಟಸಂಖ್ಯೆ–೭೦

೨೧.ಗೋಪಾಲ್ ಆರ್., ೨೦೦೮, ಪೂರ್ವೋಕ್ತ, ಪುಟಸಂಖ್ಯೆ–೭

೨೨.ಗೋಪಾಲ್ ಆರ್., ೨೦೦೮, ಪೂರ್ವೋಕ್ತ, ಪುಟಸಂಖ್ಯೆ–೭೩

೨೩.ರಾಮಭಟ್ಟ ಬಿ.ಎಸ್., ೨೦೦೧, ಪೂರ್ವೋಕ್ತ, ಪುಟಸಂಖ್ಯೆ–೫೩

೨೪.ರಾಮಭಟ್ಟ ಬಿ.ಎಸ್., ೨೦೦೧, ಪೂರ್ವೋಕ್ತ, ಪುಟಸಂಖ್ಯೆ–೫೪

೨೫.ಗೋಪಾಲ್ ಆರ್., ೨೦೦೮, ಪೂರ್ವೋಕ್ತ, ಪುಟಸಂಖ್ಯೆ–೮೪

೨೬.ಜಗನ್ನಾಥ ಶಾಸ್ತ್ರಿ ಕೆ., ೧೯೮೩, ಕೌಲೇದುರ್ಗ, ಐಬಿಎಚ್ ಪ್ರಕಾಶನ, ಬೆಂಗಳೂರು, ಪುಸಂ–೧೩

೨೭.ಜಗನ್ನಾಥ ಶಾಸ್ತ್ರಿ ಕೆ., ೧೯೮೩, ಪೂರ್ವೋಕ್ತ, ಪುಟಸಂಖ್ಯೆ–೧೯

೨೮. ಪುಟ್ಟಣ್ಣ ವೈ.ಎಸ್., ೧೯೯೧, ನಾನು ಕಂಡ ಮಲೆನಾಡು, ಬೆಂಗಳೂರು, ಪುಟಸಂಖ್ಯೆ–೧೯

ಅಧ್ಯಾಯ–ಮೂರು

ಶಾಸನಗಳು

ಅಧ್ಯಾಯ–ಮೂರು

ಶಾಸನಗಳು

ನಾಡಿನ ಐತಿಹಾಸಿಕ ಸಾಂಸ್ಕೃತಿಕ ಜೀವನ ಸಂಗತಿಗಳನ್ನು ದಾಖಲೆಯಾಗಿಸುವ ಸಾಮಾಗ್ರಿಗಳಲ್ಲಿ ಶಾಸನಗಳಿಗೆ ಮಹತ್ವದ ಸ್ಥಾನವಿದೆ. ಅಲ್ಲದೆ ಶಾಸನಗಳು ಅಂದಿನ ಲಿಪಿಯ ವಿಕಾಸ, ಭಾಷಾ, ಸ್ವರೂಪ ತಿಳಿಯಲು ಸಹ ನೆರವಾಗುತ್ತದೆ. ಇತಿಹಾಸಕ್ಕೆ ಶಾಸನಗಳೇ ಪ್ರಮುಖ ಆಕಾರ.

ಶಾಸನ ಎಂಬ ಪದವು ಮೂಲತಃ ಒಂದು ಸಂಸ್ಕೃತ ಶಬ್ಧ ಶಾಸ್ ಎಂಬ ಧಾತುವಿನಿಂದ ನಿಷ್ಪನ್ನವಾಗಿದ್ದು. ಇದರ ಅರ್ಥ ಆಜ್ಞೆ, ಅಪ್ಪಣೆ ಎಂದಾಗುತ್ತದೆ. ಆಂಗ್ಲ ಭಾಷೆಯಲ್ಲಿ Inscription ಎಂದು ಹೇಳುತ್ತಾರೆ. ಆಂಗ್ಲಭಾಷೆಯಲ್ಲಿ Inscribe ಎಂದರೆ ಕೊರೆ, ಕೆತ್ತು ಎಂದರ್ಥ ಆದ್ದರಿಂದ ಕಲ್ಲುಗಳಲ್ಲಿಯೊ, ಲೋಹಗಳಲ್ಲಿಯೂ ಕೆತ್ತಿದ ಬರಹಗಳಿಗೆ Inscription ಎಂದು ಹೆಸರಾಯಿತು. ಹಿಂದೆ ರಾಜರು ಹೊರಡಿಸಿದ ಆಜ್ಞೆಗಳನ್ನು ಶಾಸನ ಎಂಬುದಾಗಿ ಕರೆಯುತ್ತಿದ್ದರು. ಪ್ರಾಚೀನ ಕಾಲದಲ್ಲಿ ರಾಜರು ತಮ್ಮ ಆಜ್ಞೆಗಳನ್ನು ಸಾರ್ವಜನಿಕರಿಗೆ ತಿಳಿಸಲು ಕಲ್ಲು, ತಾಮ್ರಪಟ, ಇತ್ಯಾದಿಗಳಲ್ಲಿ ಬರೆಯಿಸುತ್ತಿದ್ದರು.

ಬಿ.ಸಿ. ಛಬ್ರಾರವರು ಶಾಸನಗಳು ಭಾರತೀಯ ಇತಿಹಾಸದ ಜೀವನಾಡಿ ಎಂದಿದ್ದಾರೆ. ಶಾಸನಗಳನ್ನು ಕಲ್ಲು, ತಾಮ್ರ, ಚಿನ್ನ, ಬೆಳ್ಳಿ, ಕಂಚು, ಹಿತ್ತಾಳೆ, ಕಬ್ಬಿಣದ ತಗಡುಗಳನ್ನು ಮೊದಲಾದವುಗಳ ಮೇಲೆ ಬರೆಯುತ್ತಿದ್ದರು. ಶಾಸನ ಎಂಬ ಪದ ಕೇವಲ ರಾಜಾಜ್ಞೆಗಳಿಗೆ ಸೀಮಿತವಾಗಿರದೇ ಸಾರ್ವಜನಿಕರು ಕೊಡಮಾಡಿದ ದಾನದತ್ತಿಗಳು ಸಹ ಶಿಲಾ ತಾಮ್ರ ಶಾಸನಗಳಾಗಲಿ ಇರುವುದನ್ನು ನೋಡಬಹುದಾಗಿದೆ.

ಒಟ್ಟಾರೆ ಶಾಸನಗಳನ್ನು ಕೆತ್ತಿದವು ಎಂಬ ಅರ್ಥದಲ್ಲಿ ಬಳಸಲಾಗುತ್ತದೆ. ಶಾಸನಗಳನ್ನು ಗಟ್ಟಿ ಪದಾರ್ಥದ ಮೇಲೆ ಕೆತ್ತಿರುವ ಉದ್ದೇಶ ಶಾಶ್ವತವಾಗಿ ಉಳಿಯಬೇಕೆಂಬುದೇ ಆಗಿದೆ. ಕೆಲವೊಂದು ಶಾಸನಗಳು, ಅಪ್ರಿಯವಾಗಿದ್ದರೂ ನಿಷ್ಪಕ್ಷಪಾತವಾದ ಸಂಗತಿಯನ್ನು ನಿರೂಪಿಸುತ್ತವೆ. ಶಾಸನಗಳಿಂದ ಕಾಲಗಣನೆ, ಅವು ಯಾವ, ಯಾರ ಕಾಲದಲ್ಲಿ ಹೇಗೆ ರೂಪಿಸಲ್ಪಡುತ್ತವೆ

ಹಾಗೂ ಅಂದಿನ ಕಾಲಘಟ್ಟದ ಹಲವು ಕ್ಷೇತ್ರಗಳ ಮೇಲೆ ಬೆಳಕು ಚೆಲ್ಲಲು ನೆರವಾಗುತ್ತವೆ.

ಉದ್ದೇಶ

ಶಾಸನಗಳನ್ನು ಹಾಕಿಸುವ ಉದ್ದೇಶ ದಾನ ದತ್ತಿಗಳನ್ನು ತಿಳಿಸುವುದು ರಾಜನ ಪ್ರಶಸ್ತಿಯನ್ನು ವರ್ಣಿಸುವುದು ಆಗಿದ್ದರೂ, ಅಂದಿನ ಸಂಸ್ಕೃತಿಯನ್ನು ತಿಳಿದುಕೊಳ್ಳುವುದು ಇದರ ಮುಖ್ಯ ಉದ್ದೇಶ ಶಾಸನಗಳಲ್ಲಿ ಕಾಲನಿರ್ದೇಗಳಿಲ್ಲದಿದ್ದರೂ ಲಿಪಿ ದೃಷ್ಠಿಯಿಂದ ಕಾಲ ನಿರ್ದೇಶನ ಮಾಡುವುದು ಇದರ ಇನ್ನೊಂದು ವಿಶೇಷತೆ.

ಈ ಶಾಸನಗಳು ಸಮಕಾಲೀನ ದಾಖಲೆಗಳಾಗಿದ್ದರಿಂದ ಕೆಲವೊಮ್ಮೆ ಸಾಹಿತ್ಯಿಕ ಕೃತಿಗಳಲ್ಲೂ ಸಿಗದಂತಹ ಕೆಲವೊಂದು ಘಟನಾವಳಿಗಳು ಶಾಸನಗಳಿಂದ ದೊರೆಯುತ್ತವೆ. ಬೀದಿಗಳಲ್ಲಿ ಉದ್ಯಾನವನಗಳಲ್ಲಿ ನಾಲ್ಕು ದಾರಿಗಳು ಕೂಡುವ ಸ್ಥಳದಲ್ಲಿ ಬಹುಕಾಲ ಉಳಿಯುವಂತೆ ಶಾಸನಗಳನ್ನು ಇಟ್ಟಿರುವುದನ್ನು ಕಾಣುತ್ತೇವೆ. ಶಾಸನ ಅಧ್ಯಯನದಲ್ಲಿ ಗದ್ಯವೇ ಪ್ರಧಾನವಾದರೂ ಭಾಷಾ ದೃಷ್ಟಿಯಿಂದ ಲಿಪಿ ದೃಷ್ಠಿಯಿಂದ ನೋಡಿದಲ್ಲಿ ಇದರ ಚಾರಿತ್ರಿಕ ಬದಲಾವಣೆಯನ್ನು ಗುರುತಿಸಲು ಸಾಧ್ಯವಾಗುತ್ತದೆ.

ತೀರ್ಥಹಳ್ಳಿ ತಾಲ್ಲೂಕಿಗೆ ಸಂಬಂಧಿಸಿದಂತೆ ಎರಡು ನೂರಾ ಇಪ್ಪತ್ತೈದು ಶಾಸನಗಳು ಬಿ.ಎಲ್. ರೈಸ್ ಸಂಪಾದಿತ Epigraphy of Carnatika Vol-13 ಪ್ರಕಟಿತಗೊಂಡಿವೆ. ತೀರ್ಥಹಳ್ಳಿ–೧ಳ೫ನೇ ಚಟ್ಟಕೊಡಗಿ ಶಾಸನವೇ ಈ ಸಂಪುಟದ ಅತಿ ಪ್ರಾಚೀನ ವಿಜಯನಗರ ಕಾಲದ ಶಾಸನವಾಗಿದೆ. ಸಿರಿಪತಿಯ ನರಸಿಂಹ ದೇವರಿಗೆ ನೈವೇದ್ಯ ಸೇವೆಗೆ ದೊರೆಯು ಭೂದಾನ ವಿತ್ತ ವಿಷಯವನ್ನು ಇದು ವಿವರಿಸುತ್ತದೆ.

ದಾನ ಶಾಸನಗಳು

ಪ್ರಾಚೀನ ಕಾಲದಲ್ಲಿ ಕನ್ನಡ ನಾಡಿನಲ್ಲಿ ದಾನ ಪರಂಪರೆಯು ಮಹೋನ್ನತವೂ ಮತ್ತು ಮೌಲ್ಯಯುತವಾದದ್ದು. ತಮ್ಮ ಹೆಸರುಗಳು ಚಿರಾಯುವಾಗಿ, ಅಜರಾಮರವಾಗಿ ಉಳಿಯಲಿ ಎಂಬ ಉದ್ದೇಶದಿಂದ ಧರ್ಮ ಕಾರ್ಯಗಳಿಗಾಗಿ ಹಾಗು ಪರೋಪಕಾರ್ಯಕ್ಕೆ ದಾನ ನೀಡುತ್ತಿದ್ದರು. ದಾನ ಶಾಸನಗಳು ಹೆಚ್ಚಾಗಿ ಧಾರ್ಮಿಕ ದತ್ತಿಯನ್ನುಳ್ಳ ಶಾಸನಗಳಾಗಿದೆ. ಈ ಶಾಸನಗಳ ಧಾರ್ಮಿಕ ದತ್ತಿಯ ಉದ್ದೇಶಿಸುವುದರ ಜೊತೆಗೆ ಖಾಸಗಿ ವ್ಯಕ್ತಿಗಳಿಗೆ ನೀಡಿದ ದಾನಗಳನ್ನು ದಾಖಲು ಮಾಡಿದೆ.

ಉದಾಹರಣೆ:– ದೇವಾಲಯದಲ್ಲಿ ನಡೆಯುವ ಪೂಜೆ, ಪೂಜಾರಿಗಳಿಗೂ, ನರ್ತಿಸುವ ನರ್ತಕಿಯರಿಗೂ, ವಾದ್ಯಗಾರರಿಗೂ ಮಠದಲ್ಲಿ ನಡೆಯುವ ವಿದ್ಯಾದಾನಕ್ಕೂ, ಅಲ್ಲಿನ ಅಧ್ಯಾಪಕ ಮತ್ತು ವಿದ್ಯಾರ್ಥಿವೃಂದಕ್ಕೂ, ಲೋಕೋಪಯೋಗಿ ಕಾರ್ಯಗಳಾದ ಕೆರೆ, ಬಾವಿ, ಅರವಟ್ಟಿಗೆ ಇವುಗಳಲ್ಲದೆ ವ್ಯಕ್ತಿಯೊಬ್ಬನ ಸೇವೆ, ಪರಾಕ್ರಮಗಳನ್ನು ಮನ್ನಿಸಿ ನೀಡಿದ ದಾನವಾಗಿರುತ್ತವೆ.

ದಾನವಾಗಿ ನೀಡುವ ಆರ್ಥಿಕ ಮೂಲ ಭೂಮಿಯಾಗಿರಬಹುದು. ನಗದು ರೂಪದ ಹಣವಾಗಿರಬಹುದು ಅಥವಾ ಅಗತ್ಯ ವಸ್ತುಗಳ ಪೂರೈಕೆಯಾಗಿರಬಹುದು.

ಸಂಖ್ಯೆ–೦೧

ಸ್ಥಳ – ಬಸದಿಯ ಎಡಭಾಗದಲ್ಲಿ ಬಿದ್ದಿರುವ ಕಲ್ಲು

ಗ್ರಾಮ – ಕಣಿವೆ

ಕಾಲಮಾನ – ಕ್ರಿ.ಶ. ೧೦೯೦–೯೧

ಭಾಷೆ – ಕನ್ನಡ

ಆಧಾರ – ತೀರ್ಥಹಳ್ಳಿ ಶಾಸನ ಸಂಪುಟ Vol-13 (EC)೩೦, ಪುಟ–೨೨೯

ಸಾರಾಂಶ:– ಜೀನ ಸ್ತುತಿಯೊಂದಿಗೆ ಆರಂಭವಾಗುವ ಈ ಶಾಸನ ಹೊಯ್ಸಳ ದೇವನ ದಂಡಾಧಿಕಾರಿಯಾದಂತಹ ಭಂಡಾರಿ ಚಂದಿರಮ್ಮಯ್ಯನ ಹೆಂಡತಿ ಬೊಪ್ಪವ್ವ, ಶುಕ್ರ ಸಂವತ್ಸರದ ಪುಷ್ಪ ಮಾಸದಲ್ಲಿ ಸನ್ಯಾಸವ್ರತವನ್ನು ಸ್ವೀಕರಿಸಿ ಸ್ವರ್ಗಸ್ಥಳಾದಳು ಎಂಬ ವಿವರವಿದೆ.

ಸಂಖ್ಯೆ–೦೨

ಸ್ಥಳ – ಮಲ್ಲಿಕಾರ್ಜುನ ಸ್ವಾಮಿ ದೇವಾಲಯದ ಉತ್ತರ ದಿಕ್ಕಿನಲ್ಲಿರುವ ಶಾಸನ

ಪಟ್ಟಣ – ಮೃಗವಧೆ

ಕಾಲಮಾನ – ಕ್ರಿ.ಶ. ೧೧೪೯–೧೧೬೨

ಆಧಾರ – ತೀರ್ಥಹಳ್ಳಿ ಶಾಸನ ಸಂಪುಟ Vol-13 (EC) ೧೬೯ ಪುಟಸಂಖ್ಯೆ–೮೭

ಸಾರಾಂಶ:– ತ್ರಿಭುವನ ಮಲ್ಲ ಎಂಬ ಬಿರುದನ್ನು ಹೊಂದಿರುವ ಕಲ್ಯಾಣ ಚಾಲುಕ್ಯರ ಅರಸ ಮೂರನೇ ತೈಲಪನ ಆಳ್ವಿಕೆಯ ಸಮಯದಲ್ಲಿ ಇವರ ಮಾಂಡಲೀಕರಾಗಿ ಹುಂಚ ಜೈನ ಅರಸನಾದ ಶಾಂತಳಿಗೆ ಸಾವಿರದ ಜಗದೇವ ಶಾಂತರನು ರಾಜನಾಗಿದ್ದನು. ಇವರ ಕಾಲ ಕ್ರಿ.ಶ.೧೧೪೯–೧೧೬೩ ಆದರೆ ಶಾಸನದ ಉದ್ದೇಶ ತಿಳಿದುಬಂದಿರುವುದಿಲ್ಲ.

ಒಟ್ಟಾರೆಯಾಗಿ ಈ ಶಾಸನದಲ್ಲಿ ಮಾಂಡಲೀಕರಾಗಿ ಹುಂಚದ ಜೈನ ಅರಸನಾದ ಶಾಂತಳಿಗೆ ಸಾವಿರದ ಜಗದೇವ ಶಾಂತರನು ರಾಜನಾಗಿದ್ದನು ಎಂಬುದು ತಿಳಿದುಬರುತ್ತದೆ.

ಸಂಖ್ಯೆ–೦೩

ಸ್ಥಳ – ಚಟ್ಟಕೊಡಗಿ ಜವುಗು ಭೂಮಿಯಲ್ಲಿರುವ ಕಲ್ಲು

ಗ್ರಾಮ – ಆರಗ

ಕಾಲಮಾನ – ಕ್ರಿ.ಶ. ೧೩೪೬

ಭಾಷೆ – ಕನ್ನಡ

ಆಧಾರ – ತೀರ್ಥಹಳ್ಳಿ ಶಾಸನ ಸಂಪುಟ Vol-13 (EC)೧೪೫, ಪುಟ–೪೧೫

ಸಾರಾಂಶ:– ತೀರ್ಥಹಳ್ಳಿ ಸಮೀಪದ ಆರಗದ ನರಸಿಂಹ ದೇವರಿಗೆ ನೈವೇದ್ಯ ಸೇವೆಗಾಗಿ ದೊರೆಯು ಭೂದಾನ ವಿತ್ತ ವಿಷಯವನ್ನು ತಿಳಿಸುತ್ತದೆ. ಗರುಡ ನಾರಾಯಣ ಮತ್ತು ವೇದಮಾರ್ಗ ಪ್ರತಿಷ್ಠಾಪನಾಚಾರ್ಯ ಎಂದು ಬಣ್ಣಿಸಲ್ಪಟ್ಟ ನರಹರಿದೇವ ಈ ದಾನವನ್ನು ಸ್ವೀಕರಿಸಿದ ವ್ಯಕ್ತಿ ಎಂಬ ವಿವರವಿದೆ.

ಸಂಖ್ಯೆ-೦೪

ಸ್ಥಳ - ಕಾಶೀವಿಶ್ವೇಶ್ವರ ದೇವಾಲಯದ ಮುಂದಿರುವ ಬಂಡೆಯ ಮೇಲೆ

ಆಧಾರ - ತೀರ್ಥಹಳ್ಳಿ ಶಾಸನ ಸಂಪುಟ Vol-13 (EC) ೩೬, ಪುಟ-೨೩೫

ಭಾಷೆ - ಕನ್ನಡ

ಕಾಲಮಾನ - ಕ್ರಿ.ಶ.೧೩೬೨

ಸಾರಾಂಶ:- ಆರ್ಗಾ ರಾಜ್ಯದ ಒಡೆಯರ್ ಆದಂತಹ ಬುಕ್ಕರಾಯ ಒಡೆಯರ ಮಗ ವಂದಗಿರಿಯ ವಿರುಪಣ್ಣ ಒಡೆಯರು ಕವಲೇದುರ್ಗ ಕೋಟೆಯ ಮೈಲಾರೇಶ್ವರ ದೇವರ ಅಮೃತ ಪಡಿ ನೇವೇದ್ಯಕ್ಕೆ ಕಾರ್ತಿಕ ಸಂವತ್ಸರದ (೧೯ ಅಕ್ಟೋಬರ್-೧೩೬೨) ಬುಧವಾರದಂದು ದಾನವನ್ನು ಕೊಟ್ಟಂತಹ ವಿವರ ಈ ಶಾಸನದಲ್ಲಿದೆ.

ಸಂಖ್ಯೆ-೦೫

ಸ್ಥಳ - ಕಲ್ಲಾಳು ಗ್ರಾಮಸ್ಥರೊಬ್ಬರ ತೋಟದಲ್ಲಿ ನೆಟ್ಟಿರುವ ಕಲ್ಲು

ಆಧಾರ - ತೀರ್ಥಹಳ್ಳಿ ಶಾಸನ ಸಂಪುಟ Vol-13 (EC) ೩೫ ಪುಟ-೯೩೪

ಕಾಲಮಾನ - ಕ್ರಿ.ಶ.೧೩೬೯

ಭಾಷೆ - ಕನ್ನಡ

ಸಾರಾಂಶ:- ಆರಗದ ಒಡೆಯರು ಆದಂತಹ ವೀರಮಾರಪ್ಪ ಒಡೆಯರ್ ಮಗನಾದಂತ ಸೋಮಣ್ಣ ಒಡೆಯರು ಕಾರ್ತಿಕ ಸಂವತ್ಸರ ಗುರುವಾರದಂದು ೧೧ ಅಕ್ಟೋಬರ್ ೧೩೬೯ರಂದು ಜಾಟಗಾರು ಪ್ರದೇಶವನ್ನು ಮುದುವಂಕನಾಡು ಪ್ರದೇಶದ ಜನರಿಗೆ ದಾನವಾಗಿ ಕೊಟ್ಟಿರುವುದನ್ನು ಈ ಶಾಸನದಲ್ಲಿ ವಿವರಿಸಿದೆ.

ಸಂಖ್ಯೆ-೦೬

ಸ್ಥಳ - ಗ್ರಾಮದೇವತೆಯ ಗುಡಿಯ ಬಳಿ ಬಿದ್ದಿರುವ ಕಲ್ಲು

ಪಟ್ಟಣ - ಹುಣಸವಳ್ಳಿ

ಕಾಲಮಾನ - ಕ್ರಿ.ಶ. ೧೩೭೭

ಭಾಷೆ - ಕನ್ನಡ

ಆಧಾರ - ತೀರ್ಥಹಳ್ಳಿ ಶಾಸನ ಸಂಪುಟ Vol-13 (EC)೨೩೩, ಪುಟ-೬೨೪

ಸಾರಾಂಶ:- ರಾಮರಸ ಈತನು ವಿರುಪಣ್ಣ ಒಡೆಯನ ಮನೆಯ ಪ್ರಧಾನನಾದವನು. ಈತನು ಹರಿಹರಪುರ ಎಂಬ ಅಗ್ರಹಾರವನ್ನು ಸ್ಥಾಪಿಸಿ ಅದನ್ನು ೨೨ ಭಾಗಗಳಾಗಿ ಮಾಡಿ ಹಲವಾರು ಗ್ರಾಮದ ಮಹಾಜನರಿಗೆ ನೀಡಿದನು ಹಾಗೆಯೇ ಗೋಸೆಟ್ಟಿ ಎಂಬಾತ ತನ್ನ ತಂದೆ ನಾಗಸೆಟ್ಟಿಯ ಸ್ಮರಣಾರ್ಥವಾಗಿ ಕ್ರಿ.ಶ.೧೩೮೧ರಲ್ಲಿ ನಾಗಸಮುದ್ರ ಎಂಬ ಅಗ್ರಹಾರವನ್ನು ನಿರ್ಮಿಸಿದನು ಎಂದು ತಿಳಿದು ಬರುತ್ತದೆ.

ಸಂಖ್ಯೆ-೦೭

ಸ್ಥಳ - ಗ್ರಾಮದೇವತೆ ಗುಡಿಯ ಬಳಿಬಿದ್ದಿರುವ ಕಲ್ಲು

ಗ್ರಾಮ - ಹುಣಸವಳ್ಳಿ

ಕಾಲಮಾನ – ಕ್ರಿ.ಶ. ೧೩೮೧

ಭಾಷೆ – ಕನ್ನಡ

ಆಧಾರ – ತೀರ್ಥಹಳ್ಳಿ ಶಾಸನ ಸಂಪುಟ Vol-13 (EC)೨೩೨, ಪುಟ–೬೨೩

ಸಾರಾಂಶ:– ಈ ಶಾಸನದ ಹೆಚ್ಚು ಭಾಗ ತ್ರುಟಿತವಾಗಿದೆ ಆರಗದಲ್ಲಿ ವೀರಬುಕ್ಕಣ್ಣ ಒಡೆಯನ ಮಗನಾದಂತಹ ವಂದಗಿರಿ ವಿರೂಪಣ್ಣ ಒಡೆಯನ್ನು ವಿರೂಪಾಕ್ಷನೆಂದು ಪರಿಚಿತನಾಗಿದ್ದ ಸುಮಾರು ೧೮ ವರ್ಷಗಳ ಕಾಲ ಆಳ್ವಿಕೆ ನಡೆಸಿದ್ದು ಈತನ ಹೆಸರಿನಲ್ಲಿ ವಿರೂಪಾಕ್ಷಪುರವೆಂಬ ಅಗ್ರಹಾರವನ್ನು ನಿರ್ಮಾಣ ಮಾಡಿ ಹುಣಸವಳ್ಳಿ ಗ್ರಾಮವನ್ನು ಆ ವಿರೂಪಾಕ್ಷನ ಕೃಪೆಯಿಂದ ಧಾರಾಪೂರ್ವಕವಾಗಿ ದಾನ ನೀಡಿದನು ಎಂಬ ವಿವರವಿದೆ.

ಸಂಖ್ಯೆ–೮

ಸ್ಥಳ – ವಿರುಪಾಪುರ ಕೊಲ್ಲಭಟ್ಟರಲ್ಲಿದ್ದ ತಾಮ್ರಶಾಸನ

ಪಟ್ಟಣ – ತೀರ್ಥಹಳ್ಳಿ

ಕಾಲಮಾನ – ಕ್ರಿ.ಶ. ೧೩೯೪

ಭಾಷೆ – ಕನ್ನಡ

ಆಧಾರ – ತೀರ್ಥಹಳ್ಳಿ ಶಾಸನ ಸಂಪುಟ Vol-13 (EC)೨೨೧, ಪುಟ–೫೯೩

ಸಾರಾಂಶ:– ಈ ಶಾಸನವು ವಿಜಯನಗರದ ವಂಶಾವಳಿಯನ್ನು ತಿಳಿಸುತ್ತದೆ. ಯದುಕುಲದಲ್ಲಿ ಜನಿಸಿದ ಸಂಗಮನಿಗೆ ಐವರು ಗಂಡು ಮಕ್ಕಳು. ಅವರೆಂದರೆ ಹರಿಹರ, ಕಂಪರಾಯ, ಬುಕ್ಕ, ಮಾರಪ್ಪ, ಮುದ್ದಪ್ಪ ಇವರಲ್ಲಿ ಪಾಂಡವರಲ್ಲಿ ಅರ್ಜುನನಂತ ಪ್ರಖ್ಯಾತನಾದವನು ಬುಕ್ಕ ಈತನನ್ನು ಆಡಂಬರದ ಮಾತುಗಳಲ್ಲಿ ಹೊಗಳಲಾಗಿದೆ. ಯುದ್ಧರಂಗದಲ್ಲಿ ಆತನ ನರ್ತನ (ತಾಂಡವ) ಪುರುಷರಲ್ಲಿ ಭೀತಿಯನ್ನು ಹುಟ್ಟಿಸಿತು. ಗೂರ್ಜರು ಜರ್ಜರಿತರಾಗುವಂತೆ ಮಾಡಿತು, ಕಾಂಭೋಜರು ಸ್ಥೈರ್ಯ ಕಳೆದುಕೊಳ್ಳುವಂತೆ ಮಾಡಿತು, ಶಂಕ ಎಂಬ ದೊರೆಯಲ್ಲಿ ದಿಗಿಲು ಉಂಟು ಮಾಡಿತು. ಕಳಿಂಗರು ಭಂಗಿತರಾಗುವಂತೆ ಮಾಡಿದಂತೆ! ಆತನ ಹೆಂಡತಿ ಗಂಗಾಂಬಿಕ ಎರಡನೇ ಹರಿಹರ ಬುಕ್ಕನ ಮಗ. ಈತ ಪೊಡಶ ಮಹಾದಾನಗಳನ್ನು ಮಾಡಿ ಪ್ರಸಿದ್ದನಾದನಂತೆ ಎಂಬ ವಿವರವಿದೆ.

ಸಂಖ್ಯೆ–೦೯

ಸ್ಥಳ – ಹರಿಹರೇಶ್ವರ ದೇವಾಲಯದ ಮುಂದೆ ನೆಟ್ಟಿರುವ ಕಲ್ಲು

ಪಟ್ಟಣ – ತೀರ್ಥಹಳ್ಳಿ

ಕಾಲಮಾನ – ಕ್ರಿ.ಶ.೧೪೦೪

ಭಾಷೆ – ಕನ್ನಡ

ಆಧಾರ – ತೀರ್ಥಹಳ್ಳಿ ಶಾಸನ ಸಂಪುಟ Vol-13 (EC) ೨೨೫, ಪುಟಸಂಖ್ಯೆ–೫೪೭

ಎರಡನೇ ಹರಿಹರನ ಮರಣವನ್ನು ದಾಖಲಿಸುವುದರಿಂದ ಮುಕ್ತಿ ಹರಿಹರಪುರ (ತೀರ್ಥಹಳ್ಳಿ–೨೦೫) ಶಾಸನವು ವಿಜಯನಗರ ಕಾಲದ್ದು.

ತಾರಣ ವರ್ಷೇ, ವರ್ಷೇ

ಮಾಸಿ, ನಭಸ್ಯೇ ತಿಥೌ ದಶಮ್ಯಾಂ ಚ

ವಾರೇ, ಶೌರೇ ಪಿತೃಭೇ

ನಿರ್ವಾಣಂ ಪ್ರಾಪ ಹರಿಹರಾಧೀಶಃ

"ತಾರಣ ಸಂವತ್ಸರದಲ್ಲಿ, ವರ್ಷೇಋತುವಿನಲ್ಲಿ, ನಭಸ್ಯ (ಭಾದ್ರಪದ) ತಿಂಗಳಿನಲ್ಲಿ ದಶಮಿ ಭಾನುವಾರದಂದು (೩೧ ಆಗಸ್ಟ್-೧೪೦೪) ಪಿತೃ (ಮಾಘ) ನಕ್ಷತ್ರವಿದ್ದಾಗ ಶ್ರೇಷ್ಠದೊರೆ ಹರಿಹರ ನಿರ್ವಾಣ ಹೊಂದಿದನು. ಸರಿಯಾಗಿ ಎರಡು ವಾರಗಳ ನಂತರ ಆಶ್ವೀಜ ಶುದ್ದ-೧೧, ಸೋಮವಾರ ಎಂದರೆ ಕ್ರಿ.ಶ.೧೪೦೪ ಸೆಪ್ಟಂಬರ್ ೧೫ರಂದು ಅರಗ ರಾಜ್ಯವನ್ನು ಪಾಲಿಸುತ್ತಿದ್ದ ವಿಠ್ಠಣ ವೊಡೆಯನು ಮುಕ್ತ ಹರಿಹರ ಪುರ ಅಗ್ರಹಾರವನ್ನು ಸ್ಥಾಪಿಸಿದನು ಈಗಲೂ ಈ ಗ್ರಾಮಕ್ಕೆ ಇದೇ ಹೆಸರು ಉಳಿದುಕೊಂಡಿದೆ.

ಸಂಖ್ಯೆ-೧೦

ಸ್ಥಳ – ಕಲಿನಾಥೇಶ್ವರ ದೇವಸ್ಥಾನದ ಪ್ರಕಾರದಲ್ಲಿ ದಕ್ಷಿಣದ ಕಡೆ ನೆಟ್ಟಕಲ್ಲು

ಪಟ್ಟಣ – ಆರಗ

ಭಾಷೆ – ಕನ್ನಡ

ಕಾಲಮಾನ – ಕ್ರಿ.ಶ. ೧೪೦೪

ಆಧಾರ – ತೀರ್ಥಹಳ್ಳಿ ಶಾಸನ ಸಂಪುಟ Vol-13 (EC) ೧೬, ಪುಟ-೨೧೩

ಸಾರಾಂಶ:- ಆರಗದ ಒಡೆಯರ್ ಆಗಿರುವ ವೀರಪ್ಪ ಒಡೆಯರ್ ಈ ಪ್ರದೇಶದ ಮೂಲ ದೇವರಾದಂತಹ ಕಲಾನಾಥೇಶ್ವರ ದೇವರ ಅಮೃತ ಪಡಿಗೆ ಬಂದ್ಯಾ ಗ್ರಾಮವನ್ನು ೧೮ ಭಾಗಗಳಾಗಿ ವಿಂಗಡಿಸಿ ಪುಣ್ಯಕಾಲದಲ್ಲಿ ದಾನವಾಗಿ ನೀಡಿದಂತಹ ವಿವರಗಳಿವೆ.

ಸಂಖ್ಯೆ-೧೧

ಸ್ಥಳ – ಬನಶಂಕರಿ ದೇವಾಲಯದ ಮುಂದೆ ನೆಟ್ಟ ಕಲ್ಲು

ಪಟ್ಟಣ – ಆರಗ

ಭಾಷೆ – ಕನ್ನಡ

ಕಾಲಮಾನ – ಕಿ.ಶ. ೧೪೦೪

ಆಧಾರ – ತೀರ್ಥಹಳ್ಳಿ ಶಾಸನ ಸಂಪುಟ Vol-13 (EC)೨೦, ಪುಟ-೨೧೮

ಸಾರಾಂಶ:- ಆರಗದ ಬೊಮ್ಮಣ್ಣನ ಮಗನಾದಂತಹ ವಿಠ್ಠಣ್ಣನು ಆರಗದ ಹಿರಿಯಂಡೆಯ ಶ್ರೀ ಬನದೇವಿಯ ಅಮೃತ ಪಡಿಗೆ. ಅಭಿಶೇಕಕ್ಕೆ, ಕುಂಕುಮ ಕರ್ಪೂರಕ್ಕೆ ದಿನನಿತ್ಯವೂ ದೀಪ ನೈವೇದ್ಯಕ್ಕೆ ಹಾಗೂ ಪ್ರತಿನಿತ್ಯವೂ ಭೋಜನಕ್ಕೆ ಬೇಕಾಗುವಷ್ಟು ಸೇವೆಗಾಗಿ ಭೂದಾನವನ್ನು ನೀಡಿರುವಂತಹ ವಿವರಗಳಿವೆ.

ಸಂಖ್ಯೆ–೧೨

ಸ್ಥಳ – ಅಂದಿಗೆರೆ ಗದ್ದೆಯೊಂದರಲ್ಲಿ ಬಿದ್ದಿರುವ ಕಲ್ಲು

ಪಟ್ಟಣ – ತೀರ್ಥಹಳ್ಳಿ

ಭಾಷೆ – ಕನ್ನಡ

ಕಾಲಮಾನ – ಕ್ರಿ.ಶ. ೧೪೦೪

ಆಧಾರ – ತೀರ್ಥಹಳ್ಳಿ ಶಾಸನ ಸಂಪುಟ Vol-13 (EC)೦೧, ಪುಟ–೨೮೭

ಸಾರಾಂಶ:– ವಿಜಯನಗರದಲ್ಲಿ II ಹರಿಹರನ ಮಗ ಆಳ್ವಿಕೆ ಮಾಡುತ್ತಿದ್ದ ಕ್ರಿ.ಶ.೧೪೦೪ರಲ್ಲಿ ಆರಗರಾಜ್ಯದಲ್ಲಿ ಬ್ರಹ್ಮರಾಜ ಅಥವಾ ಬೊಮ್ಮಣ್ಣ ಒಡೆಯರ್ ಮತ್ತು ವಿರೂಪಾಂಬಿಕೆ ಮಗನಾದ ವಿಠ್ಠಣ್ಣ ಒಡೆಯರ್ ಪಾಲನೆಯಲ್ಲಿತ್ತು ಇಲ್ಲಿನ ಮೂಲ ದೇವರಾದಂತಹ ಕಲ್ಲಿನಾಥ ದೇವರ ನೈವೇದ್ಯಕ್ಕಾಗಿ ೧೮ ಕಂಪಣಗಳನ್ನು ಮತ್ತು ಮೂರು ಪಟ್ಟಣಗಳನ್ನು ದಾನವಾಗಿ ನೀಡಿರುವ ವಿವರವಿದೆ.

ಸಂಖ್ಯೆ–೧೩

ಸ್ಥಳ – ಮರಹಳ್ಳಿ ಗ್ರಾಮದಲ್ಲಿರುವ ಶಾಸನ

ಪಟ್ಟಣ – ಮರಹಳ್ಳಿ

ಭಾಷೆ – ಕನ್ನಡ

ಕಾಲಮಾನ – ಕ್ರಿ.ಶ. ೧೪೦೬

ಆಧಾರ – ತೀರ್ಥಹಳ್ಳಿ ಶಾಸನ ಸಂಪುಟ Vol-13 (EC)೧೯೯, ಪುಟ–೫೩೬

ಸಾರಾಂಶ:– ಈ ಶಾಸನವು ಸುಮಾರು ೩೦ ಸಾಲುಗಳನ್ನು ಒಳಗೊಂಡಿದೆ. ಹೆಚ್ಚು ಸಾಲುಗಳು ತ್ರುಟಿತವಾಗಿದೆ. ಯಾವ ರಾಜಮನೆತನ ಎಂಬ ಅಂಶ ಸರಿಯಾಗಿ ತಿಳಿದು ಬಂದಿಲ್ಲ. ಮಕರ ಸಂಕ್ರಾಂತಿಯ ಪುಣ್ಯ ಕಾಲದೊಳು ತುಂಗಾ ಭದ್ರ ನದಿ ತೀರದಲ್ಲಿ ರಾಮನಾಥ ದೇವರನ್ನು ಪ್ರತಿಷ್ಠಾಪನೆ ಮಾಡಿದನು ರವಿಚಂದಿರಯ್ಯನ ತಮ್ಮ ಅಮ್ಮಯ್ಯ ಎಂಬಾತನು ದೇಗುಲವನ್ನು ಕಟ್ಟಿಸಿ ಭೂದಾನವನ್ನು ನೀಡಿದ ವಿವರಗಳಿವೆ.

ಸಂಖ್ಯೆ–೧೪

ಸ್ಥಳ – ಮೇಗರವಳ್ಳಿ

ಆಧಾರ – ತೀರ್ಥಹಳ್ಳಿ ಶಾಸನ ಸಂಪುಟ Vol-13 (EC) ೨೧೩, ಪುಟ–೫೭೧

ಕಾಲಮಾನ – ಕ್ರಿ.ಶ.೧೪೧೭

ಭಾಷೆ – ಕನ್ನಡ

ಸಕವರುರ್ಷಂಗಳು ೧೩೩೯ನೇ ವರ್ತ್ತಮಾ
ನದ ಹೇಯಲಂಬಿ ಸಂವತ್ಸರದ ಭಾದ್ರ
ಪದ ಸು ೫ ಶ್ರೀಮತು ರಾಜಾಧಿರಾಜ
ರಾಜಪರಮೇಶ್ವರ ಶ್ರೀ ವೀರಪ್ರತಾಪ ದೇವಮ
ಹಾರಾಯರು ವಿಜಯನಗರಿಯ ಸಾಂಬ್ರಾಜ್ಯಂ

ಗೆಯುತ್ತಿರಲು ರಾಯಪ್ಪ ವಿಠಂಣ

ವೊಡೆಯರು ಆರಗದ ರಾಜ್ಯವನಾಳು

ತ್ತುವಿರಲು ಮೇಗರವಳ್ಳಿಯ ನಾಗಕ್ಕಮಹಾಸತಿ

ಸಾರಾಂಶ:– ವಿಜಯನಗರದಲ್ಲಿ ೧ ದೇವರಾಯ ಆಳ್ವಿಕೆ ನಡೆಸುತ್ತಿರುವ ಸಂದರ್ಭದಲ್ಲಿ ಆರಗ ರಾಜ್ಯದಲ್ಲಿ ವಿಠ್ಠಣ ಒಡೆಯರ್ ಆಳ್ವಿಕೆ ನಡೆಸುತ್ತಿದ್ದರು ಈ ಸಮಯದಲ್ಲಿ ಸಮಯದಲ್ಲಿ ಅಂದರೆ ಭಾದ್ರಪದ ಸಂವತ್ಸರದಲ್ಲಿ ೧೪೧೭ ಆಗಸ್ಟ್ ೧೭ರಂದು ಮೇಗರವಳ್ಳಿಯಲ್ಲಿ ನಾಗಕ್ಕ ಮಹಾಸತಿ ಆದಳು ಎಂಬ ವಿಷಯವನ್ನು ಈ ಶಾಸನ ವಿವರಿಸುತ್ತದೆ.

ಸಂಖ್ಯೆ–೧೫

ಸ್ಥಳ – ಅಖಂಡೇಶ್ವರ ದೇವಾಲಯದ ಮುಂದೆ ಬಿದ್ದಿಸರುವ ಕಲ್ಲು

ಪಟ್ಟಣ – ಆರಗ

ಭಾಷೆ – ಕನ್ನಡ

ಕಾಲಮಾನ – ಕ್ರಿ.ಶ. ೧೪೨೨

ಆಧಾರ – ತೀರ್ಥಹಳ್ಳಿ ಶಾಸನ ಸಂಪುಟ Vol-13 (EC)೨೧, ಪುಟ–೨೧೯

ಸಾರಾಂಶ:– ಈ ಶಾಸನದ ಪ್ರಕಾರ ವಿಜಯನಗರದ ಅರಸು ದೇವರಾಯ ಆಳ್ವಿಕೆ ಕಾಲದಲ್ಲಿ ಆರಗವನ್ನು ಆಳುತ್ತಿದ್ದ ಸಿರಿಗಿರಿನಾಥ ಒಡೆಯರು ಅಖಂಡೇಶ್ವರ ದೇವರ ಅಮೃತ ಪಡಿ, ನಂದಾದೀಪಗಳ ಸೇವೆಗಾಗಿ ಧಾರಾಪೂರ್ವಕವಾಗಿ ದಾನನೀಡಿದ್ದಂತ ವಿಚಾರಗಳಿವೆ.

ಸಂಖ್ಯೆ–೧೬

ಸ್ಥಳ – ಮಾಸ್ತಿ ದೇವಸ್ಥಾನದಲ್ಲಿರುವ ವೀರಗಲ್ಲು

ಪಟ್ಟಣ – ಕೊಳವಳ್ಳಿ

ಭಾಷೆ – ಕನ್ನಡ

ಕಾಲಮಾನ – ಕ್ರಿ.ಶ.೧೪೩೨

ಆಧಾರ – ತೀರ್ಥಹಳ್ಳಿ ಶಾಸನ ಸಂಪುಟ Vol-13 (EC)೧೨೯, ಪುಟ–೩೮೬

ಸಾರಾಂಶ:– ಆರ್ಗಾದ ಒಡೆಯರ್ ಆದಂತಹ ರಾಯಪ್ಪ ಒಡೆಯರ ಮಗನಾದಂತಹ ಗಿರಿನಾಥ ಒಡೆಯರ ಆಳ್ವಿಕೆ ಮಾಡುವಾಗ ಬೊಮ್ಮಣ್ಣನ ಭೂಮಿಯನ್ನು ಘಟ್ಟದ ಮೇಲಿನ ಹೊಂಬುಜದ ಸಾಂತರುಗೆ ದಾನವಾಗಿ ನೀಡಿರುವ ವಿವರವಿದೆ.

ಸಂಖ್ಯೆ–೧೭

ಸ್ಥಳ – ಗ್ರಾಮಸ್ಥರೊಬ್ಬರ ಮನೆಯ ಸಮೀಪ ರಸ್ತೆಯ ಬಳಿ ಇರುವ ಕಲ್ಲು

ಪಟ್ಟಣ – ಆರಗ

ಭಾಷೆ – ಕನ್ನಡ

ಕಾಲಮಾನ – ೧೪–೧೫ನೇ ಶತಮಾನ

ಆಧಾರ – ತೀರ್ಥಹಳ್ಳಿ ಶಾಸನ ಸಂಪುಟ Vol-13 (EC)೧೪೬, ಪುಟ–೪೧೬

ಸಾರಾಂಶ:– ಈ ಶಾಸನವು ೪೬ ಸಾಲುಗಳನ್ನು ಹೊಂದಿದೆ ೧ ರಿಂದ ೩೫ ಸಾಲುಗಳ

ಸವೆದಿವೆ. ಮುಂದುವರಿದ ಸಾಲುಗಳ ವಿವರ ಇಂತಿದೆ ಅಖಂಡೇಶ್ವರ ದೇವರ ಅಮೃತ ಪಡಿಗೆ ದಾನವನ್ನು ಬಿಟ್ಟಂತಹ ವಿಚಾರ ಹಾಗೂ ನಂದಾದೀಪ ೧೫೦ವರನ ಭೂಮಿಯನ್ನು ದಾನಮಾಡುವಂತಹ ವಿವರವಿದೆ.

ಸಂಖ್ಯೆ–೧೮

ಸ್ಥಳ – ಗುಂಡುಗದ್ದೆ ಕಾಡಿನಲ್ಲಿ ನೆಟ್ಟಿರುವ ಕಲ್ಲು

ಗ್ರಾಮ – ವಿರುಪಾಪುರ

ಕಾಲಮಾನ – ೧೫ನೇ ಶತಮಾನ

ಭಾಷೆ – ಕನ್ನಡ

ಆಧಾರ – ತೀರ್ಥಹಳ್ಳಿ ಶಾಸನಸಂಪುಟ Vol-13 (EC)೨೧೮, ಪುಟ–೫೮೨

ಸಾರಾಂಶ:– ಈ ಶಾಸನವು ಸುಮಾರು ೪೮ ಸಾಲುಗಳನ್ನು ಹೊಂದಿದೆ. ವೆಂಕಟಾದ್ರಿಯ ಹೆಂಡತಿಯು ವೀರುಪಣ್ಣ ನಾಯಕನ ಮಗಳು ಆದರ ಆಕೆಯ ಹೆಸರನ್ನು ತಿಳಿಸಿಲ್ಲಾ ವೀರಶೈವ ಮಠಗಳಿಗಾಗಿ ಹೇರತ್ತುಗಳ ಮೂಲಕ ಸಾಗಾಣಿಕೆ ಮಾಡುವ ವಸ್ತು–ಸಾಮಾಗ್ರಿಗಳ ಮೇಲಿನ ಸುಂಕವನ್ನು ಮನ್ನಾ ಮಾಡಿದಳು ಎಂದು ಈ ಶಾಸನದಲ್ಲಿದೆ.

ಸಂಖ್ಯೆ–೧೯

ಸ್ಥಳ – ಸದಾಶಿವ ದೇವಾಲಯದ ಮುಂದೆ ಬಿದ್ದಿರುವ ಕಲ್ಲು

ಪಟ್ಟಣ – ಅಳಗವಾಗಿಲು

ಭಾಷೆ – ಕನ್ನಡ

ಕಾಲಮಾನ – ಕ್ರಿ.ಶ. ೧೫೫೭

ಆಧಾರ – ತೀರ್ಥಹಳ್ಳಿ ಶಾಸನ ಸಂಪುಟ Vol-13 (EC)೫, ಪುಟ–೧೯೮

ಸಾರಾಂಶ:– ಅಳಗವಾಗಿಲು ಪ್ರದೇಶದ ಗ್ರಾಮಸ್ಥರು ಮತ್ತು ಊರಿನ ಮುಖಂಡನಾದಂತಹ ರಾಚಪ್ಪನು ಸದಾಶಿವ ದೇವಾಲಯದ ಧರ್ಮಕಾರ್ಯಗಳಿಗೆ ಇಂತಿಷ್ಟು ಪ್ರಮಾಣದಲ್ಲಿ ಅಂದರೆ ೯೭ ಖಂಡೂಗ ಭತ್ತವನ್ನು ದಾನವಾಗಿ ಕೊಟ್ಟಿರುವಂತಹ ವಿವರಗಳು ಈ ಶಾಸನದಲ್ಲಿವೆ.

ಸಂಖ್ಯೆ–೨೦

ಸ್ಥಳ – ಬಳಗೋಡು ಗ್ರಾಮಸ್ಥರೊಬ್ಬರ ಬ್ಯಾಣದಲ್ಲಿರುವ ಕಲ್ಲು

ಪಟ್ಟಣ – ಆರಗ

ಭಾಷೆ – ಕನ್ನಡ

ಕಾಲಮಾನ – ಕ್ರಿ.ಶ. ೧೫೬೦

ಆಧಾರ – ತೀರ್ಥಹಳ್ಳಿ ಶಾಸನ ಸಂಪುಟ Vol-13 (EC)೧೮೦, ಪುಟ–೪೯೫

ಸಾರಾಂಶ:– ಮಾರ್ಗಶಿರ ಶುದ್ಧ ಶುಕ್ರವಾರ ನವೆಂಬರ್–೨೨, ೧೫೬೦ಕ್ಕೆ ಸರಿಹೊಂದಿದಂತೆ ಸದಾಶಿವರಾಯ ನಾಯಕ ಎಂಬಾತನು ಆರಗ ರಾಜ್ಯವನ್ನಾಳುತ್ತಿರಲು ಕೃಷ್ಣದೇವ ಎಂಬ

ವ್ಯಕ್ತಿಯು ನರಸಿಂಹ ಪುರವಾದ ಬಳ್ಳಗೋಡಿನಲ್ಲಿ ದೇಗುಲದ ನಿರ್ಮಾಣ, ಮತ್ತು ದೇವಪ್ರತಿಷ್ಠಾಪನೆ, ಮಾಡಿದ ವಿಷಯವನ್ನು ತಿಳಿಸುತ್ತದೆ. ಜೊತೆಗೆ ದೇವರ ಸೇವೆಗೆ ಹಾಗೂ ಛತ್ರಕ್ಕೆ ಕೂಡ ಗ್ರಾಮದ ಮಹಾಜನರು ಭೂದಾನ ವಿತ್ತ ವಿಷಯ ತಿಳಿಸುತ್ತದೆ.

ಸಂಖ್ಯೆ–೨೧

ಸ್ಥಳ – ಕವಲೇದುರ್ಗ ಖಾಜಿ ಸೈಯದ್ ಹಸನ್ ಸಾಹೇಬರಲ್ಲಿದ್ದ ತಾಮ್ರ ಶಾಸನ

ಕಾಲಮಾನ – ಕ್ರಿ.ಶ. ೧೬೨೭

ಭಾಷೆ – ಕನ್ನಡ

ಆಧಾರ – ತೀರ್ಥಹಳ್ಳಿ ಶಾಸನ ಸಂಪುಟ–೧೩ (EC) ೪೦, ಪುಟ–೨೩೬

ಸಾರಾಂಶ:– ಕೆಳದಿ ರಾಜ್ಯದ ಅರಸ ವೆಂಕಟಪ್ಪ ನಾಯಕನು ಭುವನಗಿರಿಯಲ್ಲಿ ಕಟ್ಟಿಸಿದ ಮಸೀದಿಗೆ ದಾನವನ್ನು ನೀಡಿದ್ದನ್ನು ಹಾಗೂ ಅಲ್ಲಿನ ಮುಲ್ಲಾಗಳು ಮಸೀದಿಯ ದಿನ ನಿತ್ಯದ ಕಾರ್ಯಗಳನ್ನು ನಡೆಸಿಕೊಂಡು ಹೋಗಲು ಪಕ್ಕದ ಸೀಮೆ ಅಂದರೆ ಹಲಸಿನ ಹಳ್ಳಿ ಗ್ರಾಮವನ್ನು ಪ್ರಭವ ಸಂವತ್ಸರ ೨೦ ಏಪ್ರಿಲ್ ೧೬೨೭ರಲ್ಲಿ ದಾನವಾಗಿ ನೀಡಿದ್ದು ಕಾಣಬಹುದು.

ಸಂಖ್ಯೆ–೨೨

ಸ್ಥಳ – ತೀರ್ಥಹಳ್ಳಿ ಶ್ಯಾಮರಾಯರಲ್ಲಿದ್ದ ತಾಮ್ರಶಾಸನ

ಗ್ರಾಮ – ತೀರ್ಥಹಳ್ಳಿ

ಕಾಲಮಾನ – ಕ್ರಿ.ಶ. ೧೬೪೦

ಭಾಷೆ – ಕನ್ನಡ

ಆಧಾರ – ತೀರ್ಥಹಳ್ಳಿ ಶಾಸನ ಸಂಪುಟ Vol-13 (EC)೧೫೭, ಪುಟ–೪೪೧

ಸಾರಾಂಶ:– ಕೆಳದಿ ಭದ್ರಪ್ಪ ನಾಯಕನ ಪುತ್ರನಾದಂತಹ ವೀರಭದ್ರ ನಾಯಕನು ಆರಗ ರಾಜ್ಯದ ಮುದುವಂಕ ಸೀಮೆಯ ನೆರಟೂರು, ಸಕ್ರಬೈಲು, ಗಾಜನೂರು, ತ್ರಿಯಂಬಕಪುರ ಎಂಬ ನಾಲ್ಕು ಹಳ್ಳಿಗಳನ್ನು ೩೪೮ ಮೂರುನೂರಾ ನಲವತ್ತೆಂಟು ವರಹಗಳಿಗೆ ಭೂದಾನ ಮಾಡಿದ ವಿವರವಿದೆ.

ಸಂಖ್ಯೆ–೨೩

ಸ್ಥಳ – ಆದಿನಾಥಸ್ವಾಮಿ ಬಸ್ತಿಯ ರಂಗಮಂಟಪ ನೈರುತ್ಯ ಮೂಲೆಯಲ್ಲಿ ನೆಟ್ಟಿರುವ ಕಲ್ಲು

ಪಟ್ಟಣ – ಮೇಳಿಗೆ

ಕಾಲಮಾನ – ಕ್ರಿ.ಶ. ೧೬೪೦

ಭಾಷೆ – ಕನ್ನಡ

ಆಧಾರ – ತೀರ್ಥಹಳ್ಳಿ ಶಾಸನ ಸಂಪುಟ Vol-13 (EC)೨೧೫, ಪುಟ–೫೭೫

ಸಾರಾಂಶ:– ಜೀನಸ್ತುತಿಯೊಂದಿಗೆ ಈ ಶಾಸನವು ಆರಂಭವಾಗುತ್ತದೆ. ಮುಂದುವರಿದು ಈ ಆದಿನಾಥ ಸ್ವಾಮಿ ಬಸ್ತಿಯ ನಿರ್ಮಾಣ ಮಾಡಿದವರ ಬಗ್ಗೆ ವಿವರಿಸುತ್ತದೆ. ಮೇಳಿಗೆಯ ಬೊಮ್ಮಣ್ಣ ಶೆಟ್ಟಿಯ ಮಕ್ಕಳಾದಂತಹ ಪದುಮಣ್ಣ ಶೆಟ್ಟಿ, ಚಂದಣ್ಣ ಶೆಟ್ಟಿ, ಮಣಿಕ ಸೆಟ್ಟಿಯರು

ಅಂದಣ್ಣ ಶೆಟ್ಟಿಯವರು ತಮ್ಮ ತಾತ ನಿರ್ಮಿಸಿದಂತಹ ಬಸದಿಯನ್ನು ಹೊಸದಾಗಿ ಶಿಲಮಯವಾಗಿ ಕಟ್ಟಿಸಿರುವುದನ್ನು ತಿಳಿಸುತ್ತದೆ. ಹಾಗೆಯೇ ವಿಶೇಷವಾಗಿ ಬೊಮ್ಮಣ್ಣ ಶೆಟ್ಟಿಯ ಹೆಸರನ್ನು ಉಲ್ಲೇಖಿಸುತ್ತದೆ.

ಸಂಖ್ಯೆ–೨೪

ಸ್ಥಳ – ಕಾಡಿನಲ್ಲಿ ಬಂಡೆಯ ಮೇಲಿರುವ ಶಾಸನ

ಗ್ರಾಮ – ದೀವರ ಮಳಲಿ

ಭಾಷೆ – ಕನ್ನಡ

ಕಾಲಮಾನ – ಕ್ರಿ.ಶ.೧೬೭೨

ಆಧಾರ – ತೀರ್ಥಹಳ್ಳಿ ಶಾಸನ ಸಂಪುಟ Vol-13 (EC)೧೭೪, ಪುಟ–೪೮೨

ಸಾರಾಂಶ:– ಕೆಳದಿ ರಾಜ್ಯದಲ್ಲಿ ಚನ್ನಮ್ಮ ಆಳ್ವಿಕೆ ನಡೆಸುತ್ತಿರುವಾಗ ಶರಬುದಾರ ಎರೈಯನ್ನು ೫೦೦ ಗದ್ಯಾಣಗಳಿಗೆ ದೀವರ ಮಳಲಿ ಗ್ರಾಮವನ್ನು ಕೊಂಡು ಮಳಲಿಮಠದ ನಾಗಾರ್ಜುನ ಸ್ವಾಮಿಗಳಿಗೆ ದಾನ ಮಾಡಿದ ವಿವರವಿದೆ.

ಸಂಖ್ಯೆ–೨೫

ಸ್ಥಳ – ಕೊನೇರಿಪುರ ಶಾಮಾಚಾರಿಯವರಲ್ಲಿದ್ದ ತಾಮ್ರಶಾಸನ

ಪಟ್ಟಣ – ಕೋನೇರಿಪುರ

ಭಾಷೆ – ಕನ್ನಡ

ಕಾಲಮಾನ – ಕ್ರಿ.ಶ.೧೬೭೮

ಆಧಾರ – ತೀರ್ಥಹಳ್ಳಿ ಶಾಸನ ಸಂಪುಟ Vol-13 (EC)೧೫೬, ಪುಟ–೬೭೮

ಸಾರಾಂಶ:– ಕೆಳದಿ ಸೋಮಶೇಖರ ನಾಯಕನ ಪತ್ನಿ ಚೆನ್ನಮ್ಮಾಜಿ ತುಂಗಾಭದ್ರ ತೀರದಲ್ಲಿ ಕಟ್ಟಿಸಿದ ಕೋನೇರಿಪುರ ಅಗ್ರಹಾರ ಮತ್ತು ದೇವಸ್ಥಾನಗಳಿಗೆ ದಾನವನ್ನು ಬಿಟ್ಟಂತಹ ವಿವರವಿದೆ ಹಾಗೂ ಮಲ್ಲಿಕಾರ್ಜುನ ದೇವರ ಅಮೃತ ಪಡಿ ನೈವೇದ್ಯಕ್ಕೆ ದಾನವನ್ನು ಕೊಟ್ಟಂತಹ ವಿವರಗಳಿವೆ.

ಸಂಖ್ಯೆ–೨೬

ಸ್ಥಳ – ಕೂಡುಗೊಳಿ ಕಾಡಿನಲ್ಲಿರುವ ಚೆನ್ನಕೇಶವ ದೇವಾಲಯದ ಮುಂದಿರುವ ಕಲ್ಲು

ಪಟ್ಟಣ – ಆರಗ

ಭಾಷೆ – ಕನ್ನಡ

ಕಾಲಮಾನ – ಕ್ರಿ.ಶ. ೧೬೮೭

ಆಧಾರ – ತೀರ್ಥಹಳ್ಳಿ ಶಾಸನ ಸಂಪುಟ Vol-13 (EC)೧೨೪, ಪುಟ–೩೭೯

ಸಾರಾಂಶ:– ಕೆಳದಿ ಚನ್ನಮ್ಮಾಜಿ ಆಳ್ವಿಕೆ ಸಮಯದ ಅವಳ ಭಂಡಾರ ಲೆಕ್ಕ ಪತ್ರ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದ ವೆಂಕಪ್ಪಯ್ಯನು ಚನ್ನಕೇಶವ ದೇವರು, ಸೋಮೇಶ್ವರ ದೇವರು ಮತ್ತು ಹನುಮಂತದೇವರ ಪಾದಕ್ಕೆ ಸಮರ್ಪಿಸಿ ಅಗ್ರಹಾರವನ್ನು ನಿರ್ಮಾಣ ಮಾಡಿದ ವಿವರ ಈ ಶಾಸನದಲ್ಲಿದೆ.

ಸಂಖ್ಯೆ–೨೭

ಸ್ಥಳ – ಕವಲೇದುರ್ಗ ಮಠದಲ್ಲಿನ ತಾಮ್ರಶಾಸನ

ಪಟ್ಟಣ – ಕವಲೇದುರ್ಗ

ಭಾಷೆ – ಕನ್ನಡ

ಕಾಲಮಾನ – ಕ್ರಿ.ಶ. ೧೬೯೫

ಆಧಾರ – ತೀರ್ಥಹಳ್ಳಿ ಶಾಸನ ಸಂಪುಟ Vol-13 (EC)೪೭, ಪುಟ–೨೪೪

ಸಾರಾಂಶ:– ಕೆಳದಿ ಸೋಮಶೇಖರ ನಾಯಕನ ಧರ್ಮಪತ್ನಿ ಚೆನ್ನಮ್ಮಾಜಿ ಆರಗದ ಕಂಬಾಳ ಸಿದ್ದರಾಮ ದೇವರ ಶಿಷ್ಯರು ವಿರೂಪಾಕ್ಷ ದೇವರಿಗೆ ಭೂಮಿಯನ್ನು ದಾನ ನೀಡಿದ ಉಲ್ಲೇಖವಿದೆ.

ಸಂಖ್ಯೆ–೨೮

ಸ್ಥಳ – ಮಠದಲ್ಲಿದ್ದ ತಾಮ್ರಪಟ ಶಾಸನ

ಪಟ್ಟಣ – ಕವಲೇದುರ್ಗ

ಕಾಲಮಾನ – ಕ್ರಿ.ಶ. ೧೭೧೨

ಆಧಾರ – ತೀರ್ಥಹಳ್ಳಿ ಶಾಸನ ಸಂಪುಟ Vol-13 (EC)೭೦, ಪುಟ–೨೭೯

ಲಿಪಿ – ಕನ್ನಡ

ಸಾರಾಂಶ:– ಕೆಳದಿ ವೆಂಕಟಪ್ಪನ ಮಗನಾದಂತಹ ಭದ್ರಪ್ಪನಾಯಕನು ಆರಗದ ಕಲಾನಾಥೇಶ್ವರ ದೇವರಿಗೆ ದೇವಸ್ಥಾನವನ್ನು ಮಾಡಿಸಿ, ದೇವರನ್ನು ಪ್ರತಿಷ್ಠಾಪನೆಯನ್ನು ಮಾಡಿ ಭೂಮಿಯನ್ನು ಸಾಗುವಳಿ ಈ ಮಠಕ್ಕೆ ಭೂದಾನವನ್ನು ಮಾಡಿರುವ ವಿಷಯವನ್ನು ಈ ಶಾಸನದಲ್ಲಿದೆ. ಹಾಗೆ ಮುಂದುವರಿದುಗ ದುರ್ಗದ ವೆಂಕಟಾಪುರದ ಅಗ್ರಹಾರಕ್ಕೆ ದಾನವಾಗಿ ನೀಡಿರುವುದನ್ನು ಈ ಶಾಸನವು ಒಳಗೊಂಡಿದೆ.

ಸಂಖ್ಯೆ–೨೯

ಸ್ಥಳ – ಮಲ್ಲಿಕಾರ್ಜುನ ಸ್ವಾಮಿ ದೇವಾಲಯದ ಶಿಖರ ಕಳಸದ ಶಾಸನ

ಪಟ್ಟಣ – ಮೃಗವಧೆ

ಕಾಲಮಾನ – ಕ್ರಿ.ಶ. ೧೭೧೪

ಭಾಷೆ – ಕನ್ನಡ

ಆಧಾರ – ತೀರ್ಥಹಳ್ಳಿ ಶಾಸನ ಸಂಪುಟ Vol-13 (EC)

ಸಾರಾಂಶ:– ಕೆಳದಿ ಸೋಮಶೇಖರ ನಾಯಕ ಅನೇಕ ಬಾರಿ ಘಟ್ಟದ ಮೇಲಿನ ಕೆಳಗಿನ ತೀರ್ಥಕ್ಷೇತ್ರ ಸಂದರ್ಶಿಸಿದನಲ್ಲದೆ ಅವುಗಳ ಜೀರ್ಣೋದ್ಧಾರ ಮಾಡಿದರ ಬಗ್ಗೆ ಉಲ್ಲೇಖಗಳಿವೆ. ಈತ ದೇವಾಲಯಕ್ಕೆ ಅನೇಕ ದಾನ ದತ್ತಿಗಳನ್ನು ನೀಡಿದ್ದು ವಿವರವಿದೆ.

ಸಂಖ್ಯೆ–೩೦

ಸ್ಥಳ – ಗೋಪಾಲಕೃಷ್ಣ ದೇವಸ್ಥಾನದ ಮುಖಮಂಟಪದ ಮುಂದೆ

ಪಟ್ಟಣ – ಆಗುಂಬೆ

ಭಾಷೆ - ಕನ್ನಡ

ಕಾಲಮಾನ - ಕ್ರಿ.ಶ. ೧೭೫೩

ಆಧಾರ - ತೀರ್ಥಹಳ್ಳಿ ಶಾಸನ ಸಂಪುಟ Vol-13 (EC)೧೨, ಪುಟ-೨೦೯

ಸಾರಾಂಶ:- ಆಗುಂಬೆಯ ಗೋಪಾಲ ಕೃಷ್ಣ ದೇವಾಲಯದ ಮುಖಮಂಟಪವನ್ನು ಕೋಟೆಯಣ ಹಗ್ಗಡೆಯ ಮೊಮ್ಮಗಳು ದುಗ್ಗಮ್ಮ ದುರಸ್ತಿ ಮಾಡಿದಳು ಮುಂದುವರಿದು ಬೊಮ್ಮರಸ ಹೆಗ್ಗಡೆಯ ಸೇವೆಯನ್ನು ಉಲ್ಲೇಖಿಸುತ್ತದೆ. ಆತ ಪ್ರಾಯಶಃ ದುಗ್ಗಮ್ಮಳ ಗಂಡನಿರಬೇಕು ಶಾಸನ ಕೆಳಗೆ ಎರಡು ಉಬ್ಬು ಶಿಲ್ಪಗಳು ದುಗ್ಗಮ್ಮ ಮತ್ತು ಬೊಮ್ಮರಸ ಹೆಗ್ಗಡೆಯವರನ್ನು ಪ್ರತಿನಿಧಿಸುತ್ತದೆ ಎಂಬ ವಿವರಗಳಿವೆ.

ಸಂಖ್ಯೆ-೩೧

ಸ್ಥಳ - ಮಸೀದಿಯ ಮಿರಾಜ್‌ನ ಎಡಭಾಗದಲ್ಲಿರುವ ಶಾಸನ

ಪಟ್ಟಣ - ಕವಲೇದುರ್ಗ

ಕಾಲಮಾನ - ೧೭ನೇ ಶತಮಾನ

ಆಧಾರ - ತೀರ್ಥಹಳ್ಳಿ ಶಾಸನ ಸಂಪುಟ Vol-13 (EC)೩೮, ಪುಟ

ಒಂದನೆಯ ಶಾಸನ

"ಮಸ್ಜಿದಿ ಬಾಲಾ"

ಸಾರಾಂಶ:- "ಮಸ್ಜಿದಿ" ಎನ್ನುವುದು ಉರ್ದುವಿನಲ್ಲಿ "ಮಸ್ಜಿದ್" ಅಂದರೆ ಮಸೀದಿ ಅಥವಾ ಪ್ರಾರ್ಥನಾ ಸ್ಥಳ ಎಂದರ್ಥ. ಇದನ್ನು ಅರಬ್ಬಿ ಭಾಷೆಯಲ್ಲಿ ಮಸ್ಜಿದುಲ್ ಎನ್ನುವರು. "ಬಾಲಾ" ಅಂದರೆ ಎತ್ತರವಾದ, ಉನ್ನತವಾದ, ಶ್ರೇಷ್ಠವಾದ ಅಥವಾ ಪವಿತ್ರವಾದ ಎಂದರ್ಥೈಸಬಹುದು. ಅಂದರೆ ಇದೊಂದು ಶ್ರೇಷ್ಠವಾದ ಅಥವಾ ಪವಿತ್ರವಾದ ಮಸೀದಿ ಎಂದರ್ಥ. ಹೀಗೆ ಈ ಮಸೀದಿಯನ್ನು "ಮಸೀದಿ ಬಾಲಾ" ಅಂದರೆ "ಶ್ರೇಷ್ಠವಾದ" ಅಥವಾ "ಪವಿತ್ರವಾದ ಮಸೀದಿ" ಎಂದು ಕರೆದಿದೆ.

ಸಂಖ್ಯೆ-೩೨

ಸ್ಥಳ - ಮಸೀದಿಯ ಮಿರಾಜ್‌ನ ಬಲಭಾಗದಲ್ಲಿರುವ ಶಾಸನ

ಪಟ್ಟಣ - ಕವಲೇದುರ್ಗ

ಕಾಲಮಾನ - ೧೭ನೇ ಶತಮಾನ

ಆಧಾರ - ತೀರ್ಥಹಳ್ಳಿ ಶಾಸನ ಸಂಪುಟ Vol-13 (EC)೩೯, ಪುಟ

ಎರಡನೇ ಶಾಸನ

೧. ಬಿಸ್ಮಿಲ್ಲಾ ರ್ರಮಹಮಾನಿರ್ರಹೀಮ್

೨. ಲಾಯಿಲಾಹ ಇಲ್ಲಲ್ಲಾಹು ಮೊಹಮ್ಮದುರ್

೩. ರಸೂಲಿಲ್ಲಾಹ್ ಹಜರತ್ ಅಬೂ

೪. ಬಕರ್ ಉಮರ್ ಉಸ್ಮಾನ್ ಅಲಿ ರೆಜ್ವಾದ್ (ರಜಿಯಲ್ಲಾಹು ಅನ್ಹು)

"ಬಿಸ್ಮಿಲ್ಲಾರ್ರಮಹವಾನಿರ್ರಹೀಮ್" ಅಂದರೆ "ಆ ಪರಮ ದಯಾಮಯಿಯೂ ಕರುಣಾನಿಧಿಯೂ ಆಗಿರುವ ಅಲ್ಲಾಹ್‌ನ ನಾಮದಿಂದ ಎಂಬ ಅರ್ಥದಲ್ಲಿ ಮುಸ್ಲಿಮರ ದೇವನಾದ "ಅಲ್ಲಾಹ್"ನ ಸ್ತುತಿಯಿಂದ ಪ್ರಾರಂಭವಾಗಿದೆ ಎರಡು ಮತ್ತು ಮೂರು ಸಾಲಿನಲ್ಲಿ "ಲಾಯಿಲಾಹ ಇಲ್ಲಲ್ಲಾಹು ಮೊಹಮ್ಮದುರ್ ರಸೂಲಿಲ್ಲಾಹ್" ಬಂದಿದೆ ಅಲ್ಲಾನನ್ನು ಹೊರೆತು ಪಡಿಸಿ ಬೇರೆ ಯಾವ ದೇವರೂ ಇಲ್ಲ; ನಾಲ್ಕನೇ ಸಾಲಿನಲ್ಲಿ "ಅಬುಬಕರ್, ಉಮರ್, ಉಸ್ಮಾನ್, ಅಲಿ ಇವರು ಮೊಹಮ್ಮದ್ ಪೈಗಂಬರ್‌ನ ತರುವಾಯ ಇಸ್ಲಾಂ ಧರ್ಮದ ಪ್ರಸಾರ ಕಾರ್ಯವನ್ನು ಮಾಡುವರು.[೨] ಈ ಎರಡು ಶಾಸನಗಳಲ್ಲಿ ತೇದಿವಿವರ ಕೊಟ್ಟಿಲ್ಲಾ.

ಅಡಿಟಿಪ್ಪಣಿ

೧. ಗೋಪಾಲ್ ಆರ್.(ಸಂ)., ೨೦೦೮, ಶಿವಮೊಗ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ ಪ್ರಾಚ್ಯವಸ್ತು ಸಂಗ್ರಹಾಲಯ, ಮೈಸೂರು, ಪುಟಸಂಖ್ಯೆ–೧೮೧

೨. ಅದೇ, ಪುಟಸಂಖ್ಯೆ–೧೮೨

ಅಧ್ಯಾಯ–ನಾಲ್ಕು

ಸ್ಮಾರಕಗಳು

ಅಧ್ಯಾಯ-ನಾಲ್ಕು

ಸ್ಮಾರಕಗಳು

ಮಾನವನು ತನ್ನ ನಾಗರಿಕತೆಯ ಪ್ರಗತಿಯ ಪಥದಲ್ಲಿ ನಡೆದಂತೆ ತನ್ನ ಮತ್ತು ತನ್ನ ಸಮುದಾಯದ ಲೌಕಿಕ ಸಂಪತ್ತನ್ನು ಬೆಳೆಸುತ್ತಾ ನಡೆದನು. ಹಲವು ಕಿರು ಸಮುದಾಯಗಳು ಒಂದೆಡೆಯಲ್ಲಿ ನೆಲೆಗೊಂಡಾಗ ವಿವಿಧ ವಿಶಿಷ್ಟ ಹಿತಾಶಕ್ತಿಯ ಸಮಾಜಗಳು ನಿರ್ಮಾಣಗೊಂಡವು. ರಾಜ್ಯಗಳು-ಸಾಮ್ರಾಜ್ಯಗಳು ಉದಯವಾಗುವುದಕ್ಕಿಂತ ಮೊದಲು ಸಮಾಜದ ಜನರು ಸಣ್ಣ-ಸಣ್ಣ ಗುಂಪುಗಳಾಗಿ ವಾಸಿಸುತ್ತಿದ್ದರು. ಕಾಲಕ್ರಮೇಣ ಈ ಗುಂಪುಗಳಲ್ಲಿ ಜನಸಂಖ್ಯೆ ಹೆಚ್ಚಾಗಿ ಅಥವಾ ಬೇರೆ ಗುಂಪುಗಳ ಜೊತೆಗೂಡಿ ಊರುಗಳಾದವು. ಈ ಪ್ರಕ್ರಿಯೆಗೆ ಮೂಲ ಕಾರಣ ಮನುಷ್ಯರ ಸಮಾಜ ಜೀವಿತ ಪ್ರಜ್ಞೆ, ಈ ಪ್ರಜ್ಞೆಯ ಬಗ್ಗೆ ಯೋಚಿಸಿದ ಅಂತೆಯೇ ನೆಲೆ ನಿಂತ ಊರಿನ ರಕ್ಷಣೆಗಾಗಿ ಕೋಟೆ ಕಟ್ಟಿಕೊಳ್ಳುವ ಅವಶ್ಯಕತೆ ಕಂಡುಬಂದಿತು. ಊರುಗಳು ಬೆಳೆದು ಹಲವಾರು ಊರುಗಳು ಒಟ್ಟು ಗೂಡಿ ರಾಜ್ಯಗಳು ಸ್ಥಾಪನೆಯಾದ ಮೇಲೆ ಆಳುವ ಅರಸರು ತಮ್ಮ ರಾಜ್ಯಗಳನ್ನು ಸಂರಕ್ಷಿಸಿಕೊಳ್ಳಲು ರಾಜಧಾನಿಗಳಲ್ಲಿ ಹಾಗೂ ಗಡಿ ಪ್ರದೇಶಗಳಲ್ಲಿ ಬೃಹತ್ ಆಕಾರದ ಕೋಟೆಗಳನ್ನು ಹೀಗಾಗಿ ಪ್ರಾಚೀನ ಕಾಲದ ಮಾನವನ ರಕ್ಷಣೆಯ ಕಾರ್ಯದಲ್ಲಿ ಕೋಟೆ ಮಹತ್ತರ ಪಾತ್ರ ವಹಿಸಿವೆ.

೪.೧. ರಕ್ಷಣಾ ವಾಸ್ತುಶಿಲ್ಪ

೪.೧.೧. ಕೋಟೆ

ಸಾಮಾನ್ಯವಾಗಿ ಕೋಟೆ ಎಂದರೆ ರಕ್ಷಣಾ ಆವರಣವುಳ್ಳ ಪ್ರದೇಶ ಎಂದರ್ಥ. ಅಂದರೆ ರಾಜನು ತನ್ನ ಪರಿವಾರ ಹಾಗೂ ಪ್ರಜೆಗಳು ಸಂಪತ್ತಿನ ರಕ್ಷಣೆಗಾಗಿ ನಿರ್ಮಿಸಿಕೊಂಡ ಭದ್ರವಾದ ಗೋಡೆ ಬಾಗಿಲುಳ್ಳ ಕೋಟೆಯಾಗಿದೆ ಎಂದು ರಾಜನೀತಿ ಪ್ರಕಾಶನದಲ್ಲಿ ಬೃಹಸ್ಪತಿ ವಚನವು ಉಲ್ಲೇಖಿಸಿದೆ.[೧] ಕೋಟೆ ಅಥವಾ ರಕ್ಷಣಾ ಆವರಣವನ್ನು ಸಂಸ್ಕೃತದಲ್ಲಿ "ದುರ್ಗ" ಎಂದು

ಕರೆಯುತ್ತಾರೆ. ಸೈನಿಕರುಗಳಿಂದ ಆವರಿಸಲ್ಪಟ್ಟ ರಕ್ಷಿತವಾದ ದೊಡ್ಡ ಸ್ಥಳ ಮತ್ತು ಸಾಮಾನ್ಯವಾಗಿ ಗೋಡೆಗಳು ಕಂದಕಗಳು, ರಕ್ಷಣಾರ್ಥ ಕಾರ್ಯಗಳಿಂದ ಆವರಿಸಲ್ಪಟ್ಟ ಹಿರಿದಾದ ದೊಡ್ಡ ಸ್ಥಳ ಕೆಲವೊಮ್ಮೆ ಆಕ್ರಮಣವನ್ನು ಎದುರಿಸಲು ಬೇಕಾಗುವ ಸಾಮರ್ಥ್ಯವನ್ನು ಪೂರೈಸಿಕೊಳ್ಳಲು ರಕ್ಷಣಾ ಸಾಧನಗಳಿಂದ ಮತ್ತು ರಕ್ಷಣಾ ಕಾರ್ಯಗಳಲ್ಲಿ ತೊಡಗಿರುವ ಸಿಪಾಯಿಗಳಿಂದ ಸುತ್ತುವರಿಯಲ್ಪಟ್ಟ ಪಟ್ಟಣವೆಂದು ಭಾವಿಸುತ್ತಾರೆ. ಕೋಟೆಯು ಶತ್ರುಗಳಿಗೆ ಅಗಮ್ಯವಾದ ಹೊಂದಲಾಗದ ಮತ್ತು ದುರ್ಗಮವಾದ ಗೋಡೆಗಳಿಂದ ಕಟ್ಟಲ್ಪಟ್ಟಿರುತ್ತದೆ.[೨]

ವೈದಿಕ ಸಾಹಿತ್ಯದಲ್ಲಿ ಕೋಟೆಗಳಿಗೆ ಮಹಾಪುರ ಅಥವಾ ಪುರ ಎಂಬ ಪದವನ್ನು ಬಳಸಲಾಗಿದೆ. ಮಹಾಪುರ ಎಂದರೆ ಭದ್ರವಾದ ಗೋಡೆಗಳಿಂದ ಸುತ್ತುವರಿಯಲ್ಪಟ್ಟಿರುವ ದೊಡ್ಡ ಪಟ್ಟಣ ಎಂದರ್ಥ.[೩] ಗಡ–ಕೋಟೆ–ದುರ್ಗ ಎಂಬಾ ಮರಾಠಿ ಕೃತಿಯಲ್ಲಿ ಗಡ–ಎಂದರೆ 'ಬೆಟ್ಟದ ಮೇಲಿನ ಕೋಟೆ' ಕೋಟೆ ಎಂದರೆ ಸಮತಟ್ಟಾದ ನೆಲದ ಮೇಲೆ ಕಟ್ಟಿಕೊಂಡ ಕೋಟೆ: ದುರ್ಗ ಎಂದರೆ ಗಿರಿ ಕಂದಕ ದ್ವೀಪಗಳಲ್ಲಿ ಕಟ್ಟಿಕೊಂಡ ಕೋಟೆ ಎಂದು ಅರ್ಥೈಸಲು ಪ್ರಯತ್ನಿಸಲಾಗಿದೆ.[೪]

ಹಳಗನ್ನಡದಲ್ಲಿ ಕೊಂಟೆ ಎಂಬ ಮೂಲ ಪದವಿದ್ದು ಇದನ್ನು ಹೊಸಗನ್ನಡದಲ್ಲಿ ಕೋಟೆ ಎಂದು ಕರೆಯಲಾಗುತ್ತದೆ. ಕೋಟೆ ಎಂದರೆ ಎತ್ತರವೂ ಬಲತ್ತರವೂ ಆದ ಸುತ್ತುಗೋಡೆ: ಕಿಲ್ಲೆ–ದುರ್ಗ[೫] ಎಂದೆನ್ನುವರು ಕೋಟೆಯನ್ನು ಆಂಗ್ಲಭಾಷೆಯಲ್ಲಿ ಪೋರ್ಟ್ ಎಂದು ಕರೆಯುತ್ತಾರೆ. ಈ ಪದವನ್ನು ವಿಸ್ತರಿಸಿ ವಿಶಿಷ್ಟ ಅರ್ಥವೊಂದನ್ನು ಕಲ್ಪಿಸಬಹುದು.

F-Formidable

O-Obstruct

R-Rampart

T-Taetics

ಎಂಬುದಾಗಿ ಹೇಳಬಹುದಾಗಿದೆ. ಅಂದರೆ "ಕೋಟೆಯು ಯುದ್ಧ–ತಂತ್ರದ ಒಂದು ರಚನೆಯಾಗಿದ್ದು ಶತ್ರುಗಳಿಗೆ ದಿಗಿಲು ಹುಟ್ಟಿಸುವಂತಹ ತಡೆಗೋಡೆಯಾಗಿದೆ.[೬]

ವ್ಯಾಖ್ಯಾನಗಳು:–

ಕೋಟೆ ಎಂಬುದಕ್ಕೆ ಸ್ಪಷ್ಟವಾದ ಅರ್ಥ ನೀಡಲು ಸಾಧ್ಯವಾಗದಿದ್ದರು ಇತ್ತೀಚಿನ ಕೆಲವು ವಿದ್ವಾಂಸರು ವಿವಿಧ ರೀತಿಯಲ್ಲಿ ಅರ್ಥೈಸಲು ಪ್ರಯತ್ನಿಸಿದ್ದಾರೆ ಮುಖ್ಯವಾದ ವ್ಯಾಖ್ಯಾನಗಳು ಮಾತ್ರ ಈ ಕೆಳಗಿನಂತೆ ಹೇಳಲಾಗಿದೆ.

* **ಜಿ.ಟಿ.ಡಾಟೆ ಪ್ರಕಾರ:–** "Times of youre the Fortress was a Capital Means of defence" (ಪ್ರಾಚೀನ ಕಾಲದಲ್ಲಿ ಈ ಕೋಟೆಗಳು ರಾಜಧಾನಿಯ ರಕ್ಷಣೆ ಸಲುವಾಗಿದ್ದವು.[೭])

* **ಬೆಟಗೇರಿ ಕೃಷ್ಣಶರ್ಮ:–** "ಹಿಂದಿನ ಕಾಲದ ರಾಜಕೀಯ ವ್ಯವಸ್ಥೆಗೆ ನಗರ, ಗ್ರಾಮ, ಹಳ್ಳಿ, ಪಟ್ಟಣಗಳಿಗೆ ಕೋಟೆಗಳು ಸಂರಕ್ಷಕ ಸಾಧನಗಳಾಗಿದ್ದವು" ಎಂದು ಅಭಿಪ್ರಾಯ ಪಟ್ಟಿದ್ದಾರೆ.[೮]

* **ರಾಜನೀತಿ ಸಾರ:–** ಅನೇಕ ಗಿಡ ಮರಗಳ ಪೊದರುಗಳಿಂದ ಕೂಡಿದ ದನಗಳು, ಹಕ್ಕಿಗಳು ಇತರ ಪ್ರಾಣಿಗಳಿಂದ ಸಮೃದ್ಧವಾಗಿರುವ ಜಲಸಂಪತ್ತು ಕೃಷಿಗೆ ಯೋಗ್ಯವಾದ ಭೂಮಿಯಿಂದ ೮ ಆವೃತ್ತವಾಗಿರುವ ಪ್ರದೇಶದಲ್ಲಿ ಕೋಟೆಯನ್ನು ಕಟ್ಟಬೇಕು ಎಂದಿದೆ.[೯]

* **ಸಂಕ್ಷಿಪ್ತ ಕನ್ನಡ ನಿಘಂಟು:–** "ಎತ್ತರವೂ ಬಲತ್ತರವೂ ಆದ ಸುತ್ತುಗೋಡೆ ಕಿಲ್ಲೆ:ದುರ್ಗ" ಎಂದು ಅರ್ಥೈಸಿದೆ.[೧೦]

* **ವಾ.ಸಿ.ಬೇಂದ್ರೆ:–** "ಕೋಟೆ ಎಂದರೆ ಸಮತಟ್ಟಾದ ನೆಲದ ಮೇಲೆ ಕಟ್ಟಿಕೊಂಡ ಕೋಟೆ"[೧೧] ಎಂದಿದ್ದಾರೆ.

* **ಯಜುರಾರಣ್ಯಕ:–** "ದುರ್ಗಶಿಲ್ಪವು ಸೂರ್ಯನು ಪೃಥ್ವಿಯನ್ನು ರಕ್ಷಿಸುವಂತೆ ನಮ್ಮ ರಾಜನನ್ನು ಕಾಪಾಡಲಿ"[೧೨] ಎಂದು ಹೇಳುತ್ತವೆ.

* **ಚನ್ನಬಸಪ್ಪ ಬಿ.ಪಾಟೀಲ್:–** "ತಮ್ಮನ್ನು ತಮ್ಮ ಸಂಪತ್ತನ್ನು ಕಳ್ಳರಿಂದ ವೈರಿಗಳಿಂದ ಮತ್ತು ಕಾಡುಪ್ರಾಣಿಗಳಿಂದ ಸಂರಕ್ಷಿಸಿಕೊಳ್ಳಲು ಅವರು ಊರುಗಳ ಸುತ್ತಲೂ ಕೋಟೆಯನ್ನು ಕಟ್ಟಲು ಪ್ರಾರಂಭಿಸಿದರು.[೧೩]

* **ಕನ್ನಡ ವಿಷಯ ವಿಶ್ವಕೋಶ:–** ಕೋಟೆಯು ಯುದ್ಧಗತಿಯ ನಿಯಂತ್ರಣ ಕೇಂದ್ರವಾಗಿಯು ಪ್ರಾಮುಖ್ಯತೆ ಪಡೆದಿದೆ ಎಂದು ಹೇಳಲಾಗಿದೆ.[೧೪]

* **ಯರ್ಸ್ಟರಂ ಸ್ಟ್ರೇಟ್:–** Treatise on Fortification and artillery observes forts are equally usefull on oftensive as defencive warfare "ವಿರೋಧಿಗಳಿಂದ ಯುದ್ಧ ತಡೆಯುವುದಕ್ಕಾಗಿ ಮತ್ತು ರಕ್ಷಣೆಗಾಗಿ ಕೋಟೆಗಳು ಅನುಕೂಲವಾಗಿದ್ದವು."[೧೫]

ಹೀಗೆ ಮಾನವ ಅನಾದಿಕಾಲದಿಂದಲೂ ಇಂದಿನವರೆಗೂ ರಕ್ಷಣೆಗಾಗಿ ವಿವಿಧ ತಂತ್ರೋಪಾಯಗಳನ್ನು ಬಳಸಿಕೊಂಡಿರುವುದನ್ನು ನೋಡಬಹುದಾಗಿದೆ. ಒಟ್ಟಾರೆ ಕೋಟೆ ಎಂದರೆ ರಕ್ಷಣಾ ಆವರಣವುಳ್ಳ ನಿರ್ದಿಷ್ಟ ಸ್ಥಳ ಎಂದು ಅರ್ಥೈಸಬಹುದಾಗಿದೆ.

ii. ಕೋಟೆ ಉಗಮ ಮತ್ತು ಬೆಳವಣಿಗೆ

ಕೋಟೆಯ ಉಗಮವು ಮಾನವನ ಪ್ರಾಚೀನ ಕಲೆಗಳಲ್ಲಿ ಒಂದಾಗಿದೆ. ಮಾನವನು ಆರಂಭದಲ್ಲಿ ರಕ್ಷಿಸಿಕೊಳ್ಳಲು ಶಿಲೆಯ, ಮರದ ಮೊದಲಾದ ಆಯುಧಗಳನ್ನು ಬಳಸುತ್ತಿದ್ದರು. ನಾಗರೀಕತೆ ಬೆಳೆದಂತೆ ಒಂದು ಕಡೆ ನೆಲೆ ನಿಂತ ಮೇಲೆ ತನ್ನ ಮತ್ತು ತನ್ನ ಸಮುದಾಯ, ಸಂಪತ್ತನ್ನು ರಕ್ಷಿಸಿಕೊಳ್ಳಲು ವಿವಿಧ ಪ್ರಕಾರದ ಕೋಟೆಗಳನ್ನು ನಿರ್ಮಿಸಿಕೊಂಡನು. ರಾಜ್ಯಗಳ ಉಗಮವಾದ ನಂತರ ಕಾಲಕಾಲಕ್ಕೆ ರಕ್ಷಣಾ ತಂತ್ರದಲ್ಲಾಗುವ ಬದಲಾವಣೆಗೆ ಅನುಗುಣವಾಗಿ ವಿವಿಧ ಪ್ರಕಾರದ ಕೋಟೆಗಳನ್ನು ನಿರ್ಮಿಸುತ್ತಿದ್ದರು ಎಂಬುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

ಪ್ರಾಚೀನ ರಾಜನೀತಿಜ್ಞರಿಂದ ನಮೂದಿಸಲ್ಪಟ್ಟಿರುವ ಏಳು ಮೂಲ ಸಪ್ತಾಂಗಗಳಾದ ಸ್ವಾಮಿ, ಅಮಾತ್ಯ, ರಾಷ್ಟ್ರ, ದುರ್ಗ, ಕೋಶ, ದಂಡೆ, ಮಿತ್ರರಾಜ್ಯ, ಈ ಮೂಲ ತತ್ವಗಳಲ್ಲಿ ದುರ್ಗ(ಕೋಟೆ) ಬಹುಮುಖ್ಯ ಎಂದು ಪರಿಗಣಿಸಿದೆ.[೧೬]

iii. ಕೋಟೆಗಳ ಮಹತ್ವ

ನಾಗರೀಕತೆ ಉಗಮವಾದ ನಂತರ ಜನರು ತಮ್ಮ ರಕ್ಷಣೆಯ ದೃಷ್ಟಿಯಿಂದ ನಗರ ರಾಜ್ಯಗಳ ಉಗಮಕ್ಕೆ ನಾಂದಿಯಾಯಿತು. ಈ ಬದಲಾವಣೆ ಸಹಜವಾಗಿಯೇ ತನ್ನ ರಾಜ್ಯದ ರಾಜಧಾನಿಯನ್ನು ರಕ್ಷಿಸಲು ಕೋಟೆ ಕೊತ್ತಲನ್ನು ಕಟ್ಟಿಕೊಳ್ಳುವಂತೆ ಮಾಡಿತು. ಏಕೆಂದರೆ ಅಸಮರ್ಥ ಜನಸಾಮಾನ್ಯರಿಂದ ಸಹ ಬಲಿಷ್ಠರಾದ ಶತ್ರುಗಳ ವಿರುದ್ಧ ಹೋರಾಡಲು ಕೋಟೆಗಳು ನೆರವಾಗುತ್ತವೆ ಎಂಬ ಕಾರಣದಿಂದ ಮತ್ತು ಜೀವನಾವಶ್ಯಕ ಹಾಗೂ ಯುದ್ಧೋಪಕರಣಗಳನ್ನು ಕೋಟೆಯ ಒಳಗೆ ಶೇಖರಿಸಬಹುದೆಂದೂ ಪ್ರಾಚೀನ ಕಾಲದಿಂದಲೂ ಯಾವ ಅರಸ ಎಷ್ಟು ಸೈನ್ಯವನ್ನು ಹೊಂದಿರುವನು ಎಂಬುದಕ್ಕಿಂತ ಎಷ್ಟು ಅಭೇದ್ಯ ಕೋಟೆಗಳನ್ನು ಹೊಂದಿರುವನು ಎಂಬುದನ್ನು ನೋಡಿ ಅವನ ಶಕ್ತಿ ಸಾಮರ್ಥ್ಯ ನಿರ್ಧರಿಸುತ್ತಿದ್ದರು. ಕೋಟೆಗೆ ಶಕ್ತಿ ಸ್ವರೂಪಿಣಿಯಾದ ದುರ್ಗಾ ಮಾತೆಯ ಹೆಸರನ್ನು ಇಟ್ಟು "ದುರ್ಗ" ಎನ್ನುವ ಅನ್ವರ್ಥ ನಾಮವನ್ನು ಕೋಟೆ ಎಂಬ ಪದಕ್ಕೆ ಬಳಸುತ್ತಿದ್ದರು. ಕೋಟೆ ಕಟ್ಟುವ ಕಲೆಯು ನಮ್ಮ ನಾಡಿನ ಸಾಂಸ್ಕೃತಿಕ ಹಿರಿಮೆಗಳಲ್ಲಿ ಒಂದಾಗಿದೆ.

ಕೌಟಿಲ್ಯನ "ಅರ್ಥಶಾಸ್ತ್ರ", ಕಾಮಂದಕನ "ನೀತಿಶಾಸ್ತ್ರ" ಕನಕದಾಸರ "ಮೋಹನ ತರಂಗಿಣಿ" ಲಿಂಗಣ್ಣ ಕವಿಯ "ಕೆಳದಿ ನೃಪವಿಜಯ", ವಿರೂಪಾಕ್ಷ ಪಂಡಿತನ "ಚನ್ನಬಸವ ಪುರಾಣ" ಮುಂತಾದ ಕೃತಿಗಳು ಕೋಟೆಗಳ ನಿರ್ಮಾಣ ಮತ್ತು ಅವುಗಳ ಮಹತ್ವದ ಬಗ್ಗೆ ವಿವರ ನೀಡುತ್ತವೆ.

ಶುಕ್ರನು ತನ್ನ ನೀತಿಸಾರದಲ್ಲಿ ನಮ್ಮ ದೇಹಕ್ಕೆ ಹೋಲಿಕೆ ಮಾಡಿದ್ದಾನೆ. ರಾಜನು–ತಲೆ, ಮಂತ್ರಿ–ಕಣ್ಣು, ಸ್ನೇಹಿತ–ಕಿವಿ, ಬೊಕ್ಕಸ–ಮುಖ, ಮನಸ್ಸು–ಸೇನೆ, ದುರ್ಗ–ಕೈಗಳು, ರಾಷ್ಟ್ರ–ಸಮಯ ಹೀಗೆ ಸಪ್ತಾಂಗಗಳಿಂದ ಪೂರ್ಣರಾಜ್ಯವೂ ಏಳಿಗೆ ಹೊಂದುವುದು ಎಂದಿದ್ದಾನೆ.[೧೭]

ಪಂಚತಂತ್ರವು ಕೋಟೆಗಳ ಬಗ್ಗೆ ಈ ರೀತಿ ಉಲ್ಲೇಖಿಸಿದೆ

ನಗಜಾಸಂ ಸಹಸ್ರೇಣ ನ ಚ ಲಕ್ಷೇಣ ವಾಜನಾಮ್

ತತ್ಕಮ್ ಸಾಧ್ಯತೇ ರಾಜಂ ದುರ್ಗೈಣಿಕೇನ ಯದ್ರಾಣಿ

ಅಂದರೆ ಯುದ್ಧದಲ್ಲಿ ಸಾವಿರಾರು ಆನೆಗಳಿಂದ ಮತ್ತು ಲಕ್ಷಾಂತರ ಕುದುರೆಗಳಿಂದ ಒಬ್ಬ ರಾಜ ಕೋಟೆಯ ಸಹಾಯದಿಂದ ಆಶ್ಚರ್ಯಕರವಾಗಿ ಕೆಲಸ ನಿರ್ವಹಿಸಬಹುದು ಎಂದಿದ್ದಾನೆ.[೧೮]

ಸೋಮದೇವ ವಿರಚಿತಂ ನೀತಿವಾಕ್ಯಮತಂದಲ್ಲಿ ಹೇಳಿರುವಂತೆ "ಆ ದುರ್ಗಾ ಸ್ವರಾಜ್ಞ: ಪಯೋಧಿಯದ್ವೆ ಪೋತ ಚ್ಯುತ ಪಕ್ಷಿಸಿದಾಪದಿ ಸಾಸ್ತ್ಯಶ್ರಯ" ದುರ್ಗವಿಲ್ಲದ ರಾಜನಿಗೆ ಕತ್ತಲ ನಡುವೆ ಹಡಗಿನಿಂದ ಹೊರಗೆ ಬಿದ್ದ ಪಕ್ಷಿಯ ಹಾಗೆ ಆಪತ್ತಿನಲ್ಲಿ ಆಶ್ರಯವಿರುದಿಲ್ಲಾ ಎಂದು ವರ್ಣಿಸಿದ್ದಾರೆ.[೧೯]

IV. ಕೋಟೆಯ ಲಕ್ಷಣಗಳು

ಕೋಟೆ ಎಂದರೆ ಕೇವಲ ಗೋಡೆಯಲ್ಲಾ ಗೋಡೆಯು ಸೇರಿದಂತೆ ಇತರ ಅಂಗಭಾಗಗಳು ಇರುವುದನ್ನು ಕಾಣಬಹುದು. ಈ ಅಂಗ ಭಾಗಗಳ ಬಗ್ಗೆ ಶಾಸನಗಳಲ್ಲಿ ವಿರಳ ಮಾಹಿತಿಯಿದ್ದರೂ

ಸಾಹಿತ್ಯಿಕ ಗ್ರಂಥಗಳು ವಿಪುಲವಾದ ಮಾಹಿತಿಯನ್ನು ನೀಡುತ್ತವೆ. ಈ ಕೃತಿಗಳು ಕೋಟೆಯ ವಾಸ್ತು, ರಚನಾಕ್ರಮ, ವಿನ್ಯಾಸ, ಪ್ರಕಾರಗಳು, ಅಂಗಭಾಗಗಳು ಬಗ್ಗೆ ಮಹತ್ವದ ವಿಷಯವನ್ನು ತಿಳಿಸುತ್ತವೆ.

ಶಿಲ್ಪಶಾಸ್ತ್ರಗಳಲ್ಲಿ ಪ್ರತಿಪಾದಿಸುವಂತೆ ರಕ್ಷಣಾ ವಾಸ್ತುಶಿಲ್ಪವು ವಪ್ರ (ಮಣ್ಣಿನ ಇಳಿವೋರೆ), ಪರಿಕೆ (ಕಂದಕ ಅಥವಾ ಆಗಳು), ಕೋಟೆತೆನೆ, ಪ್ರಕಾರ (ಆಳ್ವೇರಿ), ಮುಗಿಲಟ್ಟನೆ, ಕೊತ್ತಲ (ಬರುಜು) ಕೋಟೆ ಬಾಗಿಲು, ಕೋಟೆಯ ಕದ, ದಿಡ್ಡಿ, ಕೋಟೆಯ ಮೇಲಿನ ಉಪಕರಣಗಳು ಮುಂತಾದ ಅಂಗಗಳನ್ನು ಹೊಂದಿರುವ ಸ್ಥಳವೇ ಕೋಟೆ.

*** ವಪ್ರ**

ಕೋಟೆಯ ಗೋಡೆಯ ಎತ್ತರಕ್ಕೆ ಒಳ ಅಥವಾ ಹೊರಭಾಗದಲ್ಲಿ ಇಳಿಜಾರಾಗಿರುವ ಇಳಕಲ್ಲು ಮತ್ತು ಮಣ್ಣಿನ ಇಳಿವೋರೆಗೆ ವಪ್ರ ಎಂದು ಕರೆಯುತ್ತಾರೆ. ವಪ್ರವನ್ನು ಹಲವು ಕಾರಣಗಳಿಗಾಗಿ ನಿರ್ಮಿಸುತ್ತಾರೆ. ಶತ್ರುಗಳು ಕೋಟೆಯನ್ನು ಸುಲಭವಾಗಿ ಸಮೀಪಿಸದಂತೆ ತಡೆಯಲು ಅವರು ಬಳಸಿದ ಬಿಲ್ಲು, ಬಾಣ, ಮದ್ದು, ಗುಂಡುಗಳು ಮೊದಲಾದ ಆಯುಧಗಳು ನೇರವಾಗಿ ಕೋಟೆಗೆ ತಗುಲಿ ಹಾಳಾಗದಂತೆ ತಡೆಯಲು ಮತ್ತು ಶತ್ರುಗಳಿಂದ ಎಸೆಯಲ್ಪಟ್ಟ ಆಯುಧಗಳು ಮಣ್ಣಿನಲ್ಲಿ ಸಿಕ್ಕಿ ಹಾಕಿಕೊಳ್ಳಲು ಹಾಗೂ ಅವರು ಎಸೆದ ಆಯುಧಗಳು ಅವರಿಗೆ ಹಿಂದಕ್ಕೆ ಚಿಮ್ಮುವಂತೆ ಮಾಡುವುದಾಗಿತ್ತು.

*** ಕಂದಕಗಳು**

ಕಂದಕವು ಕೋಟೆಯ ಮತ್ತೊಂದು ಪ್ರಮುಖ ಭಾಗವಾಗಿದೆ. ವಪ್ರವನ್ನು ನಿರ್ಮಿಸಿದಾಗ ಸಹಜವಾಗಿ ಆಳವಾದ ತಗ್ಗು ಏರ್ಪಡುತ್ತದೆ. ಇಂತಹ ತಗ್ಗು ಪ್ರದೇಶದಲ್ಲಿ ಸಡಿಲವಾದ ಮಣ್ಣನ್ನು, ತೆಗೆದು ಹಾಕಿ ಎರಡೂ ಕಡೆ ಇಟ್ಟಿಗೆ ಅಥವಾ ಕಲ್ಲುಗಳಿಂದ ಗೋಡೆಯನ್ನು, ನಿರ್ಮಿಸುವರು ಈ ಕಂದಕಗಳಿಗೆ ನದಿ, ಆಣೆಕಟ್ಟು, ಕೆರೆ, ಕಾಲುವೆ, ಬಾವಿಗಳಿಂದ ಕೆಲವೊಮ್ಮೆ ಚರಂಡಿ ನೀರನ್ನು ಬಿಡಲಾಗುತ್ತದೆ. ಕಂದಕ ಮತ್ತು ಗೋಡೆಯ ಮಧ್ಯೆ ಅನಗತ್ಯ ಸ್ಥಳವಿರುವುದಿಲ್ಲ. ಕಂದಕಗಳು ಯಾವಾಗಲೂ ಬುಡಭಾಗಕ್ಕಿಂತಲೂ ಮೇಲ್ಭಾಗದಲ್ಲಿಯೇ ಹೆಚ್ಚು ಅಗಲವಿರುತ್ತದೆ.

*** ಬುರುಜು (ಕೊತ್ತಲು)**

ಕೋಟೆ ಗೋಡೆಗೆ ಹೊಂದಿಕೊಂಡಂತೆ ಕೊತ್ತಲಗಳನ್ನು ನಿರ್ಮಿಸಲಾಗುತ್ತದೆ. ಕೊತ್ತಲಗಳನ್ನು ನಿರ್ಮಿಸುವ ಉದ್ದೇಶವೆಂದರೆ ಕೋಟೆಗೋಡೆಗೆ ವಿಶಾಲವಾದ ಜಾಗವನ್ನು ಒದಗಿಸಲು ಕೋಟೆ ಕಾಳಗದ ಸಮಯದಲ್ಲಿ ಸೈನಿಕರು ಇಲ್ಲಿ ನಿಂತು ಕಾದಾಡಲು, ಕೊತ್ತಲದ ಮೇಲೆ ಫಿರಂಗಿಯನ್ನು ಇಟ್ಟು ಶತ್ರುಗಳ ಮೇಲೆ ಪ್ರಯೋಗಿಸಲು, ಶತ್ರುಗಳ ಚಲನವಲನ ವೀಕ್ಷಿಸಲು ಇವು ಕೋಟೆಯ ಗೋಡಗಿಂತ ಎತ್ತರವಾಗಿರುವುದರಿಂದ, ರಕ್ಷಣಾ ಗೋಪುರಗಳನ್ನಾಗಿ ಉಪಯೋಗಿಸುತ್ತಿದ್ದರು.

*** ಕೋಟೆಯ ತೆನೆ**

ಕೋಟೆಯ ಗೋಡೆಯ ಮೇಲ್ಭಾಗದಲ್ಲಿ ಗೋಡೆಯ ಉದ್ದಕ್ಕೂ ಮಣ್ಣಿನಿಂದ ಮಾಡಿದ ತೆನೆ ಇರುವುದನ್ನು ಕಾಣಬಹುದು. ಸಾಮಾನ್ಯವಾಗಿ ತೆನೆಯನ್ನು ಶತ್ರುಗಳ ಚಲನವಲವನ್ನು

ವೀಕ್ಷಿಸಲು ತೆನೆಯಲ್ಲಿರುವ ರಂಧ್ರಗಳ ಮೂಲಕ ಬಾಣಗಳನ್ನು ಶತ್ರುಗಳಿಗೆ ಬಿಡಿಸಲು ಉಪಯೋಗಿಸುತ್ತಿದ್ದರು. ತೆನೆಗಳಿರುವುದರಿಂದ ಶತ್ರುಗಳಿಗೆ ಕೋಟೆಯಲ್ಲಿ ಇರುವ ಸೈನಿಕರ ಚಲನವಲನಗಳು ತಿಳಿಯುತ್ತಿರಲಿಲ್ಲ. ಕೆಲವೊಮ್ಮೆ ಸೈನಿಕರಿಗೆ ಹಾನಿಯಾಗುವ ಸಂಭವವು ಇರುತ್ತಿತ್ತು. ಏಕೆಂದರೆ ಶತ್ರುಗಳು ಕಲ್ಲು, ಗುಂಡು ಎಸೆದ ಸಂದರ್ಭದಲ್ಲಿ ತೆನೆಯು ಮುರಿದು ತೆನೆಯ ಹಿಂದೆ ಇದ್ದ ಸೈನಿಕರು ಕಾಣುವಂತೆ ಮಾಡುತ್ತಿತ್ತು. ಆಗ ಶತ್ರುಗಳು ಸೈನಿಕರ ಮೇಲೆ ನೇರವಾಗಿ ದಾಳಿ ಮಾಡಬಹುದಿತ್ತು.

*** ಬಂದೂಕು ರಂಧ್ರಗಳು (ಅಂಬುಗಂಡಿಗಳು)**

ಸಾಮಾನ್ಯವಾಗಿ ಕೋಟೆಯ ಗೋಡೆಗೆ ರಕ್ಷಣೆಯ ದೃಷ್ಟಿಯಿಂದ ರಂಧ್ರಗಳನ್ನು ವಿವಿಧ ಕೋನಗಳಲ್ಲಿ ನಿರ್ಮಿಸುತ್ತಿದ್ದರು. "ಒಳಗಿನಿಂದ ಬಾಣಬಿಡುವುದಕ್ಕಾಗಿ ಕೋಟೆಯ ಗೋಡೆಯಲ್ಲಿ ರಚಿಸಿದ ಕಿಂಡಿ"[೨೦] ಪ್ರಾರಂಭದಲ್ಲಿ ಈ ಕಿಂಡಿಗಳನ್ನು ಬಾಣಗಳನ್ನು ಬಿಡಲು ಉಪಯೋಗಿಸುತ್ತಿದ್ದರು. ನಂತರ ರಕ್ಷಣಾ ಆಯುಧಗಳಲ್ಲಾದ ಬದಲಾವಣೆಯಿಂದ ಫಿರಂಗಿ ಬಂದೂಕುಗಳನ್ನು ಈ ಕಿಂಡಿಗಳ ಮೂಲಕ ಉಪಯೋಗಿಸುತ್ತಿದ್ದರು.

*** ಕೋಟೆಯ ಗೋಡೆ**

ಕೋಟೆಯ ಗೋಡೆಯನ್ನು 'ಶಾಲ', 'ಆಳ್ವೆರಿ' ಎಂತಲೂ ಕರೆಯುತ್ತಾರೆ. ಕೋಟೆ ಗೋಡೆಯನ್ನು ಕನ್ನಡ ನಿಘಂಟಿನಲ್ಲಿ ಎತ್ತರವೂ ಬಲತ್ತರವೂ ಆದ ಗೋಡೆ ಎಂತಲೂ ಅರ್ಥೈಸಲಾಗಿದೆ. ಕೌಲೇದುರ್ಗ ಕೋಟೆಯ ಗೋಡೆಯನ್ನು ಮಣ್ಣು, ಇಟ್ಟಿಗೆ ಮಿಶ್ರಣ ಹಾಗೂ ಕಲ್ಲು ಇಟ್ಟಿಗೆಗಳಿಂದ ನಿರ್ಮಿಸಲಾಗಿದೆ. ಈ ಗೋಡೆಗಳು ಕೆಳಭಾಗದಲ್ಲಿ ದಪ್ಪವಾಗಿದ್ದು, ಮೇಲ್ಭಾಗದಲ್ಲಿ ತೆಳುವಾಗಿದೆ ಈ ಗೋಡೆಗಳ ಮೇಲೆ ಸಿಂಹ, ಆನೆ, ಹಾವು, ಮೀನು, ಸೈನಿಕರು, ಕುದುರೆ, ಹುಲಿ, ಮಿಥುನ ಶಿಲ್ಪ ಸೈನ್ಯ ಮೊದಲಾದ ಶಿಲ್ಪಗಳನ್ನು ಚಿತ್ರಿಸಿದ್ದಾರೆ. ಈ ಗೋಡೆ ತಳಭಾಗದಲ್ಲಿ ೧೨ ಅಡಿ ದಪ್ಪವಿದ್ದು ೧೫ ಅಡಿ ಎತ್ತರವಾದ ಕೋಟೆಯ ಗೋಡೆಯ ಕಟ್ಟುವುದು ಶತ್ರುಗಳ ಆಕ್ರಮಣವನ್ನು ತಡೆಯಲು ಕೋಟೆಯ ಕಾಳಗದ ಸಮಯದಲ್ಲಿ ಗೋಡೆಗಳ ಮೇಲಿಂದ ಕಂದಕಕ್ಕೆ ತಳ್ಳುವುದಕ್ಕಾಗಿ ನಿರ್ಮಿಸುತ್ತಿದ್ದರು ಮಳೆಯ ನೀರು ಹರಿದು ಹೋಗಲು ರಂಧ್ರಗಳನ್ನು ಕೊರೆಯಲಾಗಿದೆ. ಇದೇ ರೀತಿಯ ಗೋಡೆಗಳನ್ನು ಕೌಲೇದುರ್ಗದಲ್ಲಿ ಕಾಣಬಹುದಾಗಿದೆ.

*** ಕೋಟೆಯ ಬಾಗಿಲುಗಳು**

ಕೋಟೆಯ ಬಾಗಿಲುಗಳನ್ನು ಸಹಜವಾಗಿ ಕೋಟೆಯ ಗಾತ್ರಕ್ಕೆ ಅನುಗುಣವಾಗಿ ಇಡಲಾಗುತ್ತದೆ. ದ್ವಾರಗಳಿಗೆ ಅತ್ಯಂತ ಗಟ್ಟಿ ಮುಟ್ಟಾದ ಮರದ ಬಾಗಿಲುಗಳಿಂದ ಭದ್ರಗೊಳಿಸುತ್ತಿದ್ದರು. ಈ ದ್ವಾರದ ಬಳಿ ಯಾವಾಗಲೂ ಕಾವಲು ಪಡೆ ಇರುತ್ತಿತ್ತು.

ಕೌಲೇದುರ್ಗದಲ್ಲೂ ಸಹ ಇದೇ ರೀತಿ ಕೋಟೆಯ ಬಾಗಿಲುಗಳಿರುವುದನ್ನು ಕಾಣಬಹುದು. ಕೌಲೇದುರ್ಗ ಕೋಟೆಯ ಮಹಾದ್ವಾರದ ರಚನೆಯು ಚಿತ್ರದುರ್ಗ ಕೋಟೆಯ ಮಹಾದ್ವಾರದ ರಚನೆಯಲ್ಲೇ ಕಂಡುಬಂದಿದೆ. ಹೊರಗಿನಿಂದ ದಾಳಿ ಮಾಡುವವರಿಗೆ ಸುಲಭವಾಗಿ ನುಗ್ಗಲು

ಆಗದಂತೆ ಅನಿರೀಕ್ಷಿತ ತಿರುವುಗಳಿಂದ ಕೂಡಿದೆ ಪ್ರವೇಶ ದ್ವಾರವನ್ನು ಗಾರೆಯಿಂದ ನಯ ಮಾಡಿ ಅದರ ಮೇಲೆ ಯಾಳಿ, ಹಂಸ, ಬಳ್ಳಿ, ಹೂ, ಸಿಂಹ, ಆನೆ, ಕೂರ್ಮ, ವೃಶ್ಚಿಕ ಮುಂತಾದವುಗಳ ಉಬ್ಬುಶಿಲ್ಪಗಳನ್ನು ಚಿತ್ರಿಸಲಾಗಿದೆ.

*** ಮುಗಿಲಟ್ಟಣೆ (ಅಟ್ಟಾಲಕ)**

ಸಾಮಾನ್ಯವಾಗಿ ಮುಗಿಲಟ್ಟಣೆಯನ್ನು ಸೈನಿಕರು ಓಡಾಡಲು, ಕೋಟೆ ಕಾಳಗದ ಸಮಯದಲ್ಲಿ ಯುದ್ಧೋಪಕರಣಗಳನ್ನು ಇಡಲು ಬಳಸುತ್ತಾರೆ. ಇದನ್ನು ಗಾರೆಯಿಂದ ನಯ ಮಾಡಿರಲಾಗಿರುತ್ತದೆ. ಕೆಲವೊಮ್ಮೆ ಕೋಟೆ ಕಾಳಗದ ಸಮಯದಲ್ಲಿ ಮುರಿದು ಹೋಗುವ ಸಂಭವ ವಿರುತ್ತದೆ. ಹೀಗೆ ಕೋಟೆಯಲ್ಲಿ ವಿವಿಧ ಅಂಗಗಳಿರುವುದನ್ನು ಕಾಣಬಹುದು. ಇವುಗಳ ಜೊತೆಗೆ ಸುರಂಗ ಮಾರ್ಗ, ಗುಪ್ತಮಾರ್ಗ ಮೊದಲಾದವು ಕೌಲೇದುರ್ಗದಲ್ಲಿರುವುದನ್ನು ಕಾಣಬಹುದು.

*** ಕೋಟೆಗಳ ವಿನ್ಯಾಸ**

ಸಾಮಾನ್ಯವಾಗಿ ಕೋಟೆಗಳನ್ನು ರಕ್ಷಣೆಯ ದೃಷ್ಟಿಯಿಂದ ವಾಸ್ತುಬದ್ಧವಾಗಿ ನಿರ್ಮಿಸಲಾಗಿರುತ್ತದೆ. ಕೌಟಿಲ್ಯನು ಅರ್ಥಶಾಸ್ತ್ರದಲ್ಲಿ ಕೋಟೆಯೊಳಗಡೆಯಲ್ಲಿ ಪೂರ್ವ ಪಶ್ಚಿಮವಾಗಿ ಮೂರು ಉದ್ದವಾದ ಮಾರ್ಗಗಳು ದಕ್ಷಿಣೋತ್ತರವಾಗಿ ಮೂರು ಉದ್ದವಾದ ರಾಜಮಾರ್ಗಗಳೂ ಇರಬೇಕು ಪ್ರತಿ ದಿಕ್ಕಿಗೂ ಮೂರು ಮೂರು ಬಾಗಿಲುಗಳಂತೆ ಒಟ್ಟು ಹನ್ನೆರಡು ದ್ವಾರಗಳಿಂದ ಕೂಡಿರಬೇಕು. ಮೇಲಾಗಿ ನೀರು, ಭೂಮಾರ್ಗ ಮತ್ತು ಜಲಮಾರ್ಗಗಳಿಂದಲೂ, ಗುಪ್ತವಾದ ಸುರಂಗ ಮಾರ್ಗಗಳಿಂದಲೂ ಕೂಡಿರಬೇಕು[೨೧] ಬಹುತೇಕ ಕೋಟೆಗಳು ಆಯತಾಕಾರ ಮತ್ತು ವೃತ್ತಾಕಾರಗಳ ತಳವಿನ್ಯಾಸವನ್ನು ಹೊಂದಿರುತ್ತವೆ.

೧. ಕೌಲೇದುರ್ಗ–ಆಯತಾಕಾರವಾಗಿದೆ

*** ನಿವೇಶನದ ಆಯ್ಕೆ**

ರಾಜನು ತನ್ನ ಮತ್ತು ತನ್ನ ರಾಜ್ಯವನ್ನು ರಕ್ಷಿಸಲೆಂದು ಯೋಗ್ಯವಾದ ಸ್ಥಳದಲ್ಲಿ ವಾಸ್ತುಬದ್ಧವಾಗಿ ಕೋಟೆಯನ್ನು ಕಟ್ಟುತ್ತಾನೆ.

ಕೌಟಿಲ್ಯನು ತನ್ನ ಅರ್ಥಶಾಸ್ತ್ರದಲ್ಲಿ "ಅನೇಕ ಗಿಡ ಮರಗಳ ಪೊದರುಗಳಿಂದ ಕೂಡಿದ ದನಕರುಗಳು, ಹಕ್ಕಿಗಳು, ಇತರೆ ಪ್ರಾಣಿಗಳಿಂದ ಸಮೃದ್ಧವಾಗಿರುವ, ಜಲಸಂಪತ್ತು, ಕೃಷಿಗೆ ಯೋಗ್ಯವಾದ ಭೂಮಿಯಿಂದ ಆವೃತವಾಗಿರುವ ಪ್ರದೇಶದಲ್ಲಿ ಕೋಟೆಗಳನ್ನು ಕಟ್ಟಬೇಕು" ಎಂದು ಹೇಳಿದ್ದಾನೆ.[೨೨]

ಕೋಟೆಗಳನ್ನು ಕಟ್ಟಿದ ನಂತರ ಕೋಟೆಯನ್ನು ರಕ್ಷಿಸಲೆಂದೂ ದೇವಾಲಯಗಳನ್ನು ನಿರ್ಮಿಸುತ್ತಾರೆ. ತೀರ್ಥಹಳ್ಳಿಯ ಕಾವಲೇದುರ್ಗದಲ್ಲಿ ಸಹ ಕಾಶೀವಿಶ್ವೇಶ್ವರ, ಆಂಜನೇಯ, ಪ್ರತಿದಿಕ್ಕಿಗೂ ಸ್ಥಾಪಿಸಿದ್ದು ಇವರೇ ಕೋಟೆಯನ್ನು ರಕ್ಷಿಸುತ್ತಾರೆ ಎಂಬ ನಂಬಿಕೆ ರೂಢಿಯಲ್ಲಿತ್ತು.

vi. ಕೋಟೆಯ ಪ್ರಕಾರಗಳು

ಸಾಮಾನ್ಯವಾಗಿ ರಾಜನು ತನ್ನ ರಾಜ್ಯದ ರಕ್ಷಣೆಗಾಗಿ ತಮ್ಮ ವ್ಯಾಪ್ತಿಯಲ್ಲಿರುವ ಭೌಗೋಳಿಕ ಪ್ರದೇಶಕ್ಕನುಸಾರವಾಗಿ ಕೋಟೆಗಳನ್ನು ಕಟ್ಟಿಕೊಳ್ಳುತ್ತಾನೆ, ರಕ್ಷಣೆಯ ದೃಷ್ಟಿಯಿಂದ ಕೌಟಿಲ್ಯ

ಮನು, ಶುಕ್ರ, ಕಾಮಂದಕ, ದುರ್ಗಸಿಂಹ, ಮೊದಲಾದವರು ವಿವಿಧ ಪ್ರಕಾರದ ಕೋಟೆಗಳನ್ನು ಕಟ್ಟಿಕೊಳ್ಳಬೇಕೆಂಬ ಉಲ್ಲೇಖ ಮಾಡಿದ್ದಾರೆ.

ಕೌಟಿಲ್ಯನು ತನ್ನ ಅರ್ಥಶಾಸ್ತ್ರದಲ್ಲಿ ರಾಜ್ಯದ ನಾಲ್ಕು ದಿಕ್ಕುಗಳಲ್ಲೂ ವೈರಿ ಪಡೆಯನ್ನು ತಡೆಯಲು ಸೂಕ್ತವಾದ ಕೋಟೆಗಳನ್ನು ಸ್ಥಳವನ್ನಾಧರಿಸಿ ನಾಲ್ಕು ವಿಧಗಳಲ್ಲಿ ಕಟ್ಟಬೇಕೆಂದು ಹೇಳಿದ್ದಾರೆ.

೧. **ಔದಕ:–** ಇದರಲ್ಲಿ ಎರಡು ಪ್ರಕಾರಗಳಿವೆ ನಡುಗಡ್ಡೆ ಮತ್ತು ನೀರಿನಿಂದ ಸುತ್ತುವರಿದ ನೀರಿನ ಕೋಟೆ.

೨. **ಪಾರ್ವತ:–** ದೊಡ್ಡ ದೊಡ್ಡ ಬಂಡೆಗಳಲ್ಲಿ ಮತ್ತು ಗವಿಗಳ ರೀತಿಯಲ್ಲಿರುವ ಕೋಟೆಗಳು.

೩. **ಧಾನ್ವತ:–** ನೀರಿಲ್ಲದ ಮರಳು ಭೂಮಿಯಲ್ಲಿ ಮತ್ತು ಕುರುಚಲು ಗಿಡಗಳ ಮಧ್ಯದಲ್ಲಿ ನಿರ್ಮಾಣವಾಗಿರುವುದು.

೪. **ವನ:–** ಅರಣ್ಯ ಮತ್ತು ಜವುಗು ಭೂಮಿಯಲ್ಲಿ ನಿರ್ಮಾಣವಾದ ಕೋಟೆಗಳು.[೨೩]

ಹೀಗೆ ರಕ್ಷಣೆಯು ರಾಜನಿಗೆ ಅತೀ ಮುಖ್ಯವಾದುದ್ದಾಗಿದೆ. ಏಕೆಂದರೆ ರಾಜನಿಗೆ ಅಳಿವು ಉಳಿವು ಆತನು ರಕ್ಷಣೆಗಾಗಿ ಕೈಗೊಂಡ ಕ್ರಮಗಳನ್ನಾಧರಿಸಿರುತ್ತದೆ. ಆದ್ದರಿಂದ ರಾಜನು ರಕ್ಷಣೆಗಾಗಿ ಮೊದಲು ಆದ್ಯತೆ ನೀಡುತ್ತಾನೆ.

ಕೌಲೇದುರ್ಗ ಕೋಟೆ

ಜಿಲ್ಲಾ ಕೇಂದ್ರವಾದಂತಹ ಶಿವಮೊಗ್ಗದಿಂದ ದಕ್ಷಿಣ ದಿಕ್ಕಿಗೆ ಸುಮಾರು ೬೦ಕಿ.ಮೀ ದೂರದಲ್ಲಿ ಹಾಗೂ ತಾಲ್ಲೂಕು ಕೇಂದ್ರವಾದಂತಹ ತೀರ್ಥಹಳ್ಳಿಗೆ ಸುಮಾರು ೨೧ ಕಿ.ಮೀ ದೂರದಲ್ಲಿರುವಂತಹ ಸುಂದರವಾದಂತಹ ಕಾಡಿನ ಮಧ್ಯದಲ್ಲಿರುವಂತಹ ಕೋಟೆ ಕೌಲೇದುರ್ಗ. ಇದು ೩೨೬೯ ಅಡಿ ಆಳವನ್ನು ಹೊಂದಿರುವಂತಹ ಈ ಕೋಟೆ ಕೆಳದಿ ಅರಸರ ಮೂರನೇ ರಾಜಧಾನಿಯಾಗಿದ್ದು ಅದರ ರಕ್ಷಣಾ ಕೇಂದ್ರವಾಗಿತ್ತು ಇದನ್ನು ಕೆಳದಿಯ ಹಿರಿಯ ವೆಂಕಟಪ್ಪ ನಾಯಕನು (ಕ್ರಿ.ಶ.೧೫೮೩–೧೬೩೦) ಅವಧಿಯಲ್ಲಿ ನಿರ್ಮಿಸಿದನು.

ಕೌಲೇದುರ್ಗ ಹೆಸರಿನ ಹಿನ್ನಲೆ

ಈ ಪ್ರದೇಶದಲ್ಲಿ ಋಷಿಗಳ ಆಶ್ರಮ ಹೆಚ್ಚಾಗಿದ್ದವು ಕಪಿಲವರ್ಣದ ಹಸುವಿನ ಹಾಲು ಮೊಸರು ಮತ್ತು ತುಪ್ಪ ಇವು ಹೋಮ ಮತ್ತು ಪೂಜಾಕಾರ್ಯಗಳಿಗೆ ಶ್ರೇಷ್ಠತೆಯನ್ನು ಪಡೆದಿದ್ದರಿಂದ ಅವುಗಳನ್ನೇ ಹೆಚ್ಚಾಗಿ ಸಾಕುತ್ತಿದ್ದರು. ಅವು ಈ ಬೆಟ್ಟ ಪ್ರದೇಶಕ್ಕೆ ಮೇಯುವುದಕ್ಕೆ ಬರುತ್ತಿದ್ದವು ಕಪಿಲವರ್ಣದ ಹಸುಗಳಿಗೆ ಪ್ರಿಯವಾದ ಬೆಟ್ಟವಾದ್ದರಿಂದ ಕಪಿಲೆದುರ್ಗ ಎಂದು ಕರೆಯುತ್ತಿದ್ದರು ಕಾಲಾಂತರದಲ್ಲಿ ಕಪಿಲದುರ್ಗ ಕೌಲೇದುರ್ಗ ಆಯಿತು.

ಇನ್ನೊಂದು ಹೇಳಿಕೆಯ ಪ್ರಕಾರ ಧಾರವಾಡ ಜಿಲ್ಲೆಯ ಹಾನಗಲ್ಲು ದ್ವಾಪರ ಯುಗದ ವಿರಾಟ ನಗರವಾಗಿತ್ತು ಎಂಬ ಊಹೆ ಇದೆ. ವಿರಾಟರಾಜನ ಹಸುಗಳು (ಕಪಿಲೆಗಳು) ಇಲ್ಲಿಗೆ ಮೇಯಲು ಬರುತ್ತಿದ್ದರಿಂದ "ಕಪಿಲೆದುರ್ಗ" ಎಂದು ಹೆಸರಾಯಿತು ಅನಂತರ ಕೌಲೇದುರ್ಗ ಎಂದಾಯಿತು.

ಐತಿಹ್ಯಗಳು ಕವಲೇದುರ್ಗವನ್ನು ಅಗಸ್ತ್ಯ ಮತ್ತು ವಾಲ್ಮೀಕಿ ಋಷಿಗಳೊಂದಿಗೆ ಸಮೀಕರಿಸುತ್ತದೆ ಕಾಮ್ಯಕವನವೆಂದು ಈ ಸ್ಥಳವನ್ನು ಕರೆಯಲಾಗಿದ್ದು ಪಾಂಡವರು ವನವಾಸ ಸ್ವಲ್ಪ ಕಾಲ ಇಲ್ಲಿ ತಂಗಿದ್ದರೆಂದು ಐತಿಹ್ಯಗಳು ತಿಳಿಸುತ್ತವೆ.

ಹೈದರಾಲಿ ಕ್ರಿ.ಶ.೧೭೬೩ರಲ್ಲಿ ಬಿದನೂರು ನಗರವನ್ನು ನಾಶ ಮಾಡಿದ ನಂತರ ಶ್ರೀರಂಗಪಟ್ಟಣಕ್ಕೆ ಹಿಂದಿರುಗುವ ಮಾರ್ಗದಲ್ಲಿ ಕೌಲೇದುರ್ಗಕ್ಕೆ ಬಂದನು. ಇಕ್ಕೇರಿ ಮತ್ತು ಬಿದನೂರುಗಳಿಂದ ತಿಳಿದ ಕೆಳದಿ ಅರಸರಿಗೆ ಈ ಕೋಟೆ ಕೊಟ್ಟಿದ್ದ ಕಥೆಯನ್ನು ಕೇಳಿದನು. ಆಗ ಇವನು ಇದನ್ನು ಕಾವಲುದುರ್ಗ ಮಾಡಿಕೊಂಡನು ಮುಂದೆ ಅದು ಕೌಲುದುರ್ಗ, ಕೌಲೇದುರ್ಗ ಎಂದಾಯಿತು.

ಕೌಲೇದುರ್ಗ ಕೋಟೆಯ ಲಕ್ಷಣಗಳು

ಕರ್ನಾಟಕದಲ್ಲಿನ ಕೋಟೆಗಳಿಗೆಲ್ಲಾ ಅತ್ಯಂತ ವಿಶಾಲವಾದ ಸ್ಥಳವನ್ನು ಹುದುಗಿಸಿಕೊಂಡಿರುವ ಅತಿ ದುರ್ಗಮಯವಾದ ಸಕಲ ಸಿರಿ ಸಂಪತ್ತುಗಳಿಂದ ಕೋಟೆ ಎಂದು ವರ್ಣಿತವಾಗಿರುವ ಕವಲೇದುರ್ಗ ಕೋಟೆ ಆಯತಾಕಾರದ ತಲವಿನ್ಯಾಸವನ್ನು ಹೊಂದಿದ್ದು ಏಳು ಸುತ್ತಿನ ಕೋಟೆಯಾಗಿದೆ.

ಈ ಕೋಟೆಯನ್ನು ಕಣಶಿಲೆಯಿಂದ ನಿರ್ಮಾಣ ಮಾಡಿದ್ದು ೩೨೯೮ಅಡಿ ಎತ್ತರದಲ್ಲಿ ಬೆಟ್ಟದ ಮೇಲೆ ಕಟ್ಟಿರುವ ಕೋಟೆ ಬೆಟ್ಟದ ಮೇಲಿರುವುದರಿಂದ ಇಲ್ಲಿ ಕಂದಕವಿಲ್ಲ ಕೋಟೆಗೆ ನಾಲ್ಕು ದ್ವಾರಗಳಿದ್ದು ಒಂದು ಕಡೆ ಮಾತ್ರ ಅವಕಾಶವಿದೆ. ಹೊರಗಿನಿಂದ ದಾಳಿ ಮಾಡುವವರಿಗೆ ಸುಲಭವಾಗಿ ನುಗ್ಗಲು ಆಗದಂತೆ ಅನಿರೀಕ್ಷಿತವಾದ ತಿರುವುಗಳಿಂದ ಕೂಡಿದ್ದು ರಕ್ಷಣಾ ದೃಷ್ಟಿಯಿಂದ ವಾಸ್ತುಬದ್ಧವಾಗಿದೆ. ಕೋಟೆಯು ಬೃಹದಾಕಾರವಾಗಿದ್ದು ತಳಭಾಗ ೧೨ ಅಡಿ ಉದ್ದ ೧೫ ಅಡಿ ಎತ್ತರವಾಗಿದೆ. ಕೆಲವು ಕಡೆ ಗಾರೆ ನಿರ್ಮಿಸಿದ್ದಾರೆ. ಮೇಲ್ಭಾಗದಲ್ಲಿ ಮಣ್ಣಿನ ತೆನೆಗಳನ್ನು ನಿರ್ಮಿಸಿದ್ದಾರೆ. ಕೆಲವು ಕಡೆ ಮಳೆ ನೀರು ಕೋಟೆಯ ಗೋಡೆಯ ಮೇಲೆ ಬಿದ್ದು ಗೋಡೆಯು ಹಾಳಾಗಬಾರದೆಂದು ಗಾರೆಯಿಂದ ಇಳಿಜಾರನ್ನು ಮಾಡಲಾಗಿದೆ. ಕೋಟೆಯ ಗೋಡೆಗೆ ರಕ್ಷಣೆ ನೀಡಲು ವೃತ್ತಾಕಾರದ ಕೊತ್ತಲುಗಳನ್ನು ಕಟ್ಟಿಸಿದ್ದಾರೆ.

ಕೌಲೇದುರ್ಗ ಕೋಟೆಯು ಏಳು ಸುತ್ತಿನಿಂದ ಕೂಡಿದ್ದು ಪ್ರತಿಯೊಂದು ಸುತ್ತುಗಳಲ್ಲೂ ಅವಶೇಷ ಕಂಡುಬರುವುದನ್ನು ಗಮನಿಸಬಹುದು ಮೊದಲನೇ ಸುತ್ತಿಗೆ ಪೂರ್ವದ ಭಾಗದಲ್ಲಿ ಪ್ರವೇಶ ದ್ವಾರವಿದೆ. ಇಲ್ಲಿ ಕಾವಲು ಕೊಠಡಿ ಇದೆ. ಎರಡನೇ ಸುತ್ತಿನಲ್ಲಿ ಮಹಾಮತ್ತಿನ ವೀರಶೈವ ಮಠವಿದ್ದುದ್ದು ತಿಳಿದು ಬರುತ್ತದೆ. ಇದನ್ನು ಬಿಳಗಿ ಅರಸರು ಕಟ್ಟಿಸಿದರು ಎಂದು ಹೇಳಲಾಗಿದೆ. ಹಾಗೆಯೇ ಟಂಕಸಾಲೆ ಸಹ ಇತ್ತೆಂದು ಹೇಳಬಹುದು. ಮೂರನೇಯ ಸುತ್ತು ದೇವಾಲಯಗಳ ರಕ್ಷಣೆಗಾಗಿ ನಿರ್ಮಾಣವಾಗಿತ್ತು.

ಉದಾಹರಣೆ:– ಕಾಶಿವಿಶ್ವೇಶ್ವರ ದೇವಾಲಯ

ಹಿರಿಯವೆಂಕಪ್ಪ ನಾಯಕ ತನ್ನ ತಂದೆ ಹಿಂದೆ ಕಾಶೀ ಕ್ಷೇತ್ರದಿಂದ ತಂದ ಲಿಂಗವನ್ನು ಇಲ್ಲಿ ಪ್ರತಿಷ್ಠಾಪಿಸಿ ಅದಕ್ಕೆ ವಿಶ್ವೇಶ್ವರನೆಂದು ಹೆಸರಿಸಿದನು.

ನಾಲ್ಕನೇ ಸುತ್ತಿನಲ್ಲಿ ಕಲ್ಯಾಣ ಮಹಲ್ ಕಂಡುಬರುತ್ತದೆ. ಹಿರಿಯ ವೆಂಕಟಪ್ಪ ನಾಯಕನು ತನ್ನ ವಿಹಾರಾರ್ಥವಾಗಿ ಇದನ್ನು ಕಟ್ಟಿಸಿದನೆಂದೂ ತಿಳಿದು ಬರುತ್ತದೆ. ಇದರ ಮುಂಭಾಗ ಮಾತ್ರ ಉಳಿದಿದ್ದು ಉಳಿದ ಎಲ್ಲಾ ಭಾಗಗಳು ನೆಲಸಮವಾಗಿದೆ.

ವಿಜಯದಶಮಿಯಂದು ಬನ್ನಿ ಮುರಿದು ಹಿಂದಿರುವಾಗ ಕೆಳದಿ ರಾಜ ರಾಣಿಯರು ಈ ಕಲ್ಯಾಣ ಮಹಲ್‌ಗೆ ಹೋಗುತ್ತಿದ್ದರೆಂದೂ ಆಗ ಸಭೆಯೊಂದನ್ನು ನಡೆಸಿ ಸಾರ್ವಜನಿಕರಿಗೆ ದರ್ಶನ ಕೊಡುತ್ತಿದ್ದರೆಂದೂ ಆ ಸಮಯದಲ್ಲಿ ಸಂಗೀತ ನೃತ್ಯಾದಿಗಳು ನಡೆಯುತ್ತಿದ್ದವೆಂದೂ ತಿಳಿದುಬರುತ್ತದೆ.

ಐದನೇ ಸುತ್ತಿನಲ್ಲಿ ಪ್ರಮುಖವಾಗಿ ಕಂಡುಬರುವ ಅವಶೇಷಗಳೆಂದರೆ ಅರಮನೆಯ ಅವಶೇಷ ಇಲ್ಲಿ ಸುಮಾರು ೫೦ ಅಡಿ ವ್ಯಾಸದ ಒಂದು ಅಂಗಳ ಎಡಕ್ಕೆ ಸುಮಾರು ೧೦ ಅಡಿ ಎತ್ತರದ ೪ ಅಡಿ ಅಗಲದ ಕಲ್ಲಿನ ಚೌಕಟ್ಟು ಕಾಣುತ್ತದೆ. ಇದೇ ಅರಮನೆಯ ಬಾಗಿಲು ಈಗ ಅರಮನೆ ಇಲ್ಲಾ ಗುರುತು ಮಾತ್ರ ಇದೆ. ಉಪಯೋಗಿಸಿದ ಕಲ್ಲುಕಂಬಗಳನ್ನು ಕಲ್ಲಿನ ತೊಲೆಗಳನ್ನು ನೋಡಬಹುದು.

ಅರಮನೆಯ ನಿವೇಶನ ಸುಮಾರು ೧೦೦ ಅಡಿ ಉದ್ದ ೪೦ ಅಡಿ ಅಗಲ ಇದೆ. ಕಲ್ಲುಕಂಬ ಮತ್ತು ತೊಲೆಗಳನ್ನು ನೋಡಿದರೆ ಅರಮನೆ ಹಲವು ಅಂತಸ್ತುಗಳುಳ್ಳದ್ದಾಗಿತ್ತು. ಅರಮನೆಯ ಹಿಂಭಾಗದಲ್ಲಿ ಒಂದು ಚಿಕ್ಕ ಕೊಳವಿತ್ತು. ಇದನ್ನು "ಶಾಂತ ಗಂಗೆ" ಎಂದು ಕರೆಯುತ್ತಿದ್ದರು ಅರಮನೆಗೆ ನೀರು ಬರಲು ಚಿಕ್ಕ ಜಲಮಾರ್ಗವಿತ್ತು ತೊಟ್ಟಿಯು ೧೦ ಅಡಿ ಉದ್ದ ೫ ಅಗಲ ಇತ್ತು ಇದು ರಾಣಿಯರ ಮಜ್ಜನ ಕೊಳವಾಗಿತ್ತು ಎಂದು ಹೇಳುತ್ತಾರೆ.

ಅರಮನೆಗೆ ಹೊಂದಿಕೊಂಡಂತೆ ಎಡಕ್ಕೆ ಎತ್ತರವಾದ ಸುಮಾರು ೧೦೦ ಅಡಿ ಉದ್ದ ೨೫ ಅಡಿ ಅಂಗುಲದ ಸಮತಟ್ಟಾದ ಪ್ರದೇಶವಿದೆ ೧೦೦ ಅಡಿ ಉದ್ದ ೨೫ ಅಡಿ ಅಗಲದ ಸಮತಟ್ಟಾದ ಪ್ರದೇಶವಿದೆ ಇಲ್ಲಿ ತೂಗು ಮಂಚವನ್ನು ಕಟ್ಟಲು ಅನುಕೂಲ ಪಡಿಸಿದ ಕಲ್ಲಿನ ಚೌಕಟ್ಟು ಇದೆ. ಪ್ರಾಯಶಃ ಈ ಪ್ರದೇಶ ರಾಜ್ಯೋಧ್ಯಾನವನವಾಗಿದ್ದು ಈ ಚೌಕಟ್ಟು ಉಯ್ಯಾಲೆಯ ಕಂಬವಾಗಿದ್ದರೂ ಇರಬಹುದು.

ಕೋಟೆಯ ಆರನೇ ಸುತ್ತು ಪ್ರಮುಖವಾಗಿದ್ದು ಈ ಸುತ್ತಿನಲ್ಲಿ ಕೆಳದಿ ಅರಸರ ಕಾಲದ ಆಯುಧಗಳನ್ನು ಸಂಗ್ರಹಿಸುತ್ತಿದ್ದ ಕೊಠಡಿಗಳಿವೆ ಇವುಗಳು ಸಹ ಬಿದ್ದು ಸಂಪೂರ್ಣವಾಗಿ ನೆಲಸಮವಾಗಿದೆ. ಆದರೆ ಅದರ ನೆಲಗಟ್ಟುಗಳನ್ನು ನೋಡಲು ಸಹಾಯಕವಾಗಿದೆ.

ಅಂತಿಮ ಸುತ್ತಿನಲ್ಲಿ ಅಂದರ ಬೆಟ್ಟದ ತುದಿಯಲ್ಲಿ ಶ್ರೀಕಂಠೇಶ್ವರ ದೇವಾಲಯ ಮತ್ತು ಶಿಖರೇಶ್ವರ ದೇವಾಲಯಗಳಿವೆ ಈ ದೇವಾಲಯಗಳು ೫ ಅಡಿ ಚೌಕದ ಕಲ್ಲಿನ ಗುಡಿ ಒಳಗಡೆ ಪಾಣಿ ಪೀಠ ಸಹಿತ ಶಿವಲಿಂಗವನ್ನು ಕೆತ್ತಿದ್ದಾರೆ. ಇದು ಕೆಳದಿಯ ಹಿರಿಯ ವೆಂಕಟಪ್ಪ ನಾಯಕ ಕಟ್ಟಿಸಿದ ದೇವಾಲಯಗಳು ಇಲ್ಲಿಂದ ಪಶ್ಚಿಮ ಸಮುದ್ರ ದೃಶ್ಯ ಅತ್ಯಂತ ಮನೋಹರವಾಗಿ ಕಾಣಿಸುತ್ತದೆ.

V. ರಕ್ಷಣಾ ಸಂಬಂಧಿ ಸ್ಮಾರಕಗಳು

ರಾಜನು ತನ್ನ ರಾಜ್ಯವನ್ನು ರಕ್ಷಿಸಲು ಕೇವಲ ಕೋಟೆಯ ಗೋಡೆಯೊಂದರಿಂದಲೇ ಸಾಧ್ಯವಿಲ್ಲಾ ಕೋಟೆಯ ಗೋಡೆಗೆ ಹೊಂದಿಕೊಂಡಂತೆ ಹಾಗೂ ಕೋಟೆಯ ಒಳಗೆ ರಕ್ಷಣೆಗೆ ಸಂಬಂಧಿಸಿದ ಮುಖ್ಯಭಾಗ ಅಥವಾ ಲಕ್ಷಣಗಳನ್ನು ಹೊಂದಿದ್ದರೆ ಮಾತ್ರ ಒಂದು ಕೋಟೆ ಅಭೇದ್ಯವಾಗಲು ಸಾಧ್ಯವಾಗುತ್ತದೆ. ಇಲ್ಲವೆಂದರೆ ಶತ್ರುಗಳಿಗೆ ಬಹುಬೇಗ ವಶವಾಗುವ ದುರ್ಬಲ ಕೋಟೆಯಾಗುತ್ತವೆ. ಕೋಟೆಯಲ್ಲಿರುವ ಪ್ರಮುಖ ಭಾಗಗಳೆಂದರೆ ಬಾಗಿಲುಗಳು ಕಂದಕ ಕೋಟೆಯ ತೆನೆ, ಅಂಬುಗಂಡಿ, ತೋಪು, ತುಪ್ಪದ ಕಣಜ, ದೇವಾಲಯ, ಅರಮನೆ, ಮದ್ದಿನ ಮನೆ, ಸೈನಿಕರ ವಸತಿ ನೆಲೆಗಳು, ನೀರಿನ ಸಂಗ್ರಹಣೆ ಮುಂತಾದವುಗಳು.

೧. ದ್ವಾರಬಾಗಿಲು

ಕೌಲೇದುರ್ಗದ ದ್ವಾರಬಾಗಿಲು ವಿವಿಧ ರೀತಿಯಿಂದ ಅಭೇದ್ಯವಾಗಿದೆ. ಕೋಟೆಯನ್ನು ಪ್ರವೇಶಿಸಲು ಪೂರ್ವಕ್ಕೆ ದ್ವಾರಬಾಗಿಲಿದ್ದು ಇದರ ಎರಡು ಬದಿಯಲ್ಲೂ ಎತ್ತರದ ವೇದಿಕೆಯ ಮೇಲೆ ಒರಟು ಕಲ್ಲಿನಿಂದ ನಿರ್ಮಿಸಿದ ತೆರೆದ ಮಂಟಪವಿದೆ. ಇದು ಯಾವುದೇ ಅಲಂಕಾರಗಳಿಲ್ಲದೆ ಸರಳವಾಗಿದೆ ಅನಿರೀಕ್ಷಿತ ಅನೇಕ ತಿರುವುಗಳಿಂದ ಕೂಡಿದ್ದು ಹೊರಗಿನಿಂದ ದಾಳಿ ಮಾಡುವವರಿಗೆ ಕಠಿಣವಾಗಿರುತ್ತಿತ್ತು.

೨. ದೇವಾಲಯ

ಸಾಮಾನ್ಯವಾಗಿ ಕೋಟೆಯ ರಕ್ಷಣೆಗೆಂದು ವಾಸ್ತುಬದ್ಧವಾಗಿ ಕೋಟೆಯ ಪೂರ್ವಕ್ಕೆ ಆಂಜನೇಯ ಅಥವಾ ಶಿವದೇವಾಲಯವನ್ನು ನಿರ್ಮಿಸಲಾಗುತ್ತಿತ್ತು. ಏಕೆಂದರೆ ಆಂಜನೇಯ ಗ್ರಾಮದ ರಕ್ಷಕನಾಗಿದ್ದು ಶಕ್ತಿಯ ಪ್ರತಿರೂಪವಾಗಿದ್ದು ಆಂಜನೇಯ ಆಗಿರುವುದರಿಂದ ದ್ವಾರದಲ್ಲಿ ಆಂಜನೇಯ ದೇವಾಲಯ ಇರುವುದು ಶತೃಗಳಿಗೆ ಕೋಟೆಯ ಶಕ್ತಿಯನ್ನು ಸೂಚಿಸುವಂತೆ ಮಾಡುತ್ತಿತ್ತು. ಶತ್ರುಗಳಿಗೆ ಭಯದ ವಾತಾವರಣವನ್ನು ಮೂಡಿಸಲು ಈ ಮೂರ್ತಿಗಳನ್ನು ಪ್ರತಿಷ್ಠಾಪಿಸಿದ್ದು ಗಣಪತಿಯು ವಿಘ್ನ ನಿವಾರಕನಾಗಿದ್ದು ಕೋಟೆಯ ವಿಘ್ನಗಳನ್ನು ದೂರ ಮಾಡುತ್ತಾನೆಂದೂ ಪ್ರತಿಷ್ಠಾಪಿಸುತ್ತಿದ್ದರು.

ಕವಲೇದುರ್ಗ ಕೋಟೆಯಲ್ಲಿ ಕಾಶೀವಿಶ್ವೇಶ್ವರ ದೇವಾಲಯ ಪೂರ್ವದಿಕ್ಕಿನಲ್ಲೂ ಪಶ್ಚಿಮ ದಿಕ್ಕಿಗೆ ಶಿಖರೇಶ್ವರ ಶ್ರೀಕಂಠ ದೇವಾಲಯಗಳನ್ನು ನಿರ್ಮಿಸಿದ್ದು ಕೋಟೆಯನ್ನು ಈ ದೇವಾಲಯಗಳು ರಕ್ಷಣೆಯನ್ನು ಮಾಡುತ್ತವೆ ಎಂಬ ನಂಬಿಕೆ.

೩. ಅರಮನೆ

ಸಾಮಾನ್ಯವಾಗಿ ರಾಜ ಅಥವಾ ರಾಣಿಯರ ರಕ್ಷಣೆಗಾಗಿ ಅರಮನೆಯ ಸುತ್ತಲೂ ಕೋಟೆಯನ್ನು ಕಟ್ಟುತ್ತಿದ್ದರು. ಕೌಲೇದುರ್ಗ ಕೋಟೆ ಆವರಣದಲ್ಲಿ ಅರಮನೆ ಕಂಡುಬಂದಿದ್ದು ಸಂಪೂರ್ಣ ನೆಲಸಮವಾಗಿದೆ. ಅರಮನೆಗೆ ಬಳಸಿದ ಕಲ್ಲುಕಂಬ ಮತ್ತು ನೆಲೆಗಟ್ಟು ಮಾತ್ರ ಕಂಡುಬರುತ್ತದೆ.

೪. ಸೈನಿಕರ ನಿವಾಸಗಳು

ಕೋಟೆಯ ರಕ್ಷಣೆಗಾಗಿ ಸೈನಿಕರ ಅವಶ್ಯಕತೆ ಹೆಚ್ಚಿರುತ್ತದೆ. ಆದ್ದರಿಂದ ಇವರು ಉಳಿದುಕೊಳ್ಳಲು ವಸತಿಗಳನ್ನು ನಿರ್ಮಿಸಬೇಕು. ಕೌಲೇದುರ್ಗ ಕೋಟೆಯಲ್ಲಿ ಸೈನಿಕರ ನಿವಾಸಗಳು ಕೇವಲ ತಳಪಾಯವನ್ನು ಮಾತ್ರ ಹೊಂದಿದ್ದು ಕಟ್ಟಡದ ಭಾಗ ನಾಶವಾಗಿವೆ. ಈ ಕಟ್ಟಡಗಳು ಆಯತಾಕಾರದ ತಲವಿನ್ಯಾಸ ಹೊಂದಿದೆ.

೫. ಮದ್ದಿನ ಮನೆಗಳು

ಸಾಮಾನ್ಯವಾಗಿ ಫಿರಂಗಿ ಮತ್ತು ಬಂದೂಕುಗಳಿಗೆ ಬೇಕಾಗುವ ಮದ್ದನ್ನು ಚಳಿ ಮತ್ತು ಬಿಸಿಲಿನಿಂದ ಸಂರಕ್ಷಿಸಲು ಉತ್ತಮ ಹವಾಮಾನದಲ್ಲಿಡಬೇಕಾಗುತ್ತದೆ. ಆದ್ದರಿಂದ ಇವುಗಳ ನಿರ್ಮಾಣಕ್ಕೆ ಹೆಚ್ಚು ಆದ್ಯತೆ ನೀಡುತ್ತಿದ್ದರು ಕೌಲೇದುರ್ಗದಲ್ಲಿ ಕೆಲವು ಮದ್ದಿನ ಮನೆಗಳಿದ್ದವು. ಆದರೆ ಕೆಲವೊಂದು ಮದ್ದಿನ ಮನೆಗಳು ಸಂಪೂರ್ಣವಾಗಿ ಹಾಳಾಗಿವೆ.

೬. ತುಪ್ಪದ ಕಣಜಗಳು

ಕೌಲೇದುರ್ಗದ ಕೋಟೆಯಲ್ಲಿ ಅರಮನೆಯ ನೈರುತ್ಯ ದಿಕ್ಕಿನಲ್ಲಿ ೨ ವೃತ್ತಾಕಾರದ ಭೂಮಿಯ ಒಳಭಾಗದಲ್ಲಿ ಗಾರೆಯಿಂದ ನಯ ಮಾಡಿದ ತುಪ್ಪದ ಕೊಳಗಳಿವೆ ಇವು ಸುಮಾರು ೭-೧೦ ಅಡಿ ಅಗಲವಾಗಿದೆ. ಇವುಗಳಲ್ಲಿ ಸಂಗ್ರಹಿಸಿದ ತುಪ್ಪವನ್ನು ಫಿರಂಗಿಗಳು ಮತ್ತು ಬಂದೂಕುಗಳಿಗೆ ಮದ್ದು ಗುಂಡುಗಳನ್ನು ಉಪಯೋಗಿಸಲು ಬಳಸುತ್ತಿದ್ದರು.

೭. ನೀರಿನ ಸಂಗ್ರಹಣೆ

ನೀರಿನ ಸಂಗ್ರಹಣೆಗೆ ಕೆಳದಿ ಇಕ್ಕೇರಿ ನಾಯಕರು ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿದ್ದರು ಕೌಲೇದುರ್ಗ ಗಿರಿದುರ್ಗದ ಸಾಲಿಗೆ ಸೇರಿದುದ್ದರಿಂದ ನೀರು ಹರಿಯುವ ಕಡೆಗೆ ಅಡ್ಡ ಗೋಡೆ ಕಟ್ಟಿ ಬಾವಿ ಪುಷ್ಕರಣಿಗಳನ್ನು ನಿರ್ಮಿಸುತ್ತಿದ್ದರು. ಅರಮನೆಯ ಹತ್ತಿರ ಬಾವಿಯಿದ್ದು ಅದನ್ನು ಕಲ್ಲು ಮತ್ತು ಇಟ್ಟಿಗೆಯಿಂದ ನಿರ್ಮಾಣವಾಗಿದೆ. ವೃತ್ತಾಕಾರದ ಬಾವಿಗಳು ಸಹ ಕೋಟೆಗೆ ನೀರಿನ ಆಸರೆಯಾಗಿದ್ದವು.

ಸಾಮಾನ್ಯವಾಗಿ ಕೋಟೆಯ ಒಳಗೆ ನೀರಿನ ಸಂಗ್ರಹಣೆ ಇಲ್ಲದಿದ್ದರೆ ಕೋಟೆಯು ಶತ್ರುಗಳಿಗೆ ಬಹುಬೇಗ ವಶವಾಗುವ ಸಾಧ್ಯತೆಯಿರುತ್ತದೆ. ಆದ್ದರಿಂದ ಎಲ್ಲಾ ಕೆಲಸ ಕಾರ್ಯಗಳಿಗೂ ನೀರು ಬೇಕಾಗುವುದರಿಂದ ನೀರಿನ ಸಂಗ್ರಹಣೆ ಹೆಚ್ಚು ಆದ್ಯತೆ ನೀಡುತ್ತಿದ್ದರು.

೮. ಕಣಜಗಳು

ಸಾಮಾನ್ಯವಾಗಿ ಕಣಜಗಳು ಧಾನ್ಯ, ತುಪ್ಪ, ಮೊದಲಾದ ಪದಾರ್ಥಗಳನ್ನು ಮಳೆ ಬಿಸಿಲು ಮತ್ತು ಚಳಿಯಿಂದ ರಕ್ಷಿಸಲು ಉತ್ತಮ ಹವಾಮಾನವಿರುವ ಕಡೆ ನಿರ್ಮಾಣ ಮಾಡಲ್ಪಟ್ಟಿರುತ್ತವೆ. ಕೌಲೇದುರ್ಗ ಕೋಟೆಯಲ್ಲಿ ಧಾನ್ಯ ಸಂಗ್ರಹಣೆಯ ಕಣಜ (ಉಗ್ರಾಣ)ದ ಕಟ್ಟಡಗಳಿವೆ. ಆದರೆ ಅವು ಹಾಳಾಗಿದ್ದು ತಳಪಾಯ ಮಾತ್ರ ಉಳಿದಿದೆ. ಸಾಮಾನ್ಯವಾಗಿ ಈ ಕಣಜದಲ್ಲಿ ಬರಗಾಲ, ಯುದ್ಧ, ತುರ್ತು ಸಮಯದಲ್ಲಿ ಆಹಾರ ಪದಾರ್ಥಗಳನ್ನು ಸಂಗ್ರಹಿಸುತ್ತಿದ್ದರು.

೯. ಗರಡಿ ಮನೆಗಳು

ಸಾಮಾನ್ಯವಾಗಿ ಗರಡಿ ಮನೆಗಳನ್ನು ನಿರ್ಮಿಸುವುದು ರಾಜನು ಸೈನಿಕರು, ವಿವಿಧ ಕಸರತ್ತು ಮಾಡುವುದಕ್ಕಾಗಿ ತಮ್ಮ ಶಕ್ತಿ ಸಾಮರ್ಥ್ಯಗಳನ್ನು ಕಾಪಾಡಿಕೊಂಡು ಯುದ್ಧರಂಗದಲ್ಲಿ ಶಕ್ತಿಯುತವಾಗಿ ಹೋರಾಡಲು ಶಕ್ತಿಯುತವಾಗಿರಬೇಕೆಂಬ ಉದ್ದೇಶಕ್ಕಾಗಿ ಗರಡಿಮನೆಗಳನ್ನು ನಿರ್ಮಿಸುತ್ತಿದ್ದರು.

ಗರಡಿ ಮನೆಯಲ್ಲಿ ಕಿಂಡಿಗಳಿದ್ದು ಅದರ ಮೂಲಕ ಸೈನಿಕರು ಒಳಹೋಗಿ ಕಸರತ್ತು ಮಾಡುತ್ತಿದ್ದರು. ಕೋಟೆಯಲ್ಲಿ ಗರಡಿ ಮನೆಗಳಿದ್ದವು ಎಂಬುದಕ್ಕೆ ಯಾವುದೇ ಪೂರ್ಣ ಪ್ರಮಾಣದ ಯಾವ ಕಟ್ಟಡದ ಅವಶೇಷಗಳು ದೊರೆಯುವುದಿಲ್ಲ.

೧೦. ಗೋಪುರಗಳು (ಕಾವಲುಗೋಪುರ)

ದೂರದಲ್ಲಿರುವ ಶತ್ರುಗಳ ಚಲನ ವಲನವನ್ನು ವೀಕ್ಷಿಸುವ ಸಲುವಾಗಿ ಕೋಟೆಗಳಲ್ಲಿ ಗೋಪುರಗಳನ್ನು ನಿರ್ಮಿಸುತ್ತಿದ್ದರು ಕೋಟೆ ಗೋಡೆಗಿಂತ ಕೊತ್ತಲುಗಳು ಎತ್ತರವಾಗಿರುವುದರಿಂದ ಇವುಗಳನ್ನು ಸಹ ಗೋಪುರಗಳನ್ನಾಗಿ ಬಳಸಿರಬಹುದು, ಗೋಪುರಗಳಲ್ಲಿ ನಿಂತು ಶತ್ರುಗಳ ಚಲನ ವಲನಗಳನ್ನು ವೀಕ್ಷಿಸುತ್ತಿದ್ದರು. ಈ ಕೋಟೆಯಲ್ಲಿ ಬೃಹತ್ ಬಂಡೆಗಳಿರುವುದರಿಂದ ಇವುಗಳನ್ನು ಗೋಪುರಗಳನ್ನಾಗಿ ಬಳಸಿರುವುದರಲ್ಲಿ ಉತ್ಪ್ರೇಕ್ಷೆಯೇನಿರುವುದಿಲ್ಲ.

ಹೀಗೆ ಒಂದು ಕೋಟೆಯು ಶತ್ರುಗಳಿಗೆ ಅಭೇದ್ಯವಾಗಲು ಹಲವು ವಿದಧ ರಕ್ಷಣಾ ತಂತ್ರಗಳನ್ನು ಅಳವಡಿಸಿಕೊಂಡು ಕೋಟೆಯ ಅಂಗಭಾಗಗಳನ್ನು ನಿರ್ಮಿಸಿದಾಗ ಸಹಜವಾಗಿ ಕೋಟೆಯು ಅಭೇದ್ಯವಾಗಿರಲು ಸಾಧ್ಯವಾಗಿರುತ್ತದೆ.

೪.೨. ಧಾರ್ಮಿಕ ವಾಸ್ತುಶಿಲ್ಪ

ಕಟ್ಟಡ ನಿರ್ಮಾಣ ಶಾಸ್ತ್ರವನ್ನು ಸಂಸ್ಕೃತದಲ್ಲಿ ವಾಸ್ತುಶಾಸ್ತ್ರ ಎಂದು ಕರೆಯುತ್ತಾರೆ. ಕಟ್ಟಡಗಳ ನಿರ್ಮಾಣ ಕಲೆಯನ್ನು ವಾಸ್ತುಶಿಲ್ಪ ಎಂದು ಹೇಳಬಹುದು. ವಾಸ್ತುಶಿಲ್ಪವು ಮಾನವನ ನಾಗರೀಕತೆಯ ಉಗಮದಷ್ಟೇ ಪ್ರಾಚೀನವಾದದು. ಹಾಗಾಗಿ ವಾಸ್ತುಶಿಲ್ಪವನ್ನು ಮಾನವನ ನಾಗರೀಕತೆಯ ಪ್ರತೀಕ, ಮಾನದಂಡ ಎಂದು ಕರೆಯಬಹುದಾಗಿದೆ. ಕರ್ನಾಟಕವು ವಾಸ್ತು ಶಿಲ್ಪಕಲೆಯಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಹೊಂದಿದೆ. ಕರ್ನಾಟಕ ಇತಿಹಾಸದಲ್ಲಿ ವಾಸ್ತುಶಿಲ್ಪದ ಉಗಮವನ್ನು ಮೌರ್ಯರ ಕಾಲಕ್ಕೆ ಕೊಂಡೊಯ್ಯಬಹುದು. ಅವರ ಕಾಲಾವಧಿಯಲ್ಲಿ ನಿರ್ಮಾಣಗೊಂಡ ವಾಸ್ತುಶಿಲ್ಪವು ಸೀಮಿತವಾಗಿದೆ. ಬಾದಾಮಿ ಚಾಲುಕ್ಯರ ಆಳ್ವಿಕೆಯ ಕಾಲದಲ್ಲಿ ದೇವಾಲಯಗಳ ನಿರ್ಮಾಣ ಪ್ರಯೋಗ ನಡೆದು ವ್ಯವಸ್ಥಿತವಾದ ವಾಸ್ತುಶಿಲ್ಪಕ್ಕೆ ಭದ್ರವಾದ ಬುನಾದಿ ನಿರ್ಮಾಣವಾಯಿತು. ನಂತರದ ರಾಜಮನೆತನಗಳ ಆಳ್ವಿಕೆಯ ಕಾಲಾವಧಿಯಲ್ಲಿ ವಾಸ್ತುಶಿಲ್ಪವು ಹಲವಾರು ಅಂಶಗಳ ಸೇರ್ಪಡೆಯೊಂದಿಗೆ ಬೃಹದಾಕಾರವಾಗಿ ಬೆಳೆದು ದ್ರಾವಿಡ ಶೈಲಿ ಎಂದು ಪ್ರಸಿದ್ಧವಾಯಿತು.

೪.೨.೧. ವಾಸ್ತುಶಿಲ್ಪ

ಭಾರತದಲ್ಲಿ ರಚಿತವಾಗಿರುವ ವಾಸ್ತು ರಚನೆಯನ್ನು ಅವುಗಳ ರಚನಾ ವಿನ್ಯಾಸದಿಂದ ವಿದ್ವಾಂಸರು ಸ್ಥೂಲವಾಗಿ ನಾಗರ, ವೇಸರ ಮತ್ತು ದ್ರಾವಿಡ ಶೈಲಿ ಎಂದು ವಿಂಗಡಿಸಿರುತ್ತಾರೆ ಇವುಗಳಲ್ಲಿ ನಾಗರ ಶೈಲಿಯು ಉತ್ತರ ಭಾರತದಲ್ಲಿ ಹೆಚ್ಚು ಪ್ರಚಾರದಲ್ಲಿದೆ. ವೇಸರ ಶೈಲಿಯು ಕರ್ನಾಟಕ ಮತ್ತು ಆಂಧ್ರ ಪ್ರದೇಶಗಲ್ಲಿ ನಾಗರ ಮತ್ತು ದ್ರಾವಿಡ ಶೈಲಿಗಳ ಮಿಶ್ರಣದಂತಿದೆ. ಈ ವಿಭಾಗಗಳನ್ನು ರಾಜ ವಂಶಗಳ ಹೆಸರಿನಲ್ಲಿ ಗುರುತಿಸಲಾಗುತ್ತದೆ. ಬಾದಾಮಿ ಚಾಲುಕ್ಯ, ಕಲ್ಯಾಣದ ಚಾಲುಕ್ಯ, ಹೊಯ್ಸಳರು, ವಿಜಯನಗರ ಶೈಲಿ ಎಂದು ವಿಂಗಡಿಸಲಾಗಿದೆ. ಈ ಬಗೆಯ ವಿಂಗಡನೆಯನ್ನು ಆಯಾ ರಾಜವಂಶಗಳು ಬಳಸಿರುವ ಶಿಲೆ, ಕಲೆಯ ಲಕ್ಷಣಗಳ ಆಧಾರದ ಮೇಲೆ ಮಾಡಲಾಗಿದೆ. ಈ ಲಕ್ಷಣಗಳನ್ನು ಹೇಳುವಾಗ ವ್ಯತ್ಯಾಸದ ಅಂತರ ತೀರಾ ಕಡಿಮೆ ಇರುತ್ತದೆ.

೪.೨.೨. ದೇವಾಲಯ

ದೇವಾಲಯ ಎಂದರೆ ದೇವರಿಗಾಗಿ ನಿರ್ಮಿಸಿದ ಆಲಯವೇ ಆಗಿದೆ. ಮಾನವನು ಮನೆಗಳನ್ನು ನಿರ್ಮಿಸಿಕೊಂಡು ಹೇಗೆ ಜೀವನ ನಿರ್ವಹಿಸುವನೋ ಹಾಗೆಯೇ ದೇವರಿಗೂ ಆಲಯವನ್ನು ನಿರ್ಮಿಸಬೇಕು ಎನ್ನುವ ಉದ್ದೇಶದಿಂದ ದೇವಾಲಯವನ್ನು ನಿರ್ಮಿಸಲು ಪ್ರಾರಂಭಿಸಿರಬೇಕು ದೇವಾಲಯದಲ್ಲಿ ಪರಮಾತ್ಮನನ್ನು ಪೂಜಿಸುವ ಭಕ್ತನ ವಿಶ್ವಾಸ ಶಕ್ತಿಯು ಪರಮಾತ್ಮನ ವಾತ್ಸಲ್ಯವೆಂಬ ಸಮಶಕ್ತಿಯೊಡನೆ ಸೇರಿದಾಗ ಭಕ್ತನಲ್ಲಿ ಒಂದು ಪ್ರಬಲ ಶಕ್ತಿಯು ಉತ್ಪನ್ನವಾಗಿ ಅವನನ್ನೇ ಉನ್ನತಿಗೇರಿಸುತ್ತದೆ. ಮಾನವನ ದೈವ–ಇಹ, ಪರ, ವಾಸ್ತವಿಕ ಆದರ್ಶ ಇವುಗಳ ಮಿಲನದ ಸಂಕೇತವೇ ದೇವಾಲಯ[೨೪] ಲೋಕ ಸಂರಕ್ಷಣೆಗಾಗಿ ಭಗವಂತನು ಭೂಮಿಯಲ್ಲಿ ವಾಸಮಾಡುವ ಸ್ಥಳವಾದ ದೇವಾಲಯವು ಜೀವಾತ್ಮ ಪರಮಾತ್ಮದಲ್ಲಿ ಇರುವ ಅಂತರವನ್ನು ಬಹುಮಟ್ಟಿಗೆ ಕಡಿಮೆ ಮಾಡುತ್ತದೆ.

ಜಗತ್ತಿನ ಸೃಷ್ಟಿಕರ್ತ ಹಾಗೂ ನಿಯಂತ್ರಕನಾದ ದೇವನ ಬಳಿಗೆ ಹೋಗಲು ಸರಿಯಾದ ಮಾರ್ಗವನ್ನು ತೋರಿಸುವಂತೆ ಅವನನ್ನು ಪ್ರಾರ್ಥಿಸುವ ಸ್ಥಳವೂ ದೇವಾಲಯವೇ ಆಗಿದೆ ಎಂದು ಹೇಳಬಹುದು.[೨೫]

೪.೨.೩. ದೇವಾಲಯದ ಉಗಮ ಮತ್ತು ವಿಕಾಸ

ದೇವಾಲಯಗಳು ಗತಕಾಲದ ಸಾಂಸ್ಕೃತಿಕ ಚರಿತ್ರೆಯ ಹೆಗ್ಗುರುತುಗಳಾಗಿವೆ. ಇವು ಮಧ್ಯಕಾಲದ ವೇಳೆಗೆ ದೇವಾಲಯಗಳಿಲ್ಲದೆ ಬದುಕೇ ಇಲ್ಲಾ ಎಂಬಷ್ಟರ ಮಟ್ಟಿಗೆ ಬೆಳೆದವು. ದೇವಾಲಯಗಳ ಅಧ್ಯಯನವು ಚರಿತ್ರೆಯ ರಚನೆಯಲ್ಲಿ ಬಹುಮುಖ್ಯ ಪುರಾತತ್ವೀಯ ಆಕಾರವಾಗಿ ಕಂಡುಬರುತ್ತದೆ. ಹಾಗೂ ಕಳೆದು ಹೋದ ಗತವನ್ನು ಪುನಃ ಕಟ್ಟುವ ಬಹುಮುಖ್ಯ ಸಂಪತ್ತು. ಒಂದು ದೇಶದ ಸಾಂಸ್ಕೃತಿಕ ಸಂಪತ್ತು ಎನಿಸಿಕೊಂಡಿರುವ ದೇವಾಲಯಗಳು ಆ ದೇಶದ ಸಂಸ್ಕೃತಿಯನ್ನು ಶ್ರೀಮಂತಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಈ ನಿಟ್ಟಿನಲ್ಲಿ ಭಾರತ ಪ್ರಾಚೀನ ಕಾಲದಿಂದಲೂ ಭವ್ಯಪರಂಪರೆಯನ್ನು ಹೊಂದಿದ ದೇಶವಾಗಿದೆ. ಭಾರತದ ತುಂಬಾ ಓಡಾಡಿದ

ಯಾವುದೇ ವ್ಯಕ್ತಿಗೆ ಪ್ರತಿ ಹಳ್ಳಿಯಲ್ಲೂ ನದಿದಡ ಬೆಟ್ಟದ ಮೇಲೆ, ಊರ ಮಧ್ಯದಲ್ಲಿ ಊರಿನ ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಹೀಗೆ ಒಂದಲ್ಲಾ ಒಂದು ಕಡೆದೇವಾಲಯಗಳು ಕಾಣಬರುತ್ತವೆ.[೨೬]

ದೇವಾಲಯದ ಉಗಮವನ್ನು ನಿಖರವಾಗಿ ವಿವರಿಸಲು ಸಾಧ್ಯವಿಲ್ಲ. ಈ ವಿಷಯದಲ್ಲಿ ಎ.ಎಸ್.ಅಲ್ಟೇಕರ್‌ರವರು ಮೂರ್ತಿ ಪೂಜೆಯ ಆರಂಭ ಮತ್ತು ಬೆಳವಣಿಗೆಯ ವಿಷಯವಾಗಿ ಕೆಲಸ ನಡೆಯಬೇಕಾಗಿದೆ. ಮನೆಯಲ್ಲಾಗಲಿ ದೇವಾಲಯದಲ್ಲಾಗಲಿ ದೇವತೆ ದೇವಸ್ಥಾನಗಳನ್ನು ಸ್ಥಾಪಿಸುವ ಸಂಪ್ರದಾಯ ಅಶೋಕನಿಗಿಂತ ಈಚೀನದೆಂದು ಕಾಣುತ್ತದೆ. ಬಹುಜನ ನೆರೆಯುತ್ತಿದ್ದ ಕಾತ್ರಯಜ್ಞಗಳ ಸ್ಥಾನದಲ್ಲಿ ಇವು ಕಾಣಿಸಿಕೊಂಡವು. ಬೌದ್ಧರ ಭವ್ಯ ದೇವಾಲಯ, ವಿಹಾರಗಳನ್ನು ನೋಡಿದ ಹಿಂದೂಗಳ ಮನಸ್ಸಿನಲ್ಲಿ ಅಂತಹ ಸಾರ್ವಜನಿಕ ಆರಾಧನಾ ಕೇಂದ್ರಗಳನ್ನು ಸ್ಥಾಪಿಸಬೇಕೆಂಬ ಇಚ್ಛೆ ಉದಯಿಸಿದ್ದರೂ ಇರಬಹುದು. ಅಂತೂ ನಿಜವಾದ ಕಾರಣಗಳೇನೇ ಇರಲಿ ದೇವಾಲಯಗಳು ಸಾರ್ವಜನಿಕ ಪೂಜಾಕೇಂದ್ರಗಳೆಂದು ತರುವಾಯ ಪರಿಗಣಿತವಾದದ್ದು ಎಂದು ಅಭಿಪ್ರಾಯ ಪಟ್ಟಿದ್ದಾರೆ.[೨೭]

ಮಾನವನ ಮೊದಲ ವಸತಿ ತಾಣಗಳಾಗಿದ್ದ ಗುಹೆಗಳಲ್ಲಿ ಭಾರತದ ಮೊದಲ ದೇವಾಲಯಗಳ ರಚನೆಯನ್ನು ಕಾಣಬಹುದು. ಮಾನವ ತನಗಾಗಿ ನಿರ್ಮಿಸಿಕೊಂಡ ಮನೆ ಗೃಹ ವಾಸ್ತುಶಿಲ್ಪ ಎನಿಸಿದರೆ ತನ್ನ ದೇವರಿಗೆ ನಿರ್ಮಿಸಿದ್ದು ಧಾರ್ಮಿಕ ವಾಸ್ತು ಶಿಲ್ಪವೆಂದಾಯಿತು. ಮಾಯಾಮತ ಗ್ರಂಥವು ವಾಸ್ತು ಎಂಬುದನ್ನು ಹೀಗೆ ಹೇಳಿದೆ. ದುರ್ತ್ಯರು ಮತ್ತು ಅಮರ್ತ್ಯರು ವಾಸಿಸುವ ಸ್ಥಳಕ್ಕೆ ವಾಸ್ತು ಎಂದು ಹೆಸರು ಈ ವಾಸ್ತುವನ್ನು ಆಧರಿಸಿದ್ದು ವಾಸ್ತುಶಿಲ್ಪ ಎಂದು ಗುರುತಿಸಲ್ಪಡುತ್ತದೆ.[೨೮]

ಕಾಲಕಳೆದಂತೆಲ್ಲಾ ಮಾನವನ ಚಿಂತನೆಗಳು ಬದಲಾದಂತೆ ದೇವಾಲಯವನ್ನು ಮನುಷ್ಯನ ದೇಹದೊಡನೆ ಸಮೀಕರಿಸುವ ಭಾವನೆ ಬೆಳೆಯಿತು. ಕಟ್ಟಡದ ಹಲವಾರು ಭಾಗಗಳಿಗೆ ದೇಹದ ವಿವಿಧ ಅಂಗಗಳಾದ ಪಾದ, ಚರಣ, ಅಂಘ್ರಿ, ಜಂಘ, ಕಟಿ, ರುಕ್ಷಿ, ಗ್ರೀವ, ಕಂಠ, ಶಿಖರ, ಶರ, ಮಸ್ತಕ, ಮುಖ, ವಕ್ತ್ರ, ಸಾಸಿಕ ಇತ್ಯಾದಿ ಹೆಸರನ್ನು ಕೊಡಲಾಯಿತು.[೨೯]

ಸಂಖ್ಯೆ-೦೧

ಹೆಸರು : ಮಲ್ಲಿಕಾರ್ಜುನ ದೇವಾಲಯ

ಪಟ್ಟಣ : ಮೃಗವಧೆ

ದಿಕ್ಕು : ಪೂರ್ವಾಭಿಮುಖ

ಕಾಲ : ಕಲ್ಯಾಣದ ಚಾಲುಕ್ಯರು

ಈ ದೇವಾಲಯವು ಪೂರ್ವಕ್ಕೆ ಪ್ರವೇಶದ್ವಾರವನ್ನು ಹೊಂದಿದ್ದು ಹಾಗೂ ದಕ್ಷಿಣ ಮತ್ತು ಉತ್ತರದಲ್ಲಿ ಎರಡು ದ್ವಾರಗಳಿವೆ. ದೇವಾಲಯವನ್ನು ಸ್ಥಳೀಯವಾಗಿ ಲಭ್ಯವಿದ್ದ ಗ್ರಾನೈಟ್ ಶಿಲೆಯಿಂದ ಕಟ್ಟಲಾಗಿದೆ. ಈ ದೇವಾಲಯವು ೫೫ ಅಡಿ ಉದ್ದ ಮತ್ತು ೧೮ ಅಡಿ

ಅಗಲವಾಗಿದೆ. ಇದು ಪ್ರಕಾರ ಗೋಡೆಯನ್ನು ಹೊಂದಿದ್ದು ಕ್ಷೇತ್ರಪಾಲ, ತುಳಸಿಕಟ್ಟೆ ಮತ್ತು ನಂದಿಸ್ತಂಭವನ್ನು ಪ್ರಕಾರ ಗೋಡೆಯ ಒಳಭಾಗದಲ್ಲಿ ಕಾಣಬಹುದು. ಈ ದೇವಾಲಯದ ತಳನಕ್ಷೆಯಲ್ಲಿ ಕಂಡುಬರುವುದೇನೆಂದರೆ. ಮುಖಮಂಟಪ, ನವರಂಗ, ಅಂತರಾಳ, ಗರ್ಭಗೃಹ ಹೊಂದಿದೆ ತಳಹದಿಯ ಮೇಲೆ ಅಧಿಷ್ಠಾನವಿರುತ್ತದೆ ದೇವಾಲಯದ ವಾಸ್ತುವಿನಲ್ಲಿ ಪ್ರಮುಖ ಭಾಗವಾಗಿದೆ. ಈ ದೇವಾಲಯವು ಸುಮಾರು ೪ ಅಡಿ ಎತ್ತರವಾದ ಅಧಿಷ್ಠಾನವನ್ನು ಹೊಂದಿದೆ ಅಧಿಷ್ಠಾನದ ಮೇಲೆ ಕಂಡುಬರುವ ಪ್ರಸ್ತರದವರೆಗಿನ ಭಿತ್ತಿಯು ಎರಡನೆ ಭಾಗವಾಗಿದೆ ಭಿತ್ತಿಯು ಮೂರ್ತಿಗೆ ರಕ್ಷಣೆ ಕೊಡುವುದಲ್ಲದೆ ಸ್ವಲ್ಪಮಟ್ಟಿಗೆ ದೇವಾಲಯದ ಬಾರಹೊರಲು ಹೆಗಲನ್ನು ಕೊಡುತ್ತದೆ. ದೇವಾಲಯದ ಭಿತ್ತಿಯು ಸರಳವಾಗಿದ್ದು ಭಿತ್ತಿಯಲ್ಲಿ ಯಾವುದೇ ಕೆತ್ತನೆ ಕಂಡುಬರುವುದಿಲ್ಲ ಸರಳವಾದ ಕುಡ್ಯ ಸ್ತಂಭಗಳು ಕಂಡುಬರುತ್ತವೆ. ಭಿತ್ತಿಯ ಮೇಲ್ಭಾಗದಲ್ಲಿ ಪ್ರಸ್ತರವಿದೆ. ಧಜ್ವವು ಭಿತ್ತಿಯ ಮೇಲ್ಭಾಗದಲ್ಲಿ ಕಂಡುಬಂದಿದ್ದು ಈ ದೇವಾಲಯದಲ್ಲಿ ಗೋಡೆಯಿಂದ ಮುಂಚಾಚಿರುತ್ತದೆ. ಮಳೆಯ ನೀರನ್ನು ಹೊರಹೋಗಲು ಈ ರೀತಿ ಮಾಡುತ್ತಿದ್ದರು ಶಿಖರವು ಗ್ರೀವದ ಮೇಲಿನ ಭಾಗವಾಗಿದ್ದು ಶಿಖರದ ನಾಲ್ಕು ಮೂಲೆಯಲ್ಲಿಯೂ ಶೈವ ಸೂಚಕವಾಗಿ ವೀರಭದ್ರ ಮೂರ್ತಿಯಿದೆ ಈ ಶಿಖರವು ಕದಂಬ ನಾಗರ ಶೈಲಿಯಲ್ಲಿದೆ ಶಿಖರದ ಮೇಲೆ ಕಳಸ ಮತ್ತು ಸ್ತೂಪಿ ಕಂಡುಬರುತ್ತದೆ.

ಈ ದೇವಾಲಯದ ಮುಖಮಂಟಪಕ್ಕೆ ಕೆಲವು ಸೋಪಾನಗಳಿವೆ. ತೆರೆದ ಮುಖಮಂಟಪವಾಗಿದೆ. ಮೆಟ್ಟಿಲುಗಳ ಎರಡು ಬದಿಯಲ್ಲಿಯೂ ಸುಂದರವಾದ ಕೈಪಿಡಿಗಳಿದ್ದು ಸುರುಳಿಯಾಕಾರದಲ್ಲಿದೆ. ಮುಖ ಮಂಟಪದಲ್ಲಿ ಎರಡು ಸ್ವತಂತ್ರ್ಯ ಕಂಬಗಳು ಹಾಗೂ ಹಿಂಭಾಗದ ಗೋಡೆಯಲ್ಲಿ ಎರಡು ಅರ್ಧಗಂಭಗಳಿವೆ. ಇವು ವಿಜಯನಗರದ ಶೈಲಿಯಲ್ಲಿದೆ. ಮುಖಮಂಟಪದ ಎರಡು ಬದಿಯಲ್ಲಿ ಜಾಲರಂಧ್ರಗಳು ಕಂಡುಬಂದಿದ್ದು, ವೃತ್ತಾಕಾರ ಹಾಗೂ ಚೌಕಾಕಾರ ರಚನೆಯು ಈ ಜಾಲರಂಧ್ರಗಳಲ್ಲೂ ಕಂಡುಬಂದಿದೆ.

ಮುಖಮಂಟಪದ ಪ್ರವೇಶದ್ವಾರದ ಬಾಗಿಲುವಾಡದಲ್ಲಿ ಎರಡು ಶಾಖೆಗಳನ್ನು ಹೊಂದಿದೆ. ಬಾಗಿಲುವಾಡ ಆಯತಾಕಾರವಾಗಿದೆ. ಇದರ ಬಾಗಿಲುವಾಡದ ಶಾಖೆಗಳಲ್ಲಿ ಲತಾಸುರುಳಿಯ ಸುಂದರವಾದ ಕೆತ್ತನೆಗಳು ಕಂಡುಬರುತ್ತವೆ. ದ್ವಾರದ ಅಕ್ಕ ಪಕ್ಕ ಶೈವ ದ್ವಾರಪಾಲಕರ ಉಬ್ಬು ಕೆತ್ತನೆಗಳು ಕಂಡುಬರುತ್ತವೆ. ಕೆಳದಿ ಅರಸರ ಕಾಲದಲ್ಲಿ ಕಂಡುಬರುವ ಅತ್ಯುತ್ತಮ ಇಂಡೋ ಇಸ್ಲಾಮಿಕ್ ಶೈಲಿಯ ಬಾಗಿಲುಗಳ ರಚನೆಯನ್ನು ಕಾಣಬಹುದು. ಒಂಭತ್ತು ಅಂಕಣದಿಂದ ಕೂಡಿದ ಮೇಲ್ಛಾವಣಿಯನ್ನು ನವರಂಗ ಎಂದು ಕರೆಯುತ್ತಾರೆ. ರಂಗಮಂಟಪಕ್ಕೆ ಮೂರು ಪ್ರವೇಶ ದ್ವಾರಗಳಿವೆ ಒಂದು ಪೂರ್ವಾಭಿಮುಖವಾಗಿದೆ. ಉಳಿದ ಎರಡು ದ್ವಾರಗಳು ದಕ್ಷಿಣ ಮತ್ತು ಉತ್ತರದ ಗೋಡೆಯಲ್ಲಿ ಕಂಡುಬರುತ್ತವೆ ಎರಡು ದ್ವಾರದಲ್ಲಿಯೂ ಶೈವ ದ್ವಾರಪಾಲಕರ ಕೆತ್ತನೆ ಕಂಡುಬರುತ್ತದೆ.

ನವರಂಗದ ಮಧ್ಯಭಾಗದಲ್ಲಿ ನಾಲ್ಕು ಸ್ವತಂತ್ರ ಕಂಬಗಳಿವೆ ಅದರ ಮಧ್ಯದಲ್ಲಿ ವಿತಾನವು ಕದಳಿ ಅಂಕಣದಿಂದ ಕೂಡಿದೆ ನಂದಿಯನ್ನು ಶಿವಲಿಂಗಕ್ಕೆ ಎದುರಾಗಿ ಪ್ರತಿಷ್ಠಾಪಿಸಲಾಗಿದೆ. ಈ ನಾಲ್ಕು ಕಂಬಗಳು ಕಲ್ಯಾಣ ಚಾಲುಕ್ಯರ ಶೈಲಿಯಲ್ಲಿದೆ ನವರಂಗದ ಮೇಲ್ಛಾವಣಿಯಲ್ಲಿ ಸುಂದರವಾದ ಕಮಲದ ಕೆತ್ತನೆಯಿದೆ. ಅದರ ಮಧ್ಯದಲ್ಲಿ ಕಲ್ಲಿನ ಮೊಗ್ಗನ್ನು ಇಳಿ ಬಿಡಿಸಲಾಗಿದೆ. ಈ ಕಮಲದ ಕೆತ್ತನೆಯ ಮೇಲ್ಛಾವಣಿಯು ಅಷ್ಟದಿಕ್ಪಾಲಕರನ್ನು ಸೂಚಿಸುತ್ತದೆ.

ಈ ದೇವಾಲಯದಲ್ಲಿ ಒಟ್ಟು ೧೨ ಕಂಬಗಳು ಕಂಡುಬಂದಿದ್ದು ೨ ಸ್ವತಂತ್ರ ಕಂಬಗಳಾಗಿದ್ದು ೪ ಕಂಬಗಳು ನವರಂಗದಲ್ಲಿ ಮೇಲ್ಛಾವಣಿಯನ್ನು ಹೊತ್ತು ನಿಂತಿದ್ದು ಇನ್ನುಳಿದ ೬ ಕಂಬಗಳು ಅರೆಕಂಬಗಳಾಗಿದ್ದು ಮಂಟಪ ಹಾಗೂ ಭಿತ್ತಿಯಲ್ಲಿ ಕಂಡುಬಂದಿದೆ.

ಈ ದೇವಾಲಯದಲ್ಲಿ ಕಂಡುಬರುವ ಕಂಬಗಳು ಕಲ್ಯಾಣ ಚಾಲುಕ್ಯರು ಮತ್ತು ವಿಜಯನಗರ ಶೈಲಿಯಲ್ಲಿವೆ. ಅಂತರಾಳವು ಸರಳವಾಗಿದ್ದು ಗರ್ಭಗೃಹಕ್ಕೆ ಸಮನಾಗಿದೆ.

ಗರ್ಭಗೃಹದಲ್ಲಿ ಮೂರು ಅಡಿ ಪೀಠದ ಮೇಲೆ ಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಶಿವಲಿಂಗಕ್ಕೆ ಲೋಹ ಮುಖವಾಡವಿದೆ. ಇದು ಸುಂದರವಾದ ಪ್ರನಾಳವನ್ನು ಹೊಂದಿದ್ದು ದಕ್ಷಿಣ ಗೋಡೆಯಿಂದ ಹೊರಬಂದಿದೆ ಇಲ್ಲಿ ಲಿಂಗವಿದೆ ಆದರೂ ಇದಕ್ಕೆ ಮಲ್ಲಿಕಾರ್ಜುನವೆಂದೂ ಕರೆಯುತ್ತಾರೆ.

ಸಂಖ್ಯೆ–೨

ಹೆಸರು	:	ಕಪಿಲೇಶ್ವರ ದೇವಾಲಯ
ಪಟ್ಟಣ	:	ದಾವಣೆಬೈಲು
ದಿಕ್ಕು	:	ಪೂರ್ವಾಭಿಮುಖ
ಕಾಲ	:	ಹೊಯ್ಸಳರ ಕಾಲ
ಶಿಲೆ	:	ಬಳಪದ ಕಲ್ಲು

ಈ ದೇವಾಲಯವು ತೀರ್ಥಹಳ್ಳಿಯಿಂದ ೧೬ ಕಿ.ಮಿ ದೂರದ ದಾವಣೆಬೈಲು ಪ್ರದೇಶದಲ್ಲಿ ಕಂಡುಬರುತ್ತದೆ. ಬಳಪದ ಕಲ್ಲಿನಿಂದ ನಿರ್ಮಾಣವಾದ ಹೊಯ್ಸಳರ ಕಾಲದ ದೇವಾಲಯವಾಗಿದೆ. ತಳವಿನ್ಯಾಸದಲ್ಲಿ ಒಂದು ಚಚ್ಚೌಕಕಾರದ ಗರ್ಭಗೃಹ, ಸುಕನಾಸಿ, ಹಾಗೂ ಅರ್ಧ ತೆರೆದ ಕಂಬಗಳ ನವರಂಗವನ್ನು ಹೊಂದಿದೆ. ಇದು ನಿರಂಧರ (ಗರ್ಭಗುಡಿಯ ಸುತ್ತ ಪ್ರದಕ್ಷಣ ಪಥವಿಲ್ಲದಿದ್ದು) ಮಾದರಿಯ ದೇವಾಲಯ ಆದರೆ ಮೂಲತಃ ಈ ದೇವರಿಗಾಗಿ ಸಮರ್ಪಿಸಲ್ಪಟ್ಟಿತ್ತು ಎಂದು ತಿಳಿದುಬರುದಿಲ್ಲಾ ಏಕೆಂದರೆ ಇಂದು ಗರ್ಭಗೃಹದಲ್ಲಿ ಯಾವುದೇ ಮೂರ್ತಿಯು ಕಂಡುಬಂದಿಲ್ಲ ಆದರೆ ಸ್ಥಳೀಯರು ಈ ದೇವಾಲಯವನ್ನು ಕಪೀಲೇಶ್ವರ ಎಂದು ಕರೆಯುತ್ತಾರೆ.

ಈ ದೇವಾಲಯವು ಸುಮಾರು ಮೂರು ಅಡಿಗಳಷ್ಟು ಎತ್ತರವಿರುವ ಅಧಿಷ್ಠಾನವನ್ನು ಹೊಂದಿದೆ. ಅಧಿಷ್ಠಾನದ ಮೇಲಿನ ಭಾಗವನ್ನು ಭಿತ್ತಿ ಎನ್ನುತ್ತಾರೆ. ಅಂದರೆ ದೇವಾಲಯದ ಗೋಡೆಗಳು ಅತ್ಯಂತ ಸರಳವಾಗಿವೆ. ಕೆಲವೊಂದು ಅರ್ಧಗಂಭಗಳ ರಚನೆಗಳು ಕಂಡುಬರುತ್ತವೆ. ದೇವಾಲಯದ ಗರ್ಭಗೃಹದ ಹೊರಗೋಡೆಯ ಭಾಗದಲ್ಲಿ ಮಾತ್ರ ಒಂದೊಂದು ದೇವಕೋಷ್ಟಕದ

ಮೇಲಿನ ಭಾಗದಲ್ಲಿ ಸಣ್ಣ ಶಿಖರಗಳಿದ್ದು ಅವು ದ್ರಾವಿಡ ವಿಮಾನ ಶೈಲಿಯಲ್ಲಿದೆ. ಗೋಡೆಯ ಮೇಲಿನ ಭಾಗದಲ್ಲಿ ಇಳಿಜಾರಿನ ಮಾಡಿನ ರಚನೆ ಇದ್ದು ಹೊರಭಾಗ ಸರಳವಾಗಿದೆ. ಗರ್ಭಗೃಹದ ಹೊರಭಾಗದಲ್ಲಿರುವ ದೇವಕೋಷ್ಠಕಗಳ ಗಿರಿ-ಶಿಖರಗಳ ಕೆಳಭಾಗದಲ್ಲಿ ಹಾರುತ್ತಿರುವ ಬಾತುಕೋಳಿಗಳ ಒಂದು ಸಾಲನ್ನು ನೋಡಬಹುದು.

ಈ ದೇವಾಲಯದ ವಿಮಾನದ ಮೇಲೆ ಯಾವುದೇ ರೀತಿಯ ಮಾದರಿಯ ಶಿಖರ ಕಂಡುಬರುದಿಲ್ಲಾ ಮೂಲತಃ ಮಲೆನಾಡು ಪ್ರದೇಶದ ಅನೇಕ ದೇವಾಲಯಗಳಲ್ಲಿ ಕಂಡುಬರುವಂತಹ ಹೆಚ್ಚಿನ ಮೇಲ್ಛಾವಣಿ ಇದ್ದು ಕಾಲಾನಂತರದಲ್ಲಿ ಹಾಳಾಗಿ ಹೋಗಿರುವ ಸಾಧ್ಯತೆ ಇದೆ. ಏಕೆಂದರೆ ಇಂದು ಗರ್ಭಗೃಹದ ಮೇಲಿನ ಹೆಂಚುಗಳು ರಾಶಿಯಾಗಿ ಸಿಗುತ್ತವೆ. ಅಂತೆಯೇ ದೇವಾಲಯದ ಮೇಲಿನ ಭಾಗದಲ್ಲಿ ಅನೇಕ ಕಲ್ಲಿನ ದೋಣಿಗಳಿದ್ದು ಆ ಮೂಲಕ ಮಲೆನಾಡಿನಲ್ಲಿ ಬೀಳುವ ಅಧಿಕ ಮಳೆಯ ನೀರು ದೇವಾಲಯದ ಮೇಲೆ ಶೇಖರವಾಗದಂತೆ ವ್ಯವಸ್ಥೆ ಮಾಡಲಾಗಿದೆ.

ದೇವಾಲಯವು ೩ ಪ್ರವೇಶ ದ್ವಾರಗಳನ್ನು ಹೊಂದಿದ್ದು ಪ್ರಮುಖ ದ್ವಾರವು ಪೂರ್ವ ದಿಕ್ಕಿಗಿದೆ ಉಳಿದಂತೆ ಉತ್ತರ ದಕ್ಷಿಣ ದಿಕ್ಕಿಗಿದೆ. ಮಂಟಪವು ೬ ಕಂಬಗಳಿಂದ ಕೂಡಿದ್ದು ಅಲ್ಲಿ ಅರ್ಧಕಂಬ ಹಾಗೂ ಶಿಖರಗಳ ರಚನೆಯನ್ನು ಹೊರಭಾಗದಲ್ಲಿ ವೀಕ್ಷಿಸಬಹುದಾಗಿದೆ. ಅವುಗಳ ಮಧ್ಯದಲ್ಲಿ ವಜ್ರದಾಕಾರದ ರಚನೆಗಳು ಕಂಡುಬರುತ್ತವೆ ಈ Railings ದೇವಾಲಯದ ನವರಂಗದ ಸುತ್ತ ಇರುವ ಸುಖದಾಸಕ್ಕೆ ತಾಗಿಕೊಂಡಿದೆ. ಈ Railingsನ ಮೇಲಿನ ಭಾಗದ ಪಟ್ಟಿಕೆಯಲ್ಲಿ ಕೆಲವು ಚಿತ್ರಗಳು ಕಂಡರಿಸಿದ್ದು ಅವು ತ್ರಿಭಂಗಿಯಲ್ಲಿ ನಿಂತಿರುವಂತೆ ಕಾಣುತ್ತದೆ.

ನವರಂಗ ಉಳಿದ ಕಂಬಗಳು ಸ್ವಲ್ಪ ಭಿನ್ನ ಮಾದರಿಯವಾಗಿದ್ದು ಮಧ್ಯಭಾಗದಲ್ಲಿ ನೃತ್ಯವೇದಿಕೆಯಿದ್ದು ಮೇಲಿನ ಭುವನೇಶ್ವರಿಯು ಅತ್ಯಂತ ಸುಂದರವಾಗಿದೆ. ದೇವಾಲಯದ ನವರಂಗದ ದ್ವಾರಶಾಖೆಯು ಅತ್ಯಂತ ಸರಳವಾಗಿದ್ದು ಅದು ಏಳು ಶಾಖೆಗಳಿಂದ ಕೂಡಿದೆ. ಹಾಗೆಯೇ ಅರ್ಧ ಕಂಬದ ಕೆಳಗಿನ ಪಟ್ಟಿಯಲ್ಲಿ ತ್ರಿಭಂಗದಲ್ಲಿ ನಿಂತಿರುವ ಚಾಮರಧಾರಿಯನ್ನು ನೋಡಬಹುದಾಗಿದೆ. ಕೆಲವೇ ಆಭರಣಗಳಿಂದ ಅಲಂಕರಿಸಿದ್ದಾರೆ. ಅಲ್ಲಿಂದ ಮುಂದೆ ಸುಖನಾಸಿಯ ದ್ವಾರದ ಎರಡು ಬದಿಯಲ್ಲಿ ಎತ್ತರದ ದೇವಕೋಷ್ಟಕದ ಮೇಲೆ ಸುಂದರವಾದ ದ್ರಾವಿಡ ಮಾದರಿಯ ಶಿಖರವಿದೆ.

ಸಂಖ್ಯೆ-೦೩

ಹೆಸರು : ಕಾಶಿ ವಿಶ್ವೇಶ್ವರ ದೇವಾಲಯ

ಪಟ್ಟಣ : ಕೌಲೇದುರ್ಗ

ಕಾಲ : ಕೆಳದಿ ಅರಸರು

ಈ ದೇವಾಲಯವು ತೀರ್ಥಹಳ್ಳಿಯಿಂದ ನೈರುತ್ಯಕ್ಕೆ ಸುಮಾರು ೩೦ ಕಿ.ಮಿ ದೂರದಲ್ಲಿದೆ ದೇವಾಲಯವು ೩೦ ಅಡಿ ಉದ್ದ ೨೦ ಅಗಲವಾದ ಆಯತಾಕಾರದ ನೆಲೆಗಟ್ಟಿನ ಮೇಲೆ

ಕಟ್ಟಿದ್ದಾರೆ ಗರ್ಭಗುಡಿ, ಸುಖನಾಸಿ, ಮುಖಮಂಟಪ (ನವರಂಗ) ಈ ಮೂರು ವಿಭಾಗಗಳನ್ನು ನೋಡಬಹುದು ಗರ್ಭಗುಡಿಯಲ್ಲಿ ಶಿವಲಿಂಗವಿದೆ ತನ್ನ ತಂದೆ ದೊಡ್ಡ ಸಂಕಣ್ಣನಾಯಕನು ಕಾಶಿಯಿಂದ ತಂದ ವಿಶ್ವೇಶ್ವರ ಲಿಂಗವನ್ನು ಹಿರಿಯ ವೆಂಕಟಪ್ಪನಾಯಕ ಇಲ್ಲಿ ದೇವಾಲಯಕ್ಕೆ ಕಾಶೀವಿಶ್ವೇಶ್ವರ ದೇವಾಲಯವೆಂದೂ ಹೆಸರು ಬಂತು.

ಈ ದೇವಾಲಯವನ್ನು ಪೂರ್ಣವಾಗಿ ಕಲ್ಲಿನಿಂದಲೇ ಕಟ್ಟಿದ್ದಾರೆ ಗರ್ಭಗುಡಿಯ ಮೇಲೆ ಅಂತಸ್ತುಗಳುಳ್ಳ ಗೋಪುರವಿದೆ. ಗರ್ಭಗುಡಿಯ ಮತ್ತು ಸುಖನಾಸಿಯ ಬಾಗಿಲ ಚೌಕಟ್ಟುವಿದೆ ಮುಂಭಾಗದ ಬಾಗಿಲ ಚೌಕಟ್ಟು ಕಮಾನಿನಾಕೃತಿಯಲ್ಲಿದೆ ಸುಖನಾಸಿಯ ಬಾಗಿಲಿಗೆ ದ್ವಾರಪಾಲಕರನ್ನು ಗೋಡೆಯಲ್ಲೇ ಬಿಡಿಸಿದ್ದಾರೆ ಸುಖನಾಸಿಯಲ್ಲಿ ಶ್ರೀದುರ್ಗಿಯ ವಿಗ್ರಹ, ಬಸವಣ್ಣನ ವಿಗ್ರಹಗಳಿವೆ.

ದೇವಾಲಯದ ಪ್ರಕಾರದೊಳಗೆ ಬಲಭಾಗದಲ್ಲಿ ಸಣ್ಣ ಕಲ್ಲಿನ ಮಂಟಪ ಇದೆ. ಇದನ್ನು ಕಲ್ಯಾಣ ಮಂಟಪ ಎನ್ನುತ್ತಾರೆ. ಇಲ್ಲಿ ರಾಜರ ಕಾಲದಲ್ಲಿ ಉತ್ಸವಾದಿಗಳು ನಡೆಯುತ್ತಿದ್ದವು ಆಗ ಈ ಕಲ್ಯಾಣ ಮಂಟಪದಲ್ಲಿ "ಗಿರಿಜಾಕಲ್ಯಾಣ" ಉತ್ಸವ ನಡೆಯುತ್ತಿತ್ತು. ಇಲ್ಲಿನ ಶಿಲ್ಪಗಳು ವಿಜಯನಗರ ಮತ್ತು ಹೊಯ್ಸಳರ ಕಾಲದ ಶಿಲ್ಪಗಳ ಸಂಮಿಶ್ರಣ ಕಾಣಬಹುದು.

ಸಂಖ್ಯೆ-೦೪

ಹೆಸರು : ಆಂಜನೇಯ ದೇವಾಲಯ

ಪಟ್ಟಣ : ಕೌಲೇದುರ್ಗ

ಕಾಲ : ಕೆಳದಿ ನಾಯಕರು

ಈ ದೇವಾಲಯವು ಗರ್ಭಗುಡಿ ಸುಖನಾಸಿ ಮತ್ತು ನವರಂಗ ಈ ಮೂರು ಅಂಕಣಗಳಿವೆ. ಗರ್ಭಗುಡಿಯ ಬಾಗಿಲ ಚೌಕಟ್ಟು ಆಯತಾಕಾರವಾಗಿದೆ. ಸುಖನಾಸಿಯ ಬಾಗಿಲ ಚೌಕಟ್ಟು ಕಮಾನಿನಾ ಕೃತಿಯಲ್ಲಿದೆ ಗರ್ಭಗುಡಿ ಮತ್ತು ಸುಖನಾಸಿಯ ಬಾಗಿಲಲ್ಲಿ ಗೋಡೆಯಲ್ಲೇ ದ್ವಾರಪಾಲಕರನ್ನು ಚಿತ್ರಿಸಿದ್ದಾರೆ. ನವರಂಗ (ಭುವನೇಶ್ವರಿ ಮೇಲ್ಛಾವಣಿಯ ಮಧ್ಯಭಾಗ) ವಾಹನ ಸಹಿತ ಅಷ್ಟದಿಕ್ಪಾಲಕರ ಚಿತ್ರಗಳನ್ನು ಮಧ್ಯೆ ಕೆಳಮುಖವಾಗಿ ಕಮಲದ ಚಿತ್ರಗಳನ್ನು ಬಿಡಿಸಿದ್ದಾರೆ. ಸುಖನಾಸಿ ಮತ್ತು ನವರಂಗದ ಮಧ್ಯ ಇರುವ ಗೋಡೆಗಳ ಮೇಲಿನ ಕೆತ್ತನೆಗಳು ಮೊಗಲರ ಶಿಲ್ಪವನ್ನು ನೆನಪಿಗೆ ತರುತ್ತವೆ. ಇಲ್ಲಿರುವ ಕಂಬಗಳು ಸುಕನಾಸಿಯ ಗೋಡೆಗೆ ಅಂಟಿಕೊಂಡಿರುವ ಮುಂಗಾಲುಗಳನ್ನು ಮೇಲಕ್ಕೆತ್ತಿದಂತಿರುವ ಸಿಂಹಗಳು ವಿಜಯನಗರ ಶಿಲ್ಪವನ್ನು ಪ್ರತಿನಿಧಿಸುತ್ತದೆ.

ಗರ್ಭಗೃಹದಲ್ಲಿರುವ ಮೂರ್ತಿಯು ಎರಡು ಅಡಿ ಎತ್ತರದ ಮುಮ್ಮೂಲೆಯ ಕಲಾತ್ಮಕ ಕಲ್ಲಿನ ಪೀಠದ ಮೇಲೆ ವಿಗ್ರಹವನ್ನು ಪ್ರತಿಷ್ಠಾಪಿಸಿದ್ದಾರೆ. ವಿಗ್ರಹದ ಕಿರೀಟ, ಪ್ರಭಾವಳಿ, ವಸ್ತ್ರಾಲಂಕಾರ, ಆಭರಣಗಳ ಮುಂತಾದವುಗಳ ಕೆತ್ತನೆ ಕಲಾತ್ಮಕವಾಗಿದೆ. ಕಾಲುಗಳ ಬಳಿ ಧ್ಯಾನಮಗ್ನ ಭಂಗಿಯಲ್ಲಿ ಕುಳಿತಿರುವ ಎರಡು ವಾಹನರ ಶಿಲಾವಿಗ್ರಹಗಳಿವೆ.

ಈ ದೇವಾಲಯದಲ್ಲಿ ಛಾವಣಿಯು ಚಪ್ಪಟೆಯಾಗಿದೆ. ಛಾವಣಿಯ ಕಲ್ಲಿನ ಹಲಗೆಯ ಸುತ್ತ ಗೋಡೆಯಿದೆ. ಈ ಹಲಗೆಯ ಮುಂಭಾಗದಲ್ಲಿ (ಎಡದಿಂದ ಬಲಕ್ಕೆ) ವೀಣೆ ನುಡಿಸುತ್ತಿರುವ ಮೃದಂಗಬಾರಿಸುತ್ತಿರುವ ಕತ್ತಿ ಹಿಡಿದಿರುವ ಚತುರ್ಮುಖ ಬ್ರಹ್ಮನ ಆಂಜನೇಯ, ವೀಣಾಧಾರಿಯ, ಡಮರುಧಾರಿಯ ಚಿತ್ರಗಳನ್ನು ಕೆತ್ತಿದ್ದಾರೆ. ಈ ಹಲಗೆಯ ಕಮಾನಿನಾಕೃತಿಯ ಗಾರೆಯ ಸುತ್ತುಪಟ್ಟಿ ಇದೆ. ನಾಲ್ಕು ಮೀನಾರ್‌ಗಳಿವೆ ಛಾವಣಿಯ ನೀರು ಹರಿದು ಹೋಗಲು ಕಲ್ಲಿನ ಲೋವೆಗಳಿವೆ, ದೇವಾಲಯದ ಗೋಡೆಗಳ ಹೊರಭಾಗದಲ್ಲಿ ವೀರರ ಹೋರಾಟಗಾರರ ಚಿತ್ರಗಳನ್ನು ಬಿಡಿಸಿದ್ದಾರೆ.

ಸಂಖ್ಯೆ–೫

ಹೆಸರು : ರಾಮೇಶ್ವರ ದೇವಾಲಯ

ಪಟ್ಟಣ : ತೀರ್ಥಹಳ್ಳಿ

ಕಾಲ : ವಿಜಯನಗರ

ರಾಮೇಶ್ವರ ದೇವಾಲಯವು ತಳವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗ ಮತ್ತು ಮುಖಮಂಟಪ ಹೊಂದಿದ್ದು ಏಕಕೂಟ ಶೈವ ದೇವಾಲಯ, ಮಂಟಪವು ೮ ಕಂಬಗಳನ್ನು ಹೊಂದಿದ್ದು ೪ ಸ್ವತಂತ್ರ್ಯ ಕಂಬಗಳು ವಿಜಯನಗರ ಶೈಲಿಯಲ್ಲಿದೆ. ಮುಖಮಂಟಪದ ಮುಂದೆ ಬಲಿಪೀಠ ಇದೆ. ಮುಖಮಂಟಪದ ಕಂಬಗಳು ೩ ಹಂತದಿಂದ ಕೂಡಿದ್ದು ಪೀಠ ಕಾಂಡ, ಬೋದಿಗೆ ಹೊಂದಿವೆ ವಿಶೇಷವಾಗಿ ಅಲಂಕೃತಗೊಂಡಿರುವ ಬೋದಿಗೆಯು ಮೊಗ್ಗಿನಂತೆ ಕೆಳಮುಖವಾಗಿ ಬಾಗಿದೆ.

ಮುಖಮಂಟಪದ ೨ ಅರ್ಧಕಂಬಗಳಲ್ಲಿ ಶೈವದ್ವಾರಪಾಲಕರನ್ನು ಕೆತ್ತಲಾಗಿದೆ. ಬಾಗಿಲುವಾಡವು ಸಾಧಾರಣ ಶೈಲಿಯಲ್ಲಿದ್ದು ನವರಂಗದಲ್ಲಿ ಪೂರ್ವ, ದಕ್ಷಿಣ ದಿಕ್ಕಿನ ಬಾಗಿಲುವಾಡವು ವಿಶೇಷ ಕೆತ್ತನೆಯಿಂದ ಕೂಡಿದ್ದು ಮೂರು ಶಾಖೆಗಳಿಂದ ಅಲಂಕೃತಗೊಂಡಿದೆ ಲಲಾಟ ಬಿಂಬದಲ್ಲಿ ಗಜಲಕ್ಷ್ಮಿಯ ಉಬ್ಬು ಶಿಲ್ಪಕಾಣಬಹುದು.

ನವರಂಗದ ಪೂರ್ವದ ಕೋಷ್ಟಕದಲ್ಲಿ ನವಗ್ರಹ ಸಮೇತ ಸೂರ್ಯದೇವನ ವಿಗ್ರಹ ಇರಿಸಲಾಗಿದ್ದು ನೋಡಲು ವಿಶಿಷ್ಟವಾಗಿದೆ. ವಿಗ್ರಹವು ೩ ಅಡಿ ಇದ್ದು ಪ್ರಭಾವಳಿ ಹೊಂದಿದ್ದು ಸ್ಥಾನಿಕ ಭಂಗಿಯಲ್ಲಿದೆ ಕಪ್ಪು ಶಿಲೆಯಿಂದ ಕೆತ್ತಲಾಗಿದೆ. ಗರ್ಭಗೃಹದಲ್ಲಿ ೧ ಅಡಿ ಎತ್ತರದ ಉದ್ಭವ ಲಿಂಗವಿದೆ. ನವರಂಗದ ಬಲಭಾಗದ ದೇವ ಕೋಷ್ಟಕದಲ್ಲಿ ನಂದಿ, ಗಣಪತಿ ವಿಗ್ರಹ ಪ್ರತಿಷ್ಠಾಪಿಸಲಾಗಿದೆ. ಅಲ್ಲಿ ನವರಂಗದಲ್ಲಿ ಶಿವಲಿಂಗಕ್ಕೆ ಎದುರಾಗಿ ನಂದಿ ವಿಗ್ರಹ ಇಡಲಾಗಿದೆ. ದೇವಾಲಯವನ್ನು ಗ್ರಾನೈಟ್ ಶಿಲೆಯಿಂದ ಕಟ್ಟಲಾಗಿದ್ದು ಈ ದೇವಾಲಯ ಅಧಿಷ್ಠಾನವು ಮಣ್ಣಿನಿಂದ ಮುಚ್ಚಿ ಹೋಗಿದೆ. ಭಿತ್ತಿ ಭಾಗವು ಅಲಂಕೃತವಾಗಿದ್ದು ಅಧಿಷ್ಠಾನ ಶಾಲಾ, ಕಪೋತ, ಗ್ರೀವ ಮತ್ತು ಸ್ತೂಪವನ್ನು ಕಾಣಬಹುದಾಗಿದೆ. ಆಕರ್ಷಣೀಯವಾಗಿರುವ ಶಿಖರವು ದ್ರಾವಿಡ ಶೈಲಿಯಲ್ಲಿದೆ.

ಸಂಖ್ಯೆ–೬

ಹೆಸರು : ಅಖಂಡೇಶ್ವರ ದೇವಾಲಯ

ಪಟ್ಟಣ : ಆರಗ

ದಿಕ್ಕು : ಪೂರ್ವಾಭಿಮುಖ

ಕಾಲ : ವಿಜಯನಗರ

ಪೂರ್ವಾಭಿಮುಖವಾಗಿರುವ ದೇವಾಲಯವು ತಲವಿನ್ಯಾಸದಲ್ಲಿ ಚೌಕಾಕಾರದ ಗರ್ಭಗೃಹವನ್ನು ಮಾತ್ರ ಹೊಂದಿದೆ. ಗರ್ಭಗೃಹದ ತಳದಲ್ಲಿ ಲಿಂಗವಿದೆ. ಎದುರಿಗೆ ನಂದಿ ಶಿಲ್ಪವಿದೆ. ಇವೆರಡು ಸುಮಾರು ತಳಮಟ್ಟದಿಂದ ೨–೩ ಅಡಿ ಆಳದಲ್ಲಿರುವುದು ವಿಶೇಷ. ಪ್ರವೇಶ ದ್ವಾರದ ಸುಮಾರು ೨೦ ಅಡಿ ಎತ್ತರದ ಬೃಹದಾಕಾರದ ಧ್ಯಾನಸಕ್ತ ಶಿವನ ಮೂರ್ತಿಯನ್ನು ಸ್ಥಾಪಿಸಲಾಗಿದೆ. ಲಿಂಗ ಮತ್ತು ನಂದಿ ಕಪ್ಪು ಶಿಲೆಯಲ್ಲಿವೆ.

ಸಂಖ್ಯೆ–೭

ಹೆಸರು : ಬಸವೇಶ್ವರ ದೇವಾಲಯ

ಪಟ್ಟಣ : ಕೌಲೇದುರ್ಗ

ಕಾಲ : ಕೆಳದಿ ಅರಸರು

ದಿಕ್ಕು : ಪೂರ್ವಾಭಿಮುಖ

ಪೂರ್ವಾಭಿಮುಖವಾಗಿರುವ ಬಸವೇಶ್ವರ ದೇವಾಲಯವು ಕವಲೇದುರ್ಗದ ಕೋಟೆಯೊಳಗೆ ಕಂಡುಬರುತ್ತದೆ. ತಳವಿನ್ಯಾಸದಲ್ಲಿ ಗರ್ಭಗೃಹವನ್ನು ಹೊಂದಿದೆ. ಗರ್ಭಗೃಹದಲ್ಲಿ ಪೀಠದ ಮೇಲೆ ನಂದಿಯನ್ನು ಪ್ರತಿಷ್ಠಾಪಿಸಲಾಗಿದೆ. ಇದನ್ನು ಸ್ಥಳೀಯವಾಗಿ ಕೋಟೆ ಬಸವಣ್ಣ ಎಂದು ಕರೆಯುತ್ತಾರೆ. ದೇವಾಲಯದ ಮೇಲೆ ಸುತ್ತಲೂ ನಂದಿ ಶಿಲ್ಪಗಳನ್ನು ಪ್ರವೇಶದ ಮೇಲ್ಭಾಗದಲ್ಲಿ ಈಶ್ವರ ಮತ್ತು ಪಾರ್ವತಿ ಶಿಲ್ಪಗಳನ್ನು ಪ್ರತಿಷ್ಠಾಪಿಸಲಾಗಿದೆ.

ಸಂಖ್ಯೆ–೮

ಹೆಸರು : ವೀರಭದ್ರ ದೇವಾಲಯ

ಪಟ್ಟಣ : ಆರಗ

ದಿಕ್ಕು : ದಕ್ಷಿಣಾಭಿಮುಖ

ಕಾಲ : ವಿಜಯನಗರ

ಆರಗ ಪಟ್ಟಣದಲ್ಲಿ ಕಂಡುಬರುವ ದಕ್ಷಿಣಾಭಿಮುಖವಾಗಿರುವ ಈ ದೇವಾಲಯವು ತಳವಿನ್ಯಾಸದಲ್ಲಿ ಚೌಕಾಕಾರದ ಗರ್ಭಗೃಹ, ಮುಖಮಂಟಪವನ್ನು ಒಳಗೊಂಡಿದೆ. ಚೌಕಾಕಾರದ ಗರ್ಭಗೃಹದಲ್ಲಿ ಸ್ಥಾನಿಕ ಭಂಗಿಯಲ್ಲಿರುವ ವೀರಭದ್ರನ ಶಿಲ್ಪವಿದೆ. ಲಲಾಟವು ಸರಳವಾಗಿದ್ದು, ಗಜಲಕ್ಷ್ಮಿ ಶಿಲ್ಪವನ್ನು ಹೊಂದಿದೆ. ದ್ವಾರಬಂಧದಲ್ಲಿ ನಾಲ್ಕು ಶಾಖೆಗಳಿಂದ ವಜ್ರ, ಲತಾ, ಅರೆಗಂಬಗಳಿಂದ ಅಲಂಕೃತಗೊಂಡಿದೆ. ದೇವಾಲಯದ ಎದುರಿಗೆ ೨೦ ಅಡಿ ಎತ್ತರದ ಗರುಡ ಸ್ತಂಭವಿದ್ದು, ಅದರ ಮೇಲೆ ನಂದಿಯನ್ನು ಪ್ರತಿಷ್ಠಾಪಿಸಲಾಗಿದೆ.

೪.೩. ಮೂರ್ತಿಶಿಲ್ಪಗಳು

ಭಾರತದಲ್ಲಿ ದೇವತಾರಾಧನೆ ಹಾಗೂ ವ್ಯವಸ್ಥಿತ ದೇವಾಲಯಗಳ ನಿರ್ಮಾಣ ಎಂದು ಆರಂಭವಾಯಿತೊ ಅಂದಿನಿಂದಲೂ ದೇವತಾ ಮೂರ್ತಿಗಳ (ಶಿಲ್ಪಗಳು) ಪ್ರತಿಷ್ಠಾಪನೆ ಮತ್ತು ಆರಾಧನೆ ನಡೆದೇ ಇದೆ. ಯಾವುದೇ ಪಂಥದ ದೇವಾಲಯವಾಗಲಿ ಆ ದೇವಾಲಯಕ್ಕೊಂದು ದೇವತಾ ಮೂರ್ತಿ ಇದ್ದೇ ಇರುತ್ತದೆ. ಈ ರೀತಿ ಮೂರ್ತಿಗಳನ್ನು ಕುರಿತು ಶಾಸ್ತ್ರೀಯವಾಗಿ ಅಧ್ಯಯನ ಮಾಡುವ ಶಾಸ್ತ್ರವನ್ನು ನಾವು ಸ್ಥೂಲವಾಗಿ ಮೂರ್ತಿಶಾಸ್ತ್ರ ಎನ್ನುತ್ತೇವೆ.

ಶಿಲ್ಪ ಎನ್ನುವ ಮಾತು ಮೊದಲು ಬಹಳ ವ್ಯಾಪಕವಾದ ಅರ್ಥವನ್ನು ಪಡೆದಿತ್ತು. ಪ್ರಸಿದ್ಧವಾದ ಅರವತ್ನಾಲ್ಕು ಕಲೆಗಳಿಗೆಲ್ಲಾ 'ಶಿಲ್ಪ' ಎನ್ನುವ ಹೆಸರೇ ಅನ್ವಯವಾಗುತ್ತಿತ್ತು. ಮುಂದೆ ಈ ಪದದ ವ್ಯಾಪ್ತಿ ಪರಿಮಿತಿಗೊಂಡು ಶಿಲ್ಪ ಎಂದೆ ಮೂರ್ತಿಗಳ ನಿರ್ಮಾಣ ಎಂಬ ಅರ್ಥಕ್ಕೆ ಸೀಮಿತವಾಯಿತು.[೩೦] ಜಗತ್ ಸೃಷ್ಟಿಯು ಯಾವಾಗ ಮೊದಲಾಯಿತೋ ಆಗಲೇ ಶಿಲ್ಪವು ಪ್ರಾರಂಭವಾಗಿದೆ ಎಂದು ವೇದವು ಹೇಳಿದೆ ಜಗತ್ ಸೃಷ್ಟಿಯನ್ನು ಜಗತ್ ಶಿಲ್ಪ ಎಂದು ವರ್ಣಿಸಲಾಯಿತು.[೩೧] ಶಿಲ್ಪ ಎಂಬ ಪದವು "ಶೀಲ ಸಮುದೌ" ಎಂಬ ಧಾತುವಿನಿಂದ ಉತ್ಪನ್ನವಾಗಿದೆ. ಸಮಾಧಿ ಎಂಬ ಅರ್ಥವುಳ್ಳ ಶೀಲ್ ಎಂಬ ಧಾತುವು ತಪ್ಪಸ್ಸನ್ನು ಸೂಚಿಸುತ್ತದೆ. "ಶೀಲ ಸಮುಧೌ ಶೀಲ್ಯತೆ ಇತಿ ಶಿಲ್ಪ" ಮನಸ್ಸು ಸಮಾಧಿ ಸ್ಥಿತಿಯಲ್ಲಿದ್ದಾಗ ರೂಪಿತವಾಗುವ ಕರಕುಶಲ ವಸ್ತುವೇ ಶಿಲ್ಪ ಎಂದು ಹೇಳಿರುವುದು ಶಿಲ್ಪ ಶಬ್ದದ ವ್ಯಾಪಕ ಅರ್ಥ ವಿಸ್ತಾರವನ್ನು ಈ ಹಂತದಲ್ಲಿ ಕಾಣಬಹುದು.[೩೨]

ಶಿಲ್ಪ ಕರ್ಮಕಲಾಧಿಕಂ ಎನ್ನುವುದು ಅಮರಸಿಂಹನ ಅಮರಕೋಶದ ವಿವರಣೆಯಾಗಿದೆ. ಕರ್ತೃವಿನ ಅಧಿಕ ಕೌಶಲ್ಯವನ್ನು ಒಳಗೊಂಡ ಕರ್ಮ ಅಥವಾ ಕ್ರಿಯೆಗೆ ಶಿಲ್ಪವೆಂದು ಹೆಸರು ಭಾರತೀಯ ವಾಸ್ತು, ಮೂರ್ತಿ, ಚಿತ್ರಕಲೆಗೆ ಸಂಬಂಧಿಸಿದಂತೆ ಅಧ್ಯಯನವನ್ನು ಶಿಲ್ಪಶಾಸ್ತ್ರವೆಂದೂ ಗುರುತಿಸಲಾಗುತ್ತದೆ. ಕೆಲವೊಮ್ಮೆ ಶಿಲ್ಪಶಾಸ್ತ್ರವೆಂದಲ್ಲಿ ಮೂರ್ತಿ ಅಥವಾ ಪ್ರತಿಮಾ ರಚನೆ, ಅವುಗಳ ಲಕ್ಷಣ ವಿವರಿಸಲಾಗುತ್ತದೆ. ಮೂರ್ತಿ ಎಂಬ ಪದವು ಅದಕ್ಕೆ ಪರ್ಯಾಯವಾಗಿ ಬಳಸಿದ ಪದಗಳಾದ ಪ್ರತಿಮಾ, ಬಿಂಬ, ಪ್ರತಿಕೃತಿ, ವಿಗ್ರಹ ಮುಂತಾದ ಶಬ್ದಗಳು ಅದೊಂದು ಭೌತಿಕ ವಸ್ತು ಎಂಬಂತೆ ಅರ್ಥಕೊಡುತ್ತದೆ.[೩೩] ಈ ರೀತಿಯ ಮೂರ್ತಿಶಿಲ್ಪವನ್ನು ಕುರಿತು ಶಾಸ್ತ್ರೀಯವಾಗಿ ಅಧ್ಯಯನ ಮಾಡುವುದಕ್ಕೆ ಮೂರ್ತಿಶಾಸ್ತ್ರ ಅಥವಾ ಪ್ರತಿಮಾಶಾಸ್ತ್ರವೆಂದೂ ಕರೆಯಲಾಗುತ್ತದೆ.

ಮೂರ್ತಿಶಿಲ್ಪವನ್ನು ಶಾಸ್ತ್ರೀಯವಾಗಿ ಹೇಳುವ ಶಿಲ್ಪ ಶಾಸ್ತ್ರವನ್ನೇ ಕಾಣಬಹುದು. ಅವುಗಳಲ್ಲಿ ಕಾಶ್ಯಪಶಿಲ್ಪ, ಮಾನಸಾರ, ಸಮರಾಂಗಣ ಸೂತ್ರಧಾರ, ಶಿಲ್ಪರತ್ನಂ ಮಯಮತಂ ಮಾಯಾವಾಸ್ತುಶಾಸ್ತ್ರ, ವಿಶ್ವಕರ್ಮವಾಸ್ತುಶಾಸ್ತ್ರ, ಸಕಲಾಧಿಕಾರ, ಕಾಶ್ಯಪ ಸಂಹಿತೆ, ದೇವತಾ ಮೂರ್ತಿಲಕ್ಷಣ, ಪ್ರಸಾದ ಮಂಡನ ರಾಜವಲ್ಲಭದಂತಹ ಇಪ್ಪತ್ತು ಗ್ರಂಥಗಳು ಅತೀಪ್ರಮುಖವಾಗಿದೆ.[೩೪]

ಮೂರ್ತಿಶಿಲ್ಪದ ಕಲ್ಪನೆಗಳು ಭಾರತದಲ್ಲಿ ಮೊಹೆಂಜೋದಾರೋದಲ್ಲಿ ದೊರೆತ ಪ್ರಾಣಿಗಳ ಶಿಲ್ಪಗಳು ಹಾಗೂ ನರ್ತನ ಶಿಲ್ಪಗಳು, ಮುದ್ರೆಯ ಮೇಲೆ ದೊರೆತ ವಿಗ್ರಹಗಳಲ್ಲಿ ಮುಖ್ಯವಾಗಿ ಪಶುಪತಿ ಶಿವನೆಂದೂ ಗುರುತಿಸಲಾಗಿದೆ. ಧ್ಯಾನಸ್ಥೆಯ ಮೂರ್ತಿಗಳು ಸಿಂಧೂ ನಾಗರಿಕತೆಯಲ್ಲಿ ದೊರೆಯುವ ಪ್ರಮುಖ ಮೂರ್ತಿಶಿಲ್ಪಗಳಾಗಿವೆ. ವೇದಗಳ ಕಾಲದಲ್ಲಿ ವಿಗ್ರಹಗಳಿಗೆ ಪ್ರಾಧಾನ್ಯತೆ ಇರಲಿಲ್ಲಾ. ಪ್ರಕೃತಿ ಶಕ್ತಿಗಳನ್ನು ಆರಾಧಿಸುತ್ತಿದ್ದರು ಎಂದು ಹೇಳಲಾಗುತ್ತದೆ. ಆದರೂ ಇಂದ್ರ-ವರುಣ, ರುದ್ರ, ಮೊದಲಾದ ದೇವತೆಗಳಿಗೆ ಮನುಷ್ಯಾಕಾರದ ಕಲ್ಪನೆ ಕೊಟ್ಟಿರುವುದು ಕಂಡುಬರುತ್ತದೆ.[೩೫]

ಚಾರಿತ್ರಿಕ ಯುಗಕ್ಕೆ ಬಂದರೆ ಅತ್ಯಂತ ಪ್ರಾಚೀನವಾದ ಶಿಲ್ಪಕೃತಿಗಳು ಮೌರ್ಯರ ಕಾಲದವು ಕಲ್ಲಿನ ಸ್ತಂಭಗಳು ಮೇಲಿನ ವೃಷಭ, ಆನೆ, ಸಿಂಹ, ಕುದುರೆ, ಮೊದಲಾದ ಆಕೃತಿಗಳು ಪ್ರಮುಖವಾದರೆ, ಮೌರ್ಯರ ಶಕ್ತಿ ಇಳಿಮುಖವಾಗುತ್ತಿದ್ದಂತೆ ಶೃಂಗರು, ಕುಶಾನರು, ಶಿಲ್ಪಕಲೆಗೆ ಆಶ್ರಯವನ್ನು ಕೊಟ್ಟರು ಗುಪ್ತರ ಕಾಲದಿಂದಲೂ ಶಿಲ್ಪ ಸಾಹಿತ್ಯ, ವಿಜ್ಞಾನ, ಇವೆಲ್ಲವುಗಳ ದೃಷ್ಟಿಯಿಂದ ಸುವರ್ಣಯುಗ ಎನ್ನಬಹುದು.[೩೬]

ಕರ್ನಾಟಕ ಚಾರಿತ್ರಿಕ ಕಾಲದಲ್ಲಿ ಮೂರ್ತಿಶಿಲ್ಪದ ಬೆಳವಣಿಗೆಯನ್ನು ಗುರುತಿಸುವಾಗ ಶಾತವಾಹನರು ಕದಂಬರು, ಗಂಗರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಹೊಯ್ಸಳರು ವಿಜಯನಗರದ ಅರಸರು ಮೂರ್ತಿ ಶಿಲ್ಪದ ಬೆಳವಣಿಗೆಗೆ ವಿಶೇಷ ಪ್ರೋತ್ಸಾಹ ನೀಡಿದರು ಪ್ರಸ್ತುತ ಅಧ್ಯಾಯದಲ್ಲಿ ತೀರ್ಥಹಳ್ಳಿ ಪರಿಸರದ ಪ್ರಾಚೀನ ದೇವಾಲಯಗಳ ವಿವಿಧ ಕಾಲಘಟ್ಟದಲ್ಲಿ ನಿರ್ಮಿಸಲಾದ ಮೂರ್ತಿಶಿಲ್ಪಗಳನ್ನು ಅಧ್ಯಯನ ಮಾಡಲಾಗಿದೆ.

೪.೩.೧. ಶೈವಶಿಲ್ಪಗಳು

ಭಾರತೀಯ ಇತಿಹಾಸದಲ್ಲಿ ಶೈವ ಧರ್ಮಕ್ಕೆ ಅತ್ಯಂತ ಪ್ರಾಚೀನ ಇತಿಹಾಸವಿದೆ. ಹರಪ್ಪ ಸಂಸ್ಕೃತಿಯ ನೆಲೆಗಳಾದ ಹರಪ್ಪ, ಮೊಹಂಜೋದಾರೋ ಮತ್ತು ಕಾಲಿಬಂಗನ್ ಇತ್ಯಾದಿ ನೆಲೆಗಳಲ್ಲಿ ಅನೇಕ ಮುದ್ರೆಗಳು ದೊರೆತಿದ್ದು, ಅವುಗಳ ಮೇಲೆ ಪುರುಷ ದೇವತೆಗಳ ಚಿತ್ರಗಳಿವೆ ಇವುಗಳಲ್ಲಿ ಯೋಗಮುದ್ರೆಯಲ್ಲಿ ಆಸೀನವಾಗಿರುವ ಮೂರು ಮುಖದ ಪಶುಪತಿ ಶಿವನ ಚಿತ್ರ ಪ್ರಮುಖವಾದದು. ಬಹುಶಃ ಈ ಚಿತ್ರದ ಆಧಾರದಿಂದ ಅಂದರೆ ಕ್ರಿಪೂ.೨೫೦೦ಕ್ಕೂ ಪೂರ್ವದಲ್ಲೇ ಶಿವಾರಾಧನೆ ಪ್ರಚಲಿತದಲ್ಲಿತ್ತೆಂದೂ ಹೇಳಬಹುದು. ನಂತರದ ವೈದಿಕ ಸಾಹಿತ್ಯದಲ್ಲಿ ಶಿವನ ಹಿನ್ನಲೆಯಲ್ಲಿ ರುದ್ರನನ್ನು ಕಾಣಬಹುದು. ಋಗ್ವೇದದ ಆರಂಭದ ಮಂಡಲಗಳಲ್ಲಿಯೇ ರುದ್ರನನ್ನು ಕುರಿತ ಉಲ್ಲೇಖಗಳಿವೆ. ಪ್ರಕೃತಿಯ ವಿನಾಶಕ ಭಯಾನಕ ಮೂರ್ತಿರೂಪ, ರುದ್ರ ಎನ್ನುವ ಕಲ್ಪನೆ ಇದ್ದಂತೆ ತೋರುತ್ತದೆ. ಹೀಗೆ ವೈದಿಕ ಕಾಲದಿಂದಲೂ ಬೆಳೆದುಬಂದ ರುದ್ರ ಶಿವನ ಪರಿಕಲ್ಪನೆ ಕ್ರಮೇಣ ಜನ ಸಾಮಾನ್ಯರ ಧಾರ್ಮಿಕ ಭಾವನೆಗಳು ಮತ್ತು ಆರಾಧನೆಗಳೊಡನೆ ಸೇರಿ ಶೈವ ಧರ್ಮ ಬೆಳವಣಿಗೆಗೆ ಕಾರಣವಾಯಿತು. ಶಿವನ ಇಪ್ಪತ್ನಾಲ್ಕನೇ ಅವತಾರವೆಂದು ಹೇಳಲಾದ ಲಕುಲೀಶನಿಂದ ಪಾಶುಪತ ಮತ ಪ್ರಾರಂಭವಾಯಿತು. ಆತನ ನಾಲ್ಕು ಜನ

ಶಿಷ್ಯರಾದ ಕುಶಿಕ, ಗಾರ್ಗ, ಮೈತ್ರೇಯ ಮತ್ತು ಕೌರುಶ ಇವರಿಂದ ನಾಲ್ಕು ಪ್ರತ್ಯೇಕ ಪಾಶುಪತಗಳುಂಟಾದವು.[೩೭] ಪಾಶುಪತದಿಂದ ಲಕುಲೀಶ, ಪಾಶುಪತ, ಕಾಳಾಮುಖ ಮತ್ತು ಕಾಪಾಲಿಕ ಶೈವ ಪಂಥಗಳು ಬೆಳೆದವು.

*** ಗಣಪತಿ ಮೂರ್ತಿ**

ಚತುರ್ಭುಜಧಾರಿಯಾದ ಈ ಮೂರ್ತಿಯು ಕರಂಡ ಮುಕುಟ ಧಾರಿಯಾಗಿದ್ದು ಸುಖಸನದಲ್ಲಿ ಪೀಠದ ಮೇಲೆ ಕುಳಿತಿದೆ ಅಗಲವಾದ ಕಿವಿ, ಉದರ ಹಾಗೂ ಯಜ್ಞೋಪವೀತಗಳಿಗೆ ಮೇಲಿನ ಕೈಯಲ್ಲಿ ಅಂಕುಶ ಪಾಶ ಕೆಳಗಿನ ಬಲಗೈಯಲ್ಲಿ ಮೋದಕ ಪಾತ್ರೆ ಇರುವುದು ಈ ಗಣಪತಿಯು ವಿಶೇಷವಾಗಿದೆ. ಎಡಗೈಯಲ್ಲಿ ಇರುವ ಮೋದಕ ಪಾತ್ರೆಯಲ್ಲಿನ ಸಿಹಿಯನ್ನು ತಿನ್ನುವಂತೆ ತೋರಿದೆ.

*** ವೀರಭದ್ರ ಮೂರ್ತಿ ಶಿಲ್ಪ**

ವೀರಭದ್ರ ಇದು ಶಿವನ ಒಂದು ರೂಪವಾಗಿದೆ. ದಕ್ಷನು ಯಜ್ಞವನ್ನು ಮಾಡಲು ನಿರ್ಧರಿಸಿ ತನ್ನ ಮಗಳು ದಾಕ್ಷಾಯಿಣಿ ಮತ್ತು ಅಳಿಯ ಶಿವನನ್ನು ಮಾತ್ರ ಕರೆಯದೇ ಉಳಿದ ಎಲ್ಲರನ್ನು ಕರೆದನು. ಆದರೂ ದಾಕ್ಷಾಯಿಣಿ ಯಜ್ಞಮಂಟಪಕ್ಕೆ ಹೋದಳು. ಅಲ್ಲಿ ಅವಳ ತಂದೆ ಅವಳನ್ನು ಅಪಮಾನಗೊಳಿಸಿದ್ದಕ್ಕಾಗಿ ಆಕೆ ಯಜ್ಞಕುಂಡಲದಲ್ಲಿ ಬಿದ್ದು ಪ್ರಾಣಬಿಟ್ಟಳು. ಇದರಿಂದ ಸಿಟ್ಟಿಗೆದ್ದ ಶಿವನು ತನ್ನ ಜಟೆಯನ್ನು ನೆಲಕ್ಕಪ್ಪಳಿಸಲು ವೀರಭದ್ರ ಹುಟ್ಟಿಕೊಂಡನು ದಕ್ಷನ ತಲೆಯನ್ನು ಕಡಿದು ಅವನ ಮಾವನನ್ನು ಧ್ವಂಸ ಮಾಡಿದನೆಂದು ಕೂರ್ಮಪುರಾಣ ತಿಳಿಸುತ್ತದೆ.

ಪೀಠದ ಮೇಲೆ ಸ್ಥಾನಿಕವಾಗಿರುವ ಈ ಮೂರ್ತಿಯು ಕಿರೀಟ ಧಾರಿಯಾಗಿದ್ದು ಚತುರ್ಭುಜಧಾರಿಯಾಗಿದೆ. ಕಂಠಹಾರ, ವೃತ್ತಾಕಾರದ ಕಿವಿಯೋಲೆ ಯಜ್ಞೋಪವಿತ, ಪಾದದವರೆಗೆ ಇಳಿಬಿದ್ದ ಹಾರ ಕಟಿಬಂಧವನ್ನು ಈ ಮೂರ್ತಿ ಧರಿಸಿದ್ದು ತ್ರಿಶೂಲ, ಬಿಲ್ಲು, ಖಡ್ಗವನ್ನು ಕ್ರಮವಾಗಿ ಬಲ ಮತ್ತು ಕೆಳಗಿನ ಎಡಗೈಯಲ್ಲಿ ಹಿಡಿದಿದೆ. ಕೈ ಮತ್ತು ಕಾಲ್ಕಡಗದಿಂದ ಅಲಂಕೃತವಾದ ಈ ಮೂರ್ತಿಯ ಹಿಂಭಾಗದಲ್ಲಿ ಸರ್ವತೋರಣ ಮತ್ತು ಪ್ರಭಾವಳಿ ಇದೆ.

*** ಲಿಂಗಮೂರ್ತಿ**

ಈ ಮೂರ್ತಿಯು ಮೃಗವಧೆ ಮಲ್ಲಿಕಾರ್ಜುನ ದೇವಾಲಯದಲ್ಲಿರುವ ಗರ್ಭಗೃಹದಲಿಂಗ, ಲಿಂಗವು ಸುಮಾರು ೪೧/೨ ಅಡಿ ಎತ್ತರವಿರುವ ೧೧/೨ಚೌಕಟ್ಟಿದ್ದು, ಗೋಳಾಕಾರವಾಗಿರವಾಗಿರುವ ಕಪ್ಪು ಶಿಲೆಯಿಂದ ನಿರ್ಮಾಣವಾಗಿದೆ. ಇದು ಮೂರು ಹಂತದಲ್ಲಿದ್ದು ಪೀಠ, ಪಾಣಿಬಟ್ಟಲು, ಶಿರೋ ಭಾಗಗಳನ್ನು ಹೊಂದಿದೆ. ಪೀಠದಲ್ಲಿ ಉಪಾನ, ಜಗತಿ, ಪದ್ಮ, ತ್ರಿಪಟ್ಟಿ, ಗಮನ ಸೆಳೆಯುತ್ತದೆ.

*** ನಂದಿ**

ಶಿಲ್ಪವು ಕುಳಿತಿದ್ದು ಬಲಭಾಗಕ್ಕೆ ಮುಖವನ್ನು ಮಾಡಿದ್ದನ್ನು ನೋಡಬಹುದು ಇದು ೩ ಅಡಿ ಎತ್ತರ ಸುಮಾರು ೪ ಅಡಿ ಅಗಲವಿದೆ. ನಂದಿಯನ್ನು ದಷ್ಟಪುಷ್ಟವಾಗಿ ಗುರುತಿಸಿದ್ದು ಈಶ್ವರನ ವಾಹನವಾಗಿದೆ. ನಂದಿಯು ಕೊರಳಿನಲ್ಲಿ ಕಂಠಹಾರ, ಘಂಟೆಸರ, ಕಂಡುಬರುತ್ತದೆ.

* ಶೈವ ದ್ವಾರಪಾಲಕರು

ಮಲ್ಲಿಕಾರ್ಜುನ ದೇವಾಲಯದ ನವರಂಗದ ಬಾಗಿಲುವಾಡದಲ್ಲಿ ಎರಡು ಶೈವ ದ್ವಾರಪಾಲಕರ ಶಿಲ್ಪಗಳನ್ನು ಕಾಣಬಹುದು ಇವು ಸುಂದರವಾಗಿದ್ದು ಸ್ಪಷ್ಟವಾಗಿ ಗೋಚರಿಸುತ್ತವೆ. ಈ ದ್ವಾರಪಾಲಕರನ್ನು ಜಯ ವಿಜಯ ಎಂದು ಗುರುತಿಸುತ್ತವೆ. ಈ ಎರಡು ಶಿಲ್ಪಗಳು ಒಂದೇ ರೀತಿಯಾಗಿ ಕಂಡು ಬರುತ್ತದೆ ಈ ಶಿಲ್ಪಗಳು ದ್ವಿಭಂಗಿಯಲ್ಲಿದ್ದು ಸುಮಾರು ೪ ಅಡಿ ಎತ್ತರವನ್ನು ಹೊಂದಿದೆ ಚತುರ್ಭುಜಧಾರಿಯಾದ ಶಿಲ್ಪಗಳು ಕೈಯಲ್ಲಿ ತ್ರಿಶೂಲ, ಡಮರುಗ, ಗದೆಯನ್ನು ಹಿಡಿದು ಕಿರೀಟಧಾರಿಯಾಗಿದ್ದಾರೆ. ಶಿಲ್ಪವು ಕೀರ್ತಿಮುಖವನ್ನು ಹೊಂದಿದೆ. ಪಕ್ಕದಲ್ಲಿ ಎರಡು ಹಂಸಗಳನ್ನು ಚಿತ್ರಿಸಿದ್ದು ಮೇಲ್ಭಾಗದಲ್ಲಿ ಕಳಸವನ್ನು ಚಿತ್ರಿಸಿರುವುದು ಕಾಣಬಹುದು. ಶಿಲ್ಪಗಳು ತೋಳುಬಂದಿ, ಕಂಠಹಾರ, ಡಾಬು, ಕೊರಳಸರ, ಕಾಲ್ಗಡಗ ಇತ್ಯಾದಿ ಆಭರಣಗಳನ್ನು ಧರಿಸಿವೆ. ಶಿಲ್ಪದ ಕೆಳಭಾಗದಲ್ಲಿ ಗದೆಯ ಪಕ್ಕದಲ್ಲಿ ಕೋತಿಯು ಹಣ್ಣನ್ನು ತಿನ್ನುತ್ತಿರುವ ದೃಶ್ಯ ಕಾಣಬಹುದು.

* ಕಾರ್ತಿಕೇಯ

ಶೈವ ಪಂಥಕ್ಕೆ ಸೇರಿದ ಶಿಲ್ಪವಾಗಿದ್ದು ಈ ಶಿಲ್ಪವು ಸುಮಾರು ೧/೨ ಅಡಿ ಎತ್ತರವಾಗಿದ್ದು ೧ ಅಡಿ ಅಗಲವಾಗಿದೆ. ಈ ಶಿಲ್ಪವು ನವಿಲಿನ ಮೇಲೆ ಕುಳಿತಿದೆ ಹಾಗಾಗಿ ಇವನ ವಾಹನ ನವಿಲು ಇದನ್ನು ಸುಬ್ರಹ್ಮಣ್ಯ ಶಿಲ್ಪ ಎನ್ನಲಾಗಿದೆ. ಘಂಟೆ, ವೈಜಯಂತಿ, ಪತಾಕೆ, ಶಕ್ತಿ ಆಯುಧಗಳನ್ನು ಹಿಡಿದುಕೊಂಡಿರುವುದು ಕಂಡುಬರುತ್ತದೆ. ಪುರಾಣದ ಪ್ರಕಾರ ಸುಬ್ರಹ್ಮಣ್ಯ ಶಿವನ ಮಗನ ಮಗನ ಮಗನಾಗಿದ್ದಾನೆ. ಇವನಿಗೆ ಷಣ್ಮುಖ, ಮಣಿಸೇನ, ಬಾಲಸ್ವಾಮಿ ಮೊದಲಾದ ಹೆಸರುಗಳಿವೆ.

* ಭೈರವ

ಈ ಶಿಲ್ಪವು ಮಲ್ಲಿಕಾರ್ಜುನ ಮೇಲ್ಭಾಗದಲ್ಲಿ ಶಿಖರದಲ್ಲಿ ಕಂಡುಬರುತ್ತದೆ. ಈ ಶಿಲ್ಪವನ್ನು ಬಿಳಿ ಶಿಲೆಯಿಂದ ಕೆತ್ತನೆ ಮಾಡಲಾಗಿದೆ. ಚತುರ್ಭುಜ ಹೊಂದಿದ್ದು ತ್ರಿಶೂಲ, ಢಮರು, ಕುಂಡವನ್ನು ಹಿಡಿದಿರುತ್ತಾನೆ. ಕೋರೆ ಹಲ್ಲನ್ನು ಹೊಂದಿದವನು ತಲೆಕೂದಲು ನೆಟ್ಟಗಿರುತ್ತದೆ. ಕೊರಳಿನಲ್ಲಿ ರುಂಡಮಾಲೆ ಧರಿಸಿದ್ದಾನೆ.

೪.೩.೨. ವೈಷ್ಣವ ಶಿಲ್ಪಗಳು

ಭಾರತೀಯರ ಪ್ರಾಚೀನ ಧರ್ಮಗಳಲ್ಲಿ ವೈಷ್ಣವ ಧರ್ಮವು ಒಂದು. ಇದರ ಪ್ರಾರಂಭದ ಉಲ್ಲೇಖಗಳನ್ನು ವೈದಿಕ ಸಾಹಿತ್ಯದಲ್ಲಿ ನೋಡಬಹುದು. ನಂತರ ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಸಾಂಬ ಮತ್ತು ಅನಿರುದ್ದರೆನ್ನುವ ಪಂಚವೀರರು ಇದರ ಅನುಯಾಯಿಗಳಾಗಿದ್ದರಿಂದ ಇವರ ಆರಾಧನೆಯನ್ನು ವೀರವಾದ ಎಂದು ಕರೆಯಲಾಗುತ್ತದೆ.[೩೮]

ಈ ವಾದದ ಪ್ರಕಾರ ವಾಸುದೇವನೇ ಶ್ರೇಷ್ಠ, ಸಂಕರ್ಷಣ, ಪ್ರದ್ಯಮ್ನ, ಮತ್ತು ಅನಿರುದ್ದರು ಒಬ್ಬರಾದ ನಂತರ ಮತ್ತೊಬ್ಬರು ವಾಸುದೇವನಿಂದ ಅವಿರ್ಭವಿಸಿದವರು. ಸುಮಾರು ಕ್ರಿ.ಪೂ.೪ನೇ

ಶತಮಾನದ ವೇಳೆಗೆ ಮಥುರಾ ಪ್ರದೇಶದ ಜನರು ವಾಸುದೇವ ಅಥವಾ ಶ್ರೀಕೃಷ್ಣನ ಪೂಜೆಯನ್ನು ಮಾಡುತ್ತಿದ್ದರೆಂದು ಗ್ರೀಕ್ ರಾಯಭಾರಿ ಮೇಗಸ್ತಾನಿಸ್ ಮತ್ತು ಪಾಣಿನಿಯರು ಅಭಿಪ್ರಾಯಪಟ್ಟಿದ್ದಾರೆ. ಕ್ರಿ.ಪೂ.ಸುಮಾರು ೩ನೇ ಶತಮಾನದ ಬೆಸ್‌ನಗರದ ಶಾಸನದಲ್ಲಿ ಗ್ರೀಕ್ ರಾಯಭಾರಿ ಎಲೆಯೋಡೊರಸ್ ಭಾಗವತನಾಗಿದ್ದು. ಗರುಡ ಧ್ವಜವನ್ನು ನಿರ್ಮಿಸಿ ದೇವ ದೇವನಾದ ವಾಸುದೇವನನ್ನು ಪೂಜಿಸುವ ಪರಮ ಭಾಗವತ ನಾನು ಎಂದು ತನ್ನನ್ನು ಕರೆದುಕೊಂಡಿದ್ದಾನೆ. ತ್ರಿಮೂರ್ತಿಗಳಲ್ಲಿ ಒಬ್ಬನಾದ ವಿಷ್ಣು, ವೈಷ್ಣವ ಧರ್ಮದ ಪ್ರಮುಖ ದೇವರಾಗಿದ್ದಾನೆ ವಿಷ್ಣುವಿನ ಅವತಾರಗಳು ಹತ್ತು ಎಂದು ಶತಪಥ ಬ್ರಾಹ್ಮಣದಲ್ಲಿ ಉಲ್ಲೇಖವಿದೆ. ಆದರೆ ಕೆಲವೊಂದು ಸಲ ಇಪ್ಪತ್ತೆರಡು ಅದಕ್ಕಿಂತಲೂ ಹೆಚ್ಚಿಗೆ ಹೇಳುವುದುಂಟು.[೩೯] ಬೇರೆ ಬೇರೆ ಕೃತಿಗಳು ಬೇರೆ ಬೇರೆ ಅವತಾರಗಳನ್ನು ಹೇಳುತ್ತವೆ. ಆದರೆ ಸಾಮಾನ್ಯವಾಗಿ ಹತ್ತು ಅವತಾರಗಳು ಅವು ಕೂರ್ಮ, ವರಾಹ, ನರಸಿಂಹ, ವಾಮನ, ಪರಶುರಾಮ, ರಾಮ, ಕೃಷ್ಣ, ಬುದ್ಧ, ಮತ್ತು ಕಲ್ಕಿ ತೀರ್ಥಹಳ್ಳಿ ಪರಿಸರದಲ್ಲಿ ಸಾಕಷ್ಟು ವೈಷ್ಣವ ಶಿಲ್ಪಗಳಿವೆ.

೧. ಸ್ಥಾನಿಕ ಮೂರ್ತಿ : ಸಮಸ್ಥಾನದಲ್ಲಿ ನಿಂತಿರುವ ವಿಷ್ಣುವಿನ ವಿವಿಧ ರೂಪಗಳು ಸ್ಥಾನಿಕ ಮೂರ್ತಿಗಳಾಗಿದೆ.

೨. ಆಸನ ಮೂರ್ತಿ : ಪೀಠದ ಮೇಲೆ ಪದ್ಮಾಸನ ಅಥವಾ ಅರ್ಧಪರ್ಯಂಕಾಸದಲ್ಲಿ ಕುಳಿತಿರುವ ವಿಷ್ಣುವಿನ ವಿವಿಧ ರೂಪಗಳ ಶಿಲ್ಪಗಳೇ ಆಸನ ಮೂರ್ತಿಗಳು.

೩. ಶಯನ ಮೂರ್ತಿ : ವಿಷ್ಣುವಿನ ಅನಂತಶಯನ ರೂಪದಲ್ಲಿ ಐದು, ಏಳು ಹೆಡೆಗಳ ನಾಗಸರ್ಪದ ಮೇಲೆ ಪವಡಿಸಿರುವಂತೆ ಈ ಶಿಲ್ಪದ ನಿರ್ಮಾಣವಿರುತ್ತದೆ.

೪. ಅವತಾರ ಮೂರ್ತಿ : ವಿಷ್ಣುವಿನ ದಶವತಾರಕ್ಕೆ ಸಂಬಂಧಿಸಿದಂತೆ ವಿಭಿನ್ನ ಮೂರ್ತಿಗಳಿದ್ದು ಇವು ವಿಷ್ಣುವಿನ ದಶವತಾರದ ಶಿಲ್ಪಗಳನ್ನು ಪ್ರತಿನಿಧಿಸುತ್ತವೆ. ಹಾಗೆಯೇ ಕೆಲವೊಮ್ಮೆ ಗರ್ಭಗೃಹ, ಅಂತರಾಳ, ತೋರಣದಲ್ಲಿ ನವರಂಗದ ಕಂಬಗಳಲ್ಲಿ ದಶಾವತಾರದ ಶಿಲ್ಪಗಳು ಕಂಡುಬರುತ್ತವೆ.[೪೦]

೧. ವೇಣುಗೋಪಾಲ ಮೂರ್ತಿ

ಪೀಠದ ಮೇಲೆ ಸ್ಥಾನಿಕವಾಗಿದ್ದು ಎರಡು ಕೈಗಳನ್ನು ಹೊಂದಿದ್ದು ಕಿರೀಟ ಮುಕುಟಧಾರಿಯಾಗಿದೆ. ಕಿವಿಯಲ್ಲಿ ಕುಂಡಲಗಳಿದ್ದು ಕೈಯಲ್ಲಿ ಕೊಳಲನ್ನು ಹಿಡಿದು ನುಡಿಸುವಂತಿದೆ. ಕೈಯಲ್ಲಿ ಕೈ ಕಡಗ ಕೊರಳಲ್ಲಿ ವಿವಿಧ ಬಗೆಯ ಹಾರಗಳಿವೆ. ನಡುವಿನಲ್ಲಿ ನಡುಬಂಧವಿದೆ ಮಣಿಸರಗಳಿಂದ ಅಲಂಕೃತಗೊಳಿಸಿರುವ ದೋತಿಯೂ ಇದೆ. ಕಾಲಿನಲ್ಲಿ ಕಾಲ್ಗಡಗ ಧರಿಸಿದ್ದು ಕಾಲಿನ ಬಳಿ ಚಾಮರ ಧಾರಿಣಿಯಿದ್ದು ಸುತ್ತಲೂ ಅಲಂಕಾರದ ಪ್ರಭಾವಳಿ ಇದೆ. ಮೂರ್ತಿಯ ಶೈಲಿ ಆಧರಿಸಿ ಕಲ್ಯಾಣ ಚಾಲುಕ್ಯರ ಕಾಲದ್ದೆನ್ನಬಹುದು.

೨. ವಿಠ್ಠಲ ಮೂರ್ತಿ

ಚೌಕಾಕಾರದ ವೇದಿಕೆಯ ಮೇಲೆ ಮೂರ್ತಿಯು ಇದ್ದು, ಎರಡು ಕೈಗಳನ್ನು ಸೊಂಟದ ಮೇಲೆ ಇಟ್ಟುಕೊಂಡಿದ್ದಾನೆ. ಕಾಲಿನ ಮೇಲಿರುವ ಕಾಲ್ಗಡಗಳು, ಮುಂಗೈ ಕೈಗಡಗಳು, ತೋಳಬಂಧಿಗಳು, ಕರ್ಣಾಭರಣ ಕಿರೀಟ ಇವು ಸುಂದರ ಕುಸುರಿ ಚಿತ್ರಣದಿಂದ ತುಂಬಿವೆ. ಪ್ರಭಾವಳಿಯಲ್ಲಿ ಬಾಯಿಂದ ಹೊರಬಂದ ಬಳ್ಳಿಯ ಚಿತ್ರಣವಿದೆ. ವಿಗ್ರಹದ ಅಕ್ಕಪಕ್ಕದಲ್ಲಿ ಜಯವಿಜಯದ ಶಿಲ್ಪಗಳಿವೆ.

೩. ಗರುಡ

ವೆಂಕಟರಮಣ ದೇವಾಲಯದ ಎದುರಿಗೆ ದೀಪಸ್ತಂಭದ ಮೇಲೆ ಸುಂದರವಾದ ಗರುಡ ಶಿಲ್ಪವಿದೆ. ಕಪ್ಪು ಶಿಲೆಯಲ್ಲಿರುವ ಇದು ಕೈಮುಗಿದು ಕುಳಿತಿದೆ. ಕಲೆಗೆ ಕಿರೀಟ, ಕರ್ಣಕುಂಡಲ, ಕೊರಳ ಹಾರ, ತೋಳಬಂಧಿ ಕೈಬಳೆ ಧರಿಸಿರುವುದು ಬೆನ್ನ ಹಿಂದೆ ಎರಡು ರೆಕ್ಕೆಗಳನ್ನು ಹೊಂದಿದೆ.

೪. ನರಸಿಂಹ ಮೂರ್ತಿ

ನರಸಿಂಹನ ಗುಡಿಯಲ್ಲಿ ನರಸಿಂಹ ವಿಗ್ರಹ ಕಾಣಬಹುದಾಗಿದ್ದು ಸುಮಾರು ೧/೨ಅಡಿ ಎತ್ತರವಿದ್ದು ಚತುರ್ಭುಜಗಳಿಂದ ಕೂಡಿದೆ ಶಂಖ, ಚಕ್ರಾ, ಗದಾ ಮತ್ತು ಅಭಯಹಸ್ತ ಕಾಣಬಹುದು. ಹಿಂದೆ ಪ್ರಭಾವಳಿ ಸುರುಳಿಗಳಿಂದ ಅಲಂಕೃತಗೊಂಡಿವೆ. ಪ್ರಾಣಿ ಪೀಠದ ಮೇಲೆ ಸ್ಥಾನಿಕ ಭಂಗಿಯಲ್ಲಿದ್ದು ಪಾದದ ಎಡ ಬಲಭಾಗದಲ್ಲಿ ಶ್ರೀದೇವಿ ಮತ್ತು ಭೂದೇವಿಯನ್ನು ಕಾಣಬಹುದು ಕಪ್ಪುಶಿಲೆಯಿಂದ ವಿಗ್ರಹ ಕೆತ್ತಲಾಗಿದೆ.

೫. ಆಂಜನೇಯ ಮೂರ್ತಿ

ಆಂಜನೇಯ ರಾಮನ ಸೇವಕನಾಗಿದ್ದು ವೈಷ್ಣವ ದೇವಾಲಯಗಳಲ್ಲಿ ಆಂಜನೇಯ ವಿಗ್ರಹವನ್ನು ಕಾಣಬಹುದು. ಈ ವಿಗ್ರಹ ೫ ಅಡಿ ಎತ್ತರವಾಗಿದ್ದು ತ್ರಿಭಂಗಿಯಲ್ಲಿ ನಿಂತಿದ್ದು, ಬಲಗೈಯನ್ನು, ಮೇಲೆತ್ತಿದ್ದಾನೆ. ಬಾಲವು ಉದ್ದವಾಗಿದ್ದು ಗಂಟೆಯನ್ನು ಸೇರಿಸಲಾಗಿದೆ. ಕಿರೀಟಧಾರಿಯಾದ ಆಂಜನೇಯ ದ್ವಿಭುಜ ಹೊಂದಿದ್ದಾನೆ. ಕಾಲ್ಗಡಗ ಹಾಕಿದ್ದು ದಕ್ಷಿಣದ ಕಡೆ ಮುಖಮಾಡಿದ್ದಾನೆ. ಈ ಶಿಲ್ಪವನ್ನು ಗ್ರಾನೈಟ್ ಶಿಲೆಯಲ್ಲಿ ಕೆತ್ತಲಾಗಿದೆ.

೪.೩.೩. ಶಾಕ್ತ ಮೂರ್ತಿಗಳು

ವಿವಿಧ ಸಂಸ್ಕೃತಿಯನ್ನು ಹೊಂದಿರುವ ಭಾರತ ದೇಶದಲ್ಲಿ ಪ್ರಾಚೀನ ಕಾಲದಿಂದಲೂ ಮಹಿಳೆಯರಿಗೆ ವಿಶೇಷ ಸ್ಥಾನವಿದೆ. ಭಾರತದ ಇತಿಹಾಸದ ಆರಂಭದ ಕಾಲವನ್ನು ನೋಡಿದರೆ ಒಂದರ್ಥದಲ್ಲಿ ಮಾತೃದೇವತಾ ಆರಾಧನೆಯನ್ನು ಕಾಣಬಹುದಾಗಿದೆ. ಪ್ರಾಚೀನ ಹರಪ್ಪ ಸಂಸ್ಕೃತಿಯಲ್ಲಿ ಮಾತೃದೇವತೆಗೆ ಪ್ರಮುಖ ಸ್ಥಾನವಿದ್ದುದ್ದನ್ನು ನಾವು ಇತಿಹಾಸ ಪುಟಗಳಿಂದ ನೋಡಿದ್ದೇವೆ. ಹೀಗೆ ಕ್ರಿ.ಪೂ.ಸುಮಾರು ೩೦೦೦ ವರ್ಷಗಳ ಕಾಲದಲ್ಲೇ ಅಸ್ಥಿತ್ವಕ್ಕೆ ಬಂದ ಮಾತೃದೇವತಾರಾಧನೆಯೇ ಶಾಕ್ತ ಸಂಪ್ರದಾಯದ ಮೂಲಧಾರ ಹಾಗಾಗಿ ಭಾರತದಲ್ಲಿ ಶಿಲ್ಪಗಳು ಕಂಡುಬರುವುದನ್ನು ನೋಡಬಹುದು.[೪೧]

ಶಾಕ್ತ ಮೂರ್ತಿಗಳು ೧೯ ಅಂಗಗಳನ್ನು ಒಳಗೊಂಡಿದ್ದನ್ನು ಈ ಕೆಳಗಿನಂತೆ ಗುರುತಿಸಬಹುದು.

೧. ನ್ಯಾಸ – ರೂಪ ಸಂಯೋಜನೆ

೨. ಅಲಂಕಾರ – ಆಭರಣ, ವಸ್ತು, ಕೇಶ

೩. ಮುದ್ರೆ – ಹಸ್ತಮುದ್ರೆಗಳು

೪. ಆಯುಧ – ದೇವತೆಗಳ ಕೈಯಲ್ಲಿರುವ ಆಯುಧ

೫. ಬಾಹು – ಕೈಗಳು

೬. ವಾಹನ – ದೇವತೆಯು ಸವಾರಿಗಾಗಿ ಬಳಸುವ ಪ್ರಾಣಿಗಳು

೭. ಉಪದೇವ – ಪ್ರಧಾನ ದೇವತೆಯ ಜೊತೆ ತೋರಿಸಲ್ಪಡುವ ಇತರೆ ಕಡಿಮೆ ಮಹತ್ವದ ದೇವತೆಗಳು ಪುರುಷ ದೇವತೆಗಳ ಸಂದರ್ಭದಲ್ಲಿ ಅವರ ಸ್ತ್ರೀ ದೇವತೆಗಳು

೮. ಅರಿ – ದೇವತೆಯ ವೈರಿ

೯. ಸ್ತುವಕ – ಭಕ್ತರು ಹಾಗೂ ಇತರ ಸೇವಕರು[೨]

೧. ಲಕ್ಷ್ಮಿ

ತ್ರಿಮೂರ್ತಿಗಳಲ್ಲಿ ಪಾಲನ ಕರ್ತನಾದ ವಿಷ್ಣುವಿನ ಪತ್ನಿಯಾಗಿ ಕಂಡುಬರುವ ಲಕ್ಷ್ಮಿಯು ವೈಭವ, ಸಮೃದ್ಧಿ ಸಂಕೇತ ಜೊತೆಗೆ ವೈವಿಧ್ಯಮಯ ಶಕ್ತಿ ಉಳ್ಳವಳು ಶಿಲ್ಪಗಳಲ್ಲಿ ಇವಳನ್ನು ಕಮಲದ ಮೇಲೆ ಪರ್ಯಾರಕಾಸನದಲ್ಲಿ ಅಥವಾ ಪದ್ಮಾಸನದಲ್ಲಿ ಕುಳಿತಂತೆ ದ್ವಿಭುಜೆ ಅಥವಾ ಚತುರ್ಭುಜೆ ವುಳ್ಳವಳನ್ನಾಗಿ ತೋರಿಸಲಾಗಿದೆ. ಕಮಲ, ಶ್ರೀಫಲ, ಶಂಖ, ಅಮೃತಘಟ ವಿವಿಧ ಆಯುಧಗಳನ್ನು ಹಿಡಿದಿದ್ದಾಳೆ.

ವೆಂಕಟರಮಣ ದೇವಾಲಯದಲ್ಲಿ ವಿಗ್ರಹವಿದ್ದು ಪ್ರಸನ್ನಳಾಗಿ ಪದ್ಮದ ಮೇಲೆ ಆಸೀನಳಾಗಿದ್ದಾಳೆ. ದ್ವಿಭುಜೆಯಾಗಿದ್ದು ಎರಡು ಕೈಯಲ್ಲಿ ಕಮಲದ ಮೊಗ್ಗನ್ನು ಹಿಡಿದಿದ್ದಾಳೆ. ಹಿಂಭಾಗ ಪ್ರಭಾವಳಿಯಿಂದ ಕೂಡಿದ್ದು ಕಿರೀಟ ಧಾರಿಣಿಯಾಗಿದ್ದು ಕಪ್ಪು ಶಿಲೆಯಿಂದ ಕೆತ್ತಲ್ಪಟ್ಟಿದೆ.

೨. ಚೌಡೇಶ್ವರಿ

ಆರಗದ ಹತ್ತಿರವಿರುವ ದೇವಾಲಯದಲ್ಲಿ ಈ ಶಿಲ್ಪವು ಇದೆ. ಎರಡು ಅಡಿ ಎತ್ತರವಾಗಿದೆ. ಸಿಂಹದ ಮೇಲೆ ಕುಳಿತಿದ್ದು, ಕೈಗಳಲ್ಲಿ ಕ್ರಮವಾಗಿ ತ್ರಿಶೂಲ, ಡಮರು, ಅಭಯ, ಫಲಗಳನ್ನು ಹಿಡಿದಿರುವಳು, ಕಿರೀಟಧಾರಿಯಾಗಿದ್ದು ಕಿವಿಯೋಲೆ ವಿವಿಧ ರೀತಿಯ ಆಭರಣಗಳನ್ನು ಧರಿಸಿರುವಳು, ಶಿಲ್ಪದ ಕಾಲಮಾನ ಕ್ರಿ.ಶ.ಸುಮಾರು ೧೬ನೇ ಶತಮಾನ.

೩. ಕಾಳಿ

ಗರ್ಭಗೃಹದಲ್ಲಿರುವ ಕಾಳಮ್ಮ ಶಿಲ್ಪವು ಕಪ್ಪು ಶಿಲೆಯಲ್ಲಿದ್ದು, ಮೂರು ಅಡಿ ಎತ್ತರವಾಗಿದೆ. ಪೀಠದ ಮೇಲೆ ತ್ರಿಭಂಗಿಯಲ್ಲಿ ಸ್ಥಾನಿಕವಾಗಿದ್ದು, ಕೈಗಳಲ್ಲಿ ಕ್ರಮವಾಗಿ ಖಡ್ಗ, ಬಿಲ್ಲು, ಬಾಣ, ಗುರಾಣಿಗಳನ್ನು ಹಿಡಿದಿರುವಳು, ತಲೆಗೆ ಕಿರೀಟವಿದ್ದು, ಕಿವಿಯೋಲೆ, ಕಂಠಹಾರ, ಕೊರಳಹಾರ, ಕಟಿಸೂತ್ರ, ಕೈಕಡಗ, ತೋಳಬಂಧಿ, ಕಾಲುಕಡಗ, ಇತ್ಯಾದಿ ಆಭರಣಗಳನ್ನು ಧರಿಸಿರುವಳು.

ಶಿಲ್ಪದ ಸುತ್ತಲೂ ಅಲಂಕಾರಯುತ ಪ್ರಭಾವಳಿ ಇದ್ದು ಹೂವಿನ ಅಲಂಕರಣೆಯೊಂದಿಗೆ ಕೀರ್ತಿಮುಖ ಸಿಂಹವಿದೆ.

೪.೩.೪. ಜೈನಮೂರ್ತಿಶಿಲ್ಪಗಳು

ಜೈನ ಶಿಲ್ಪಗಳಲ್ಲಿ ಜೈನ ತೀರ್ಥಂಕರ ಶಿಲ್ಪಗಳೇ ಮುಖ್ಯವಾಗಿವೆ. ಜೈನ ತೀರ್ಥಂಕರ ಶಿಲ್ಪಗಳಲ್ಲಿ ಹೆಚ್ಚಾಗಿ ವ್ಯತ್ಯಾಸಗಳು ಕಂಡುಬರುವುದಿಲ್ಲ ೨೪ ತೀರ್ಥಂಕರರ ಶಿಲ್ಪದಲ್ಲಿ ಶಾಂತಮುಖ ಮತ್ತು ಧ್ಯಾನನಿರತ ಶಿಲ್ಪಗಳೇ ಹೆಚ್ಚು.

ಜೈನ ಧರ್ಮದಲ್ಲಿ ವ್ಯಕ್ತಿ ಆರಾಧನೆ ಇಲ್ಲ. ಆದರೆ ಗುಣದ ಆರಾಧನೆ ಇದೆ. ತೀರ್ಥಂಕರನನ್ನು ದಿವ್ಯವ್ಯಕ್ತಿ ಎಂದು ಆರಾಧಿಸುವುದಿಲ್ಲ. ಆದರೆ ಆ ವ್ಯಕ್ತಿಯಲ್ಲಿರುವ ದಿವ್ಯವಾದ ಗುಣಕ್ಕಾಗಿ ಚಿತ್ತ ಸ್ಥೈರ್ಯಕ್ಕಾಗಿ ಆರಾಧಿಸುತ್ತಾರೆ. ಪ್ರತಿವ್ಯಕ್ತಿಯಲ್ಲಿರುವ ಆತ್ಮವೇ ದೇವರೆಂದು ಕರೆಯಬೇಕು ಎಂದು ಜೈನ ಧರ್ಮ ಹೇಳುತ್ತದೆ. ಜೈನರು ಭೋಗವನ್ನು ಒಪ್ಪಿಕೊಂಡು ವೈರಾಗ್ಯಕ್ಕೆ ಮಹತ್ವ ಕೊಟ್ಟಿದ್ದಾರೆ. ಅವರಲ್ಲಿದ್ದ ಈ ದೃಢಸಂಕಲ್ಪ ಉದಾತ್ತ ವಿಚಾರಗಳು ಅವರನ್ನು ಪೂಜಿಸುವಂತೆ ಮಾಡಿವೆ.

ಜೈನ ಪರಂಪರೆಯಲ್ಲಿ ಮತಾಚಾರ್ಯರ ಪಾದ ಚಿನ್ಹೆಗಳನ್ನು ಕೆತ್ತಿ, ಅದನ್ನು ಪೂಜಿಸುವ ಪರಂಪರೆಯೊಂದು ಪ್ರಾಚೀನ ಕಾಲದಿಂದಲೂ ರೂಢಿ ಇದ್ದ ಮೂರ್ತಿಶಿಲ್ಪಕ್ಕೆ ಸ್ಫೂರ್ತಿ ಕೊಟ್ಟವರಲ್ಲಿ ಜೈನರು ಅಗ್ರಗಣ್ಯರಾಗಿದ್ದಾರೆ. ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ಜೈನ ಬಸದಿಗಳಿದ್ದು ಅಲ್ಲಿನ ಜೈನ ಶಿಲ್ಪಗಳನ್ನು ಈ ರೀತಿ ನೋಡಬಹುದು.

ಪ್ರಸ್ತುತ ಅಧ್ಯಯನ ಪ್ರದೇಶದ ಬಸದಿಯಲ್ಲಿ ಆದಿನಾಥನ ಶಿಲ್ಪವಿದೆ. ಪದ್ಮಪೀಠದ ಮೇಲೆ ಕಾರ್ಯೋತ್ಸವ ಭಂಗಿಯಲ್ಲಿದ್ದಾನೆ. ಭುಜಗಳು ಅಗಲವಾಗಿದ್ದು ತೋಳುಗಳು ದಪ್ಪವಾಗಿವೆ. ಕುತ್ತಿಗೆ ಮತ್ತು ಹೊಟ್ಟೆಯ ಬಳಿ ಅರ್ಧವೃತ್ತಾಕಾರದ ಗೆರೆಗಳಿವೆ. ಮುಂಗೈಯನ್ನು ಸ್ವಲ್ಪ ಅಗಲವಾಗಿ ಹಿಡಿಯಲಾಗಿದೆ. ತಲೆಯ ಹಿಂಭಾಗ ಪ್ರಭುಮಂಡಲವಿದೆ. ಪ್ರಭಮಂಡಲದ ಬದಿಯಲ್ಲಿ ಚಾಲಗಳಿವೆ. ಪ್ರಭಮಂಡಲದ ಮೇಲ್ಭಾಗದಲ್ಲಿ ಅಲಂಕಾರಿಕ ಮುಕ್ಕೊಡೆಯಿದೆ. ಶಿಲ್ಪದ ಇಕ್ಕೆಲಗಳಲ್ಲಿ ಯಕ್ಷ-ಯಕ್ಷಿಣಿಯರಿದ್ದಾರೆ. ಇವರು ಕೈಯಲ್ಲಿ ಆಯುಧಗಳನ್ನಿಡಿದು ಆಭರಣ ಭೂಷಿತರಾಗಿದ್ದಾರೆ. ಶಿಲ್ಪದ ಸುತ್ತಲೂ ಸ್ತಂಭ ಮಕರ ತೋರಣವಿದೆ.

ಪಾರ್ಶ್ವನಾಥನ ಮತ್ತೊಂದು ಶಿಲ್ಪ ಬಸದಿಯಲ್ಲಿದ್ದ ಪೀಠದ ಮೇಲೆ ಕಾಯೋತ್ಸರ್ಗ ಭಂಗಿಯಲ್ಲಿದ್ದಾನೆ. ಬಿಳಿ ಗ್ರಾನೈಟ್ ಕಲ್ಲಿನಲ್ಲಿರುವ ಇದು ಸಂಪೂರ್ಣ ನಗ್ನವಾಗಿರುವ ಈತ ನಿರಾಭರಣನಾಗಿದ್ದಾನೆ. ಭೂಜಗಳು ಅಗಲವಾಗಿದ್ದು ತೋಳುಗಳು ದಪ್ಪವಾಗಿವೆ. ಕುತ್ತಿಗೆ ಮತ್ತು ಹೊಟ್ಟೆಯ ಬಿಳಿ ಗೆರೆಗಳಿವೆ. ಈತನ ದೇಹದ ಹಿಂಭಾಗದಲ್ಲಿ ನಾಗ ಸುರುಳಿಯಾಗಿ ಸುತ್ತಿಕೊಂಡು ತಲೆಯ ಮೇಲೆ ತನ್ನ ಏಳು ಎಡೆಗಳನ್ನು ಬಿಚ್ಚಿಕೊಂಡು ನಾಗನ ಮೇಲೆ ಅಲಂಕಾರಿಕ ಕೊಡೆ ಇದೆ. ಪಾರ್ಶ್ವನಾಥನ ಇಕ್ಕೆಲದಲ್ಲಿ ಯಕ್ಷ ಯಕ್ಷಿಯರಿದ್ದಾರೆ. ಇವರು ಚತುರ್ಭುಜಧಾರಿಗಳಾಗಿದ್ದು ಸುಖಾಸನದಲ್ಲಿ ಕುಳಿತಿದ್ದಾರೆ.

೪.೪. ಸ್ಮಾರಕ ಶಿಲ್ಪಗಳು

ಗತಿಸಿಹೋದ ಮಾನವನ ಸಮಾಧಿ ಮಾಡಿದ ನಿರ್ದಿಷ್ಟ ಸ್ಥಳದ ಗುರುತಿಗಾಗಿಯೇ ಅಥವಾ ಮಡಿದವನ ಸ್ಮರಣೆಗಾಗಿ ಹಲವಾರು ಸಂಕೇತ ಗುರುತುಗಳನ್ನು ಸಮಾಧಿ ಮಾಡಿದ ಸ್ಥಳದಲ್ಲಿ ನೆಡುತ್ತಿದ್ದರು. ಸಾಮಾನ್ಯವಾಗಿ ಇವು ಸ್ಮಾರಕಗಳು. ಈ ಸ್ಮಾರಕಗಳಲ್ಲಿ ವೀರಗಲ್ಲು, ಮಹಾಸತಿಕಲ್ಲು ನಿಷಧಿಗಲ್ಲುಗಳು ಕಾಣುವೆವು. ಕೆಲವು ಸ್ಮಾರಕಗಳಲ್ಲಿ ಗೋಸಾಸಕಲ್ಲುಗಳು ಕಾಣುತ್ತೇವೆ. ಅವುಗಳನ್ನು ದಾನಮಾಡಿದ ಸ್ಮರಣೆಗಾಗಿ ಸ್ಥಾಪಿಸಿದವುಗಳಾಗಿವೆ.

೪.೪.೧. ಮಹಾಸತಿ ಶಿಲ್ಪಗಳು

ಪತಿಯ ಮರಣದ ನಂತರ ಸತಿಹೋದ ಪತ್ನಿಯ ನೆನಪಿಗಾಗಿ ನಿರ್ಮಿಸಿದ ಶಿಲ್ಪವು ಮಹಾಸತಿ ಶಿಲ್ಪವಾಗಿದೆ. ಈ ಮಾಸ್ತಿಕಲ್ಲುಗಳ ಉದ್ದೇಶ ಮುಖ್ಯವಾಗಿ ಸತಿ ಹೋದದನ್ನು ಮಾತ್ರ ಪ್ರಕಟಿಸುವುದಾಗಿದೆ. ಮಹಾಸತಿ ಶಿಲ್ಪದ ಲಕ್ಷಣಗಳು ಈ ಕೆಳಗಿನಂತಿವೆ.

೧. ಕಂಬದಿಂದ ಹೊರಟ ಬಲಗೈ ಎತ್ತಿದ ಶಿಲ್ಪ

೨. ಕಂಬದಿಂದ ಹೊರಟ ಬಲಗೈ ಎತ್ತಿದ ಶಿಲ್ಪದೊಂದಿಗೆ ಸತಿ–ಪತಿ ಕುಳಿತ ಶಿಲ್ಪ

೩. ಸತಿಯರನ್ನು ಮಾತ್ರ ಒಳಗೊಂಡ ಶಿಲ್ಪ

೪. ಸತಿಪತಿಯರನ್ನು ಒಳಗೊಂಡ ವಿವಿಧ ದೃಶ್ಯಾವಳಿಗಳುಳ್ಳ ಶಿಲ್ಪ[೪೩]

೪.೪.೨. ಗೋಸಾಸಗಳು

ಇದು ಒಂದು ನಿರ್ದಿಷ್ಟ ಪ್ರದೇಶದಲ್ಲಿ ನೆಟ್ಟಿರುವ ಕಲ್ಲಿನ ಕಂಬಗಳ ಗುಂಪು ಅಥವಾ ಸಾಲುಗಳು[೪೨] ಗೋಸಾಸದ ಕಂಬಕ್ಕೆ ನಾಲ್ಕು ಬದಿಗಳಿವೆ. ಮೇಲು ಭಾಗ ಕಮಾನಿನಂತೆ ವರ್ತುಲಾಕಾರವಾಗಿದೆ. ಸುಮಾರು ೧೨ ರಿಂದ ೧೩ನೇ ಶತಮಾನದಲ್ಲಿ ನಡೆಸುತ್ತಿದ್ದ ಸಹಸ್ರ ಗೋದಾನಗಳ ಪ್ರತೀಕವಾಗಿದೆ. ಒಂದು ಪ್ರತ್ಯೇಕ ವ್ರತದ ರೂಪದಲ್ಲಿತ್ತು. ಕೆಲವು ಗೋಸಾಸಗಳಲ್ಲಿ ಜೈನ ಯತಿಗಳ ಹೆಸರು ಕಂಡುಬಂದಿದೆ.

೪.೪.೩. ವೀರಗಲ್ಲುಗಳು

ಮಾನವನ ಹುಟ್ಟು ಅನಿವಾರ್ಯವಾಗದೇ ಇರಬಹುದು. ಆದರೆ ಹುಟ್ಟಿದ ಮೇಲೆ ಮರಣವೆಂಬುದು ಅವನಿಗೆ ಅನಿವಾರ್ಯವೂ ಪ್ರಕೃತಿ ನಿಯಮವೂ ಹೌದು.[೪೫]

ಕರ್ನಾಟಕದ ಜನರ ವರ್ಣನೆಯು ತುಂಬಾ ಮಹತ್ವದಾಗಿದೆ. ಆ ನಾಡವರು ಸುಭಟರು, ಗುಣವಂತರು, ಕಲಾರಸಿಕರು, ವಿವೇಕಿಗಳು, ಮೇಲಾಗಿ ಅಷ್ಟೇ ಸ್ವಾಭಿಮಾನಿಗಳು ಉಗ್ರಸ್ವರೂಪಿಗಳು ಆಗಿದ್ದರು ಎಂಬ ಮಾತು ಪ್ರಾಚೀನ ಕರ್ನಾಟಕ ಜನತೆಯ ಜೀವನ ಮೌಲ್ಯ ಎತ್ತಿ ತೋರಿಸುತ್ತದೆ.[೪೬]

ಸಂಸ್ಕೃತ ಭಾಷೆಯ "ವೀರ" ಎಂಬುದು ಇಂಡೋ ಆರ್ಯನ್ ಭಾಷೆಗಳಲ್ಲಿ ಬಳಕೆಯಲ್ಲಿದೆ. ಈ ಪದವು ವ್ಯಕ್ತಿಯ ಪರಾಕ್ರಮ ಶಕ್ತಿ ಅವನ ದೈಹಿಕ ಗುಣಗಳನ್ನು ಸೂಚಿಸುವ ಗುಣವಾಚಕವಾಗಿ ಬಳಕೆಯಲ್ಲಿದೆ. ವೀರ ಎಂಬ ಪದಕ್ಕೆ ಸಮನಾರ್ಥಕ ಪದವಾಗಿ ಇಂಗ್ಲೀಷ್ ಭಾಷೆಯ "Hero" ಎಂಬ ಪದವನ್ನು ಸಮನಾರ್ಥಕವಾಗಿ ಕನ್ನಡದಲ್ಲಿ ವೀರ ಎಂಬ ಪದವನ್ನು ಬಳಸುವುದು

ರೂಢಿಯಲ್ಲಿದೆ. ಇದು ಮೂಲತಃ ಗ್ರೀಕ್ ಭಾಷೆಯಿಂದ ಇಂಗ್ಲೀಷ್ ಭಾಷೆಗೆ ಬಂದ ಪದ ಇದು ಕಾಲದಿಂದ ಕಾಲಕ್ಕೆ ಹೆಚ್ಚು ಅವು ವ್ಯಾಪ್ತಿಯನ್ನು ಪಡೆಯುತ್ತಾ ಹೋಯಿತು.[೪೭]

ವೀರಗಲ್ಲುಗಳಲ್ಲಿ ಬರುವ ಲಿಪಿ ಎಂದರೆ ನಾಡಿಗಾಗಿ ಮಡಿದ ವೀರರನ್ನು ಸ್ಮರಿಸುವ ಬರಹ. ಈ ಬರಹವು ಕೆಲವೊಮ್ಮೆ ಮೃತನ ಪರಿವಾರಕ್ಕೆ ಕೊಡಮಾಡಿದ ದೇಣಿಗೆಯ ವಿವರಗಳನ್ನು ಹೊಂದಿರುತ್ತವೆ. ವೀರನೊಬ್ಬನು ಹುಲಿಯೊಂದಿಗೆ ಕಾದಾಡುತ್ತಿರುವ ಚಿತ್ರವಿರುವ ವೀರಗಲ್ಲು ತೀರ್ಥಹಳ್ಳಿ ಪರಿಸರದ ಜೀಗಳಗೋಡಿನಲ್ಲಿ ದೊರೆತಿದೆ. ಪ್ರಾಚೀನ ಜನರು ಕಲಿತನದಿಂದ ಕೂಡಿದರೆಂಬುದಕ್ಕೆ ಈ ಪರಿಸರದಲ್ಲಿ ದೊರೆತಿರುವ ವೀರಗಲ್ಲುಗಳೇ ಸಾಕ್ಷಿಯಾಗಿವೆ.

ದ್ವಾವಿಮೌ ಪುರುಷೌ ಲೋಕೇ ಸೂರ್ಯಮಂಡಲ ಬೇದಿಸೌ
ಪರಿವ್ರಾದ್ಯೋಗ ಯುಕ್ತಶ್ಚರಣೆ ಚಾಭಿಮುಖೇ ಹತಃ

ಸೂರ್ಯ ಮಂಡಲವನ್ನು ಇಬ್ಬರು ಮಾತ್ರ ಭೇದಿಸಬಲ್ಲರು. ಒಬ್ಬ ಯೋಗ ಸಾಧನೆ ಮಾಡಿದ ಪರಿವ್ರಾಜಕ ಮತ್ತೊಬ್ಬ ರಣರಂಗದ ಮೂಲಕ ಸಾಧನೆ ಮಾಡಿದ ಯೋಧ. ಈ ಶ್ಲೋಕ ಕರ್ನಾಟಕದ ವೀರಗಲ್ಲುಗಳ ಪಾಠದಲ್ಲಿ ಪದೇ ಪದೇ ಉದ್ಧೃತವಾಗಿದೆ. ಜನರು ಯಾವುದನ್ನು ಪರಮಾರ್ಥಿಕ ದೃಷ್ಟಿಯಿಂದ ಶ್ರೇಷ್ಠವಾದದ್ದು ಭಾವಿಸಿದ್ದರೋ ಅದಕ್ಕೆ ಸಮಾನವಾದದ್ದುಈ ಯುದ್ಧದಲ್ಲಿ ಮಡಿಯುವುದು ಎಂಬುದಾಗಿ ನಮ್ಮ ಜನ ನಂಬಿದ್ದಾರೆಂದು ಇದರಿಂದ ತಿಳಿಯಬಹುದಾಗಿದೆ. ಈ ಕಾರಣದಿಂದಲೇ ವೀರ ಸ್ವರ್ಗದ ಕಲ್ಪನೆ ಹುಟ್ಟಿಕೊಂಡಿರುವುದು. ವೀರ ಮರಣವನ್ನು ಪಡೆಯುವುದು ವೀರನಿಗೆ ಮಾತ್ರವಲ್ಲಾ ಆತನ ತಾಯಿಗೂ ಹೆಮ್ಮೆಯ ಸಂಗತಿಯಾಗಿತ್ತು.[೪೮]

ಧಾನ್ಯ, ದಾನ ಮೊದಲಾದ ಧರ್ಮಮಾರ್ಗಗಳಲ್ಲಿ ನಡೆದ ಧರ್ಮವೀರನಿಗೆ ಸಾಧ್ಯವಾಗುವ ಮೋಕ್ಷ ಸಾಧನೆಯು ಧಾರ್ಮಿಕ ಬಲಿದಾನ ಮತ್ತು ಲೌಕಿಕ ಬಲಿದಾನ ಮಾರ್ಗಗಳಿಂದಲೂ ಸಾಧ್ಯವೆಂಬಾ ಭಾವನೆ ಬೆಳೆದು ಕೊನೆ ಕೊನೆಗೆ ಯುದ್ಧ ಮಾರ್ಗದಲ್ಲಿ ಮಡಿದ ಯುದ್ಧ ವೀರನಿಗೂ ಸಾಧ್ಯವೆಂಬ ವಿಸ್ತಾರ ಪಡೆಯಿತು.[೪೯]

ಕ್ಷೇತ್ರಕಾರ್ಯ ಸಂದರ್ಭದಲ್ಲಿ ದೊರೆತಿರುವ ವೀರಗಲ್ಲು, ಮಾಸ್ತಿಗಲ್ಲು, ನಿಶಧಿಗಲ್ಲುಗಳ ವಿವರ

೧. **ಅಗಸರ ಕೊಪ್ಪ :** ಒಕ್ಕೈ ವೀರಮಾಸ್ತಿ

ತೀರ್ಥಹಳ್ಳಿ ತಾಲ್ಲೂಕು ಕೇಂದ್ರದಿಂದ ೨೫ ಕಿ.ಮೀ.ದೂರದಲ್ಲಿದೆ, ೩ ಅಡಿ ಎತ್ತರ ಇದೆ, ಎರಡು ಹಂತಗಳನ್ನು ಹೊಂದಿದೆ.

೨. **ಆರಗ :** ಎರಡು ವೀರಗಲ್ಲು ನಾಲ್ಕು ಮಾಸ್ತಿಗಲ್ಲು

ತೀರ್ಥಹಳ್ಳಿ ತಾಲ್ಲೂಕು ಕೇಂದ್ರದಿಂದ ೧೦ ಕಿ.ಮೀ.ದೂರದಲ್ಲಿದೆ.

೩. **ಕಬಸೆ :** ಲಿಪಿ ಸಹಿತ ವೀರಗಲ್ಲು ನಾಲ್ಕು ಮಾಸ್ತಿಗಲ್ಲು

ತೀರ್ಥಹಳ್ಳಿಯಿಂದ ೨೮ ಕಿ.ಮೀ.ದೂರದಲ್ಲಿದೆ. ೪ ಅಡಿ ಎತ್ತರ ೩ ಅಡಿ ಅಗಲವಿದ್ದು ೨ ಹಂತಗಳನ್ನು ಹೊಂದಿದೆ.

೪. ಕಣಿವೆ : ನಿಷಧಿಕಲ್ಲು ಲಿಪಿ ಸಹಿತ

ತೀರ್ಥಹಳ್ಳಿಯಿಂದ ೨೩ ಕಿ.ಮೀ ದೂರದಲ್ಲಿದೆ. ೫ ಅಡಿ ಎತ್ತರ ೩ ಅಡಿ ಅಗಲವುಳ್ಳದಾಗಿದೆ.

೫. ಕೆಸ್ತೂರು : ಏಳು ಮಾಸ್ತಿಗಲ್ಲು

ತೀರ್ಥಹಳ್ಳಿಯಿಂದ ೧೦ ಕಿ.ಮೀ.ದೂರದಲ್ಲಿದೆ

ಆರು ಇಕ್ಕೈ ಮಾಸ್ತಿಗಲ್ಲುಗಳು ೩ ಅಡಿ ಎತ್ತರ

ಒಂದು ಮುಕ್ಕೆ ಮಾಸ್ತಿಗಲ್ಲು ೩ ಅಡಿ ಎತ್ತರ

೬. ಕೋಣಂದೂರು : ವೀರಮಾಸ್ತಿ

ತೀರ್ಥಹಳ್ಳಿಯಿಂದ ೧೮ ಕಿ.ಮೀ ದೂರದಲ್ಲಿದ್ದು ಮಕ್ಕಿಬೈಲು ಶಾಲೆಯ ಹತ್ತಿರವಿದೆ, ೩ ಅಡಿ ಎತ್ತರ ೧೧/೨ ಅಡಿ ಅಗಲವಿದೆ ವೀರ ಮತ್ತು ಸತಿಯ ಶಿಲ್ಪಗಳಿವೆ.

೭. ಗನವಳ್ಳಿ : ಐದು ಒಕ್ಕೈ ಮಾಸ್ತಿಗಲ್ಲು

ತೀರ್ಥಹಳ್ಳಿ ತಾಲ್ಲೂಕು ಕೇಂದ್ರದಿಂದ ೨೦ ಕಿ.ಮೀ ದೂರದಲ್ಲಿದೆ ಹಾಗೂ ಸಾಲಾಗಿ ಮಾಸ್ತಿಕಲ್ಲನ್ನು ನಿಲ್ಲಿಸಲಾಗಿದೆ ೫ ಅಡಿ ಎತ್ತರ ೨೧/೨ ಅಡಿ ಅಗಲವುಳ್ಳದಾಗಿದೆ, ೨ ಹಂತಗಳನ್ನು ಹೊಂದಿದೆ.

೮. ಜಿಗಳಗೋಡು : ವೀರಗಲ್ಲು (ಹುಲಿಬೇಟೆ)

ತೀರ್ಥಹಳ್ಳಿ ತಾಲ್ಲೂಕು ಕೇಂದ್ರದಿಂದ ೧೩ ಕಿ.ಮೀ.ದೂರದಲ್ಲಿದೆ, ಇಲ್ಲಿ ಹುಲಿಬೇಟೆಯ ವೀರಗಲ್ಲು ೨ ಹಂತದಿಂದ ಕೂಡಿದೆ. ೨ನೇ ಹಂತದಲ್ಲಿ ವೀರನು ಹುಲಿಯ ಜೊತೆಗೆ ಹೋರಾಡುವ ದೃಶ್ಯಾವಳಿ ಇದೆ. ಮೊದಲನೇ ಹಂತದಲ್ಲಿ ಶಿವಲಿಂಗವಿದ್ದು ಅದನ್ನು ಪೂಜಿಸುತ್ತಿರುವ ಯತಿಯು ಕೈಯಲ್ಲಿ ಕಮಂಡಲ ಹಿಡಿದಿರುವನು ವೀರನು ಪಕ್ಕದಲ್ಲಿ ಕೈಮುಗಿದು ನಿಂತಿದ್ದಾನೆ.

೯. ಬಳಗಟ್ಟೆ : ೭ ಮಾಸ್ತಿಗಲ್ಲು

ತೀರ್ಥಹಳ್ಳಿಯಿಂದ ೮ ಕಿ.ಮೀ ದೂರದಲ್ಲಿದೆ. ಇಲ್ಲಿನ ದೇವರ ಬನದಲ್ಲಿ ೭ ಮಾಸ್ತಿಕಲ್ಲನ್ನು ಸಾಲಾಗಿ ನಿಲ್ಲಿಸಲಾಗಿದ್ದು ಊರಿನವರ ಐತಿಹ್ಯದ ಪ್ರಕಾರ ಯಡಿಯೂರು ಹೆಗ್ಗಡೆ ಎಂಬ ರಾಜ ೭ ಪತ್ನಿಯರ ಮಾಸ್ತಿಗಲ್ಲು ಎಂಬ ನಂಬಿಕೆ ಇದೆ. ಎಲ್ಲಾ ವಿಗ್ರಹಗಳು ೨ ರಿಂದ ೩ ಅಡಿ ಎತ್ತರವಿದ್ದು ೧೧/೪ ಅಡಿ ಅಗಲವುಳ್ಳದಾಗಿದೆ.

೧೦. ಬೆಜ್ಜವಳ್ಳಿ : ವೀರಮಾಸ್ತಿ

ತೀರ್ಥಹಳ್ಳಿಯಿಂದ ೧೩ ಕಿ.ಮೀ.ದೂರದಲ್ಲಿದೆ ೪ ಅಡಿ ಎತ್ತರ ೩ ಅಡಿ ಅಗಲವಿದ್ದು ೩ ಹಂತಗಳನ್ನು ಹೊಂದಿದೆ.

೧೧. ಬೊಬ್ಬಿ : ವೀರಗಲ್ಲು

ತೀರ್ಥಹಳ್ಳಿ ೧೩ ಕಿ.ಮೀ. ದೂರದಲ್ಲಿದೆ ೪ ಅಡಿ ಎತ್ತರ ೨ ಅಡಿ ಅಗಲವಿದ್ದು ೩ ಹಂತಗಳನ್ನು ಹೊಂದಿದೆ.

೧೨. ಮುಂಡಗದ್ದೆ : ಎರಡು ವೀರಮಾಸ್ತಿ ಒಂದು ಮಾಸ್ತಿಗಲ್ಲು

ತೀರ್ಥಹಳ್ಳಿಯಿಂದ ೩೦ ಕಿ.ಮೀ ದೂರದಲ್ಲಿದೆ. ಒಂದನೇ ವೀರಮಾಸ್ತಿ ೩ ಅಡಿ ಎತ್ತರ ೧.೫ ಅಡಿ ಅಗಲ ಎರಡನೇ ವೀರಮಾಸ್ತಿಯು ೩ ಅಡಿ ಎತ್ತರ ೧.೫ ಅಗಲ ಹೊಂದಿದೆ ಮಾಸ್ತಿಗಲ್ಲು ೩ ಅಡಿ ಎತ್ತರದ ಶಿಲ್ಪ.

೧೩. ಮುನ್ನೂರು : ತುರುಗೋಳು ವೀರಗಲ್ಲು

ತೀರ್ಥಹಳ್ಳಿ ತಾಲ್ಲೂಕು ಕೇಂದ್ರದಿಂದ ೮ ಕಿ.ಮೀ ದೂರದಲ್ಲಿದೆ ೫ ಅಡಿ ಎತ್ತರ ೨.೫ ಅಗಲವಿದ್ದು ೪ ಹಂತಗಳನ್ನು ಹೊಂದಿದೆ.

೧೪. ಹುಲ್ಲುಸಾಲೆ : ಲಿಪಿ ಸಹಿತ ಎರಡು ವೀರಗಲ್ಲು

ತೀರ್ಥಹಳ್ಳಿ ತಾಲ್ಲೂಕು ಕೇಂದ್ರದಿಂದ ೨೨ ಕಿ.ಮೀ ದೂರದಲ್ಲಿದೆ ಕಾಡಿನ ಮಧ್ಯ ೭ ಅಡಿ ಎತ್ತರ ೩ ಅಡಿ ಅಗಲವುಳ್ಳದಾಗಿದೆ. ಅಲ್ಲಿನ ಈಶ್ವರ ದೇವಸ್ಥಾನದ ಮುಂಭಾಗದಲ್ಲಿ ನೆಡಲಾಗಿದೆ. ಎಲ್ಲಾ ಸಾಲಿನಲ್ಲೂ ಶಾಸನ ಪಾಠದಿಂದ ಕೂಡಿದೆ. ಯುದ್ಧ ವರ್ಣನೆಯ ಸುಂದರ ಕಲಾಕೃತಿಯಿಂದ ರಚಿಸಲ್ಪಟ್ಟಿದೆ.

೧೫. ಹಾದಿಗಲ್ಲು : ಲಿಪಿಸಹಿತ ನಿಶಧಿಗಲ್ಲು

ತೀರ್ಥಹಳ್ಳಿ ತಾಲ್ಲೂಕು ಕೇಂದ್ರದಿಂದ ೨೦ ಕಿ.ಮೀ ದೂರದಲ್ಲಿದ್ದು ೭ ಅಡಿ ಎತ್ತರದ ೩ ಅಡಿ ಅಗಲದ ನಿಶಧಿಕಲ್ಲಿದ್ದು ಸಮಾಧಿ ಮರಣದ ವಿವರಣೆ ಮತ್ತು ಶಿಲ್ಪವನ್ನು ಹೊಂದಿದೆ.

೧೬. ಹೀರೆಕಲ್ಲಹಳ್ಳಿ : ಲಿಪಿ ಸಹಿತ ೨ ವೀರಗಲ್ಲು

ತೀರ್ಥಹಳ್ಳಿ ತಾಲ್ಲೂಕು ಕೇಂದ್ರದಿಂದ ೨೮ ಕಿ.ಮೀ.ದೂರದಲ್ಲಿದ್ದು ಗ್ರಾಮ ದೇವಾಲಯ ಮುಂಭಾಗದಲ್ಲಿ ನಿಲ್ಲಿಸಲಾಗಿದ್ದು ೭ ಅಡಿ ಎತ್ತರ ೩ ಅಡಿ ಅಗಲ ವುಳ್ಳದಾಗಿದೆ. ಎಲ್ಲಾ ಸಾಲಿನಲ್ಲಿರುವ ಶಾಸನ ಪಾಠವಿದ್ದು ಸಾಕಷ್ಟು ತ್ರುಟಿತವಾಗಿದೆ. ಅಲಂಕಾರವಾದ ಶಿಲ್ಪ ಕೃತಿಯಿಂದ ಕೆತ್ತಲಾಗಿದೆ.

೧೭. ಹೆದ್ದೂರು : ಲಿಪಿ ಸಹಿತ ಜೋಡಿ ವೀರಗಲ್ಲು

ತೀರ್ಥಹಳ್ಳಿ ೨೬ ಕಿ.ಮೀ. ದೂರದಲ್ಲಿದೆ ಮೊದಲನೇ ವೀರಗಲ್ಲು ೫ ಅಡಿ ಎತ್ತರ ೨.೫ ಅಡಿ ಅಗಲವಿದ್ದು ೪ ಹಂತಗಳನ್ನು ಹೊಂದಿದೆ.

ಎರಡನೇ ವೀರಗಲ್ಲು ೫ ಅಡಿ ಎತ್ತರ ೨.೫ ಅಗಲ ೪ ಹಂತಗಳನ್ನು ಹೊಂದಿದೆ.

೧೮. ಹುಲಿಸರ : ೩ ವೀರಗಲ್ಲು ೧ ನಿಶಧಿಗಲ್ಲು

ತೀರ್ಥಹಳ್ಳಿ ೨೩ ಕಿ.ಮೀ ದೂರದಲ್ಲಿದೆ. ಮೊದಲನೇ ವೀರಗಲ್ಲು ೫ ಅಡಿ ಎತ್ತರ ೨.೫ ಅಡಿ ಅಗಲವಿದ್ದು ೩ ಹಂತಗಳನ್ನು ಹೊಂದಿದೆ.

ಎರಡನೇ ವೀರಗಲ್ಲು ೮ ಅಡಿ ಎತ್ತರ ೩ ಅಡಿ ಅಗಲ ೬ ಹಂತಗಳನ್ನು ಹೊಂದಿದೆ. ನಿಶಧಿಲ್ಲು ೫ ಅಡಿ ಎತ್ತರ ೩ ಅಡಿ ಅಗಲ ೪ ಹಂತಗಳನ್ನು ಹೊಂದಿದೆ.

೧೯. ತಿರಳೇ ಬೈಲು : ವೀರಮಾಸ್ತಿ ಮತ್ತು ಇಕ್ಕೈ ಮಾಸ್ತಿಗಲ್ಲು

ತೀರ್ಥಹಳ್ಳಿ ೪ ಕಿ.ಮೀದೂರದಲ್ಲಿದೆ ೫ ಅಡಿ ಎತ್ತರ ೩ ಅಡಿ ಅಗಲವಿದ್ದು ೩ ಹಂತಗಳನ್ನು ಹೊಂದಿವೆ.

ಅಡಿಟಿಪ್ಪಣಿ

೧. ರಾಜನೀರಿ ಪ್ರಕಾಶ, ೧೯೧೬, ವಾರಣಾಸಿ, ಪುಟ–೨೦೨
೨. ಸೂರ್ಯನಾಥ ಕಾಮತ್, ದೇವರಕೊಂಡಾರೆಡ್ಡಿ ಮತ್ತು ಜಗನ್ನಾಥ ಎಸ್.ಎ (ಸಂ), ೧೯೯೧, ಇತಿಹಾಸ ದರ್ಶನ ಸಂಪುಟ–೦೬, ಪುಟ–೧೫೭
೩. ಕೊಟ್ರೇಶ್ ಎಂ., ೨೦೧೧, ಬಳ್ಳಾರಿ ಜಿಲ್ಲೆಯ ಕೋಟೆಗಳು, ಪುಟ–೧೩
೪. ಬೇಂದ್ರೆ ವಾ.ಸೀ., ೧೯೬೫, ಗಡ–ಕೋಟೆ–ದುರ್ಗ: ಆಣಿತ್ಯಾಂಚೀವಾಸ್ತು, ಪುಟ–೦೬–೦೭
೫. ಕನ್ನಡ ಸಾಹಿತ್ಯ ಪರಿಷತ್ತು, ೨೦೦೧, ಸಂಕ್ಷಿಪ್ತ ಕನ್ನಡ ನಿಘಂಟು, ಪುಟ–೩೩೨
೬. ತಿಪ್ಪೇಸ್ವಾಮಿ ಎಸ್., ೨೦೦೪, ರಕ್ಷಣಾ ವಾಸ್ತುಶಿಲ್ಪ, ಚಿತ್ರದುರ್ಗ ಜಿಲ್ಲೆ (ಅಪ್ರಕಟಿತ ಪ್ರಬಂಧ), ಪುಟ–೯೯–೧೦೦
೭. ಕೊಟ್ರೇಶ್ ಎಂ., ಪೂರ್ವೋಕ್ತ, ಪುಟ–೧೪
೮. ಬೆಟಗೇರಿ ಕೃಷ್ಣಶರ್ಮ, ೧೯೫೯, ಕರ್ನಾಟಕ ಜನಜೀವನ, ಪುಟ–೩
೯. ರಾಜನೀತಿ ಪ್ರಕಾಶ, ಪೂರ್ವೋಕ್ತ, ಪುಟ–೨೦೩, ೨೦೪
೧೦. ಕನ್ನಡ ಸಾಹಿತ್ಯ ಪರಿಷತ್ತು, ೨೦೦೧, ಸಂಕ್ಷಿಪ್ತ ಕನ್ನಡ ನಿಘಂಟು, ಪುಟ–೩೩೨
೧೧. ಬೇಂದ್ರೆ ವಾ.ಸೀ., ಪೂರ್ವೋಕ್ತ, ಪುಟ–೦೬
೧೨. ಯಜುರಾರಣ್ಯಕ, ಪುಟ–೧, ೩, ೭
೧೩. ಚನ್ನಬಸಪ್ಪ ಎಸ್.ಪಾಟೀಲ, ೧೯೯೯, ಕರ್ನಾಟಕದ ಕೋಟೆಗಳು, ಸಂಪುಟ–೧, ಪುಟ–೧
೧೪. ಕನ್ನಡ ವಿಷಯ ವಿಶ್ವಕೋಶ, ಸಂಪುಟ–೧, ಪುಟ–೪೦೬
೧೫. ಕೊಟ್ರೇಶ್ ಎಂ., ಪೂರ್ವೋಕ್ತ, ಪುಟ–೧೪
೧೬. ಸೂರ್ಯನಾಥ ಕಾಮತ್, ದೇವರಕೊಂಡಾರೆಡ್ಡಿ, ಜಗನ್ನಾಥ ಎಸ್.ಎ.(ಸಂ), ಪೂರ್ವೋಕ್ತ, ಪುಟ–೧೫೭
೧೭. ನರಸಿಂಹಮೂರ್ತಿ ಕೆ.ಎಲ್, ೧೯೪೯, ಶುಕ್ರನೀತಿ ಸಾರ, ಪುಟ–೧೦
೧೮. ಪಂಚತಂತ್ರ
೧೯. ಲಕ್ಷಣ್ ತೆಲಗಾವಿ (ಸಂ), ೨೦೦೬, ಚರಿತ್ರೆಯ ಅಧ್ಯಯನ ಸಂಪುಟ–೧, ಸಂಚಿಕೆ–೨, ಪುಟ–೧೬೨, ೧೬೩
೨೦. ಶಾಂತಿನಾಥ ದಿಬ್ಬದ, ೨೦೦೬, ನಾಗಚಂದ್ರನ ಸಂಪುಟ, ಪುಟ–೫೯೧
೨೧. ಸಚ್ಚಿದಾನಂದ ಶಂಕರಭಾರತೀ ಸ್ವಾಮಿ (ಅನು), ಕೌಟಿಲ್ಯನ ಅರ್ಥಶಾಸ್ತ್ರ, ಪುಟ–೯೫
೨೨. ಚೆಲುವರಾಜನ್ ಆರ್, ೧೯೮೭, ಪಾವಗಡ ತಾಲ್ಲೂಕು ದರ್ಶನ, ಪುಟ–೨೪
೨೩. ಚನ್ನಬಸಪ್ಪ ಎಸ್.ಪಾಟೀಲ, ಪೂರ್ವೋಕ್ತ, ಪುಟ–೨
೨೪. ರಾಮಯ್ಯಂಗಾರ್ ಹೆಚ್.ಕೆ, ಕೆಲವು ಧಾಮಿಕ ಕರ್ತವ್ಯಗಳು, ಪುಟ–೮೦
೨೫. ರಾಮಯ್ಯಂಗಾರ್, ಪೂರ್ವೋಕ್ತ, ಪುಟ–೭೭
೨೬. ಅಪರ್ಣ ಕೂ.ಸ, ೧೯೯೯, ದೇವಾಲಯದ ವಾಸ್ತುಶಿಲ್ಪ ಪರಿಚಯ, ಪುಟ–೧
೨೭. ಚಿದಾನಂದ ಮೂರ್ತಿ ಎಂ, ೨೦೦೨, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ–೧೯೭

೨೮. ಸತೀಶ ಕೆ, ೨೦೦೪, ವಿಜಯನಗರ ಕಾಲದ ಶೈವ ದೇವಾಲಯಗಳು, (ಅಪ್ರಕಟಿತ ಪಿಎಚ್.ಡಿ ಪ್ರಬಂಧ) ಪುಟ–೮೦

೨೯. ಗೋಪಾಲ್ ಬಾ.ರಾ, ೧೯೯೩, ಕರ್ನಾಟಕದ ಕಲೆಗಳು, ಸಂಪುಟ–೪, ಪುಟ–೨೧

೩೦. ತಿಪ್ಪೇರುದ್ರ ಸ್ವಾಮಿ ಎಚ್, ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪುಟ–೫೨೩

೩೧. ಕರಗುಂದ ಟಿ.ಪಂಕಜಾಕ್ಷ, ಶಿಲ್ಪ ಸೌಂದರ್ಯ, ಪುಟ–೩

೩೨. ಕರಗುಂದ ಟಿ.ಪಂಕಜಾಕ್ಷ, ಪೂರ್ವೋಕ್ತ, ಪುಟ–೩

೩೩. ಜಯಣ್ಣ ಯು, ಮೊಣಕಾಲ್ಮೂರು ತಾಲ್ಲೂಕಿನ ಪುರಾತತ್ವೀಯ ಪರಿಸರ (ಅಪ್ರಕಟಿತ ಪ್ರಬಂಧ ಪಿಎಚ್.ಡಿ) ಪುಟ–೧೯೯

೩೪. ದತ್ತಾತ್ರೇಯ ಕುಲಕರ್ಣಿ, ೨೦೦೮, ಹಾವೇರಿ ಜಿಲ್ಲೆಯ ತ್ರಿಕೂಟ ದೇವಾಲಯಗಳು, ಪುಟ–೨೩೦

೩೫. ಕರಗುಂದ ಟಿ.ಪಂಕಜಾಕ್ಷ, ಪೂರ್ವೋಕ್ತ, ಪುಟ–೩

೩೬. ತಿಪ್ಪರುದ್ರಸ್ವಾಮಿ, ಪೂರ್ವೋಕ್ತ, ಪುಟ–೬೨೫

೩೭. ಕರ್ನಾಟಕ ಚರಿತ್ರೆ, ಸಂಪುಟ–೦೧, ಪುಟ–೩೧೩

೩೮. ಕರ್ನಾಟಕ ಚರಿತ್ರೆ, ಸಂಪುಟ–೦೧, ಪುಟ–೩೧೪

೩೯. ರಾಮಚಂದ್ರರಾವ್ ಎಸ್.ಕೆ, ಮೂರ್ತಿಶಿಲ್ಪ ನೆಲೆ–ಹಿನ್ನೆಲೆ, ಪುಟ–೧೨೦, ೨೧

೪೦. ಕರುಣಾವಿಜೇಂದ್ರ, ಕಲ್ಯಾಣ ಚಾಲುಕ್ಯರ ಶಿಲ್ಪಕಲೆ, ಪುಟ–೩೨

೪೧. ಸುರೇಶ್ ವಿ, ೨೦೦೯, ಚಿತ್ರದುರ್ಗ ದಾವಣಗೆರೆ ಜಿಲ್ಲೆಗಳ ದೇವಾಲಯ, ಪುಟ–೨೩೦

೪೨. ಫಣೀಂದ್ರನಾಥಬೋಸ್, ೧೯೭೮, ಪ್ರಿನ್ಸಿಪಲ್ ಆಫ್ ಇಂಡಿಯನ್ ಶಿಲ್ಪಶಾಸ್ತ್ರ, ಪುಟ–೮

೪೩. ಶೇಠ್ ಬಿ.ಎಸ್, ಕರ್ನಾಟಕದಲ್ಲಿ ಸತಿಪದ್ಧತಿ, ಪುಟ–೨೯೭

೪೪. ರಾಮಭಟ್ಟ ಬಿ.ಎಸ್, ೨೦೦೧, ಶಿವಮೊಗ್ಗ ಜಿಲ್ಲೆಯ ಇತಿಹಾಸ ಮತ್ತು ಸಂಸ್ಕೃತಿ, ಪುಟ–೧೨೩

೪೫. ಶೇಷಶಾಸ್ತ್ರಿ ಆರ್, ಕರ್ನಾಟಕದ ವೀರಗಲ್ಲು, ಪುಟ–೪೦

೪೬. ಶೇಷಶಾಸ್ತ್ರಿ ಆರ್, ಪೂರ್ವೋಕ್ತ, ಪುಟ–೪೦

೪೭. ಶೇಷಶಾಸ್ತ್ರಿ ಆರ್, ಪೂರ್ವೋಕ್ತ, ಪುಟ–೨೫

೪೮. ಶೇಷಶಾಸ್ತ್ರಿ ಆರ್, ಪೂರ್ವೋಕ್ತ, ಪುಟ–೪೩

೪೯. ಕಲಬುರ್ಗಿ ಎಂ.ಎಂ, ಸಮಾಧಿ ಬಲಿದಾನ ವೀರಮರಣ ಸ್ಮಾರಕಗಳು, ಪುಟ–೭೧

ಅಧ್ಯಾಯ–ಐದು

ಸಮಾರೋಪ

ಅಧ್ಯಾಯ-ಐದು

ಸಮಾರೋಪ

ಪ್ರಸ್ತುತ ಅಧ್ಯಯನವಾದ ತೀರ್ಥಹಳ್ಳಿ ಪರಿಸರದ ಶಾಸನ ಮತ್ತು ಸ್ಮಾರಕಗಳ ಅಧ್ಯಯನ ಎಂಬ ವಿಷಯದ ಬಗ್ಗೆ ವಿವರವಾದ ಅಧ್ಯಯನಗಳು ಇಲ್ಲಿಯವರೆಗೂ ನಡೆದಿರುವುದು ಕಡಿಮೆ ಎಂದೆನಿಸುತ್ತದೆ. ಆ ನಿಟ್ಟಿನಲ್ಲಿ ತೀರ್ಥಹಳ್ಳಿ ಪರಿಸರದ ಇತಿಹಾಸವನ್ನು ವಿವರವಾಗಿ ಹಾಗೂ ವಿಶ್ಲೇಷಣೆಯವಾಗಿ ಕಾಲಾನುಕ್ರಮಣಿಕೆಯಲ್ಲಿ ಕಟ್ಟಿಕೊಡುವ ಪ್ರಯತ್ನದ ಹಿನ್ನಲೆಯಲ್ಲಿ ಕ್ಷೇತ್ರಕಾರ್ಯವನ್ನು ಕೈಗೊಂಡು ವಿಷಯ ಸಂಗ್ರಹಿಸಲಾಗಿದೆ. ಇದರ ಅನ್ವಯ ಈ ಪರಿಸರದಲ್ಲಿ ಪ್ರಾಗೈತಿಹಾಸದ ನೆಲೆಗಳು, ಚಾರಿತ್ರಿಕ ಕಾಲದ ದೇವಾಲಯಗಳು, ಶಾಸನಗಳು, ಮೂರ್ತಿಶಿಲ್ಪಗಳು, ಪ್ರಾಚೀನ ಕಾಲದ ಕೆರೆ, ಕಟ್ಟೆ, ನದಿಗಳನ್ನು ಅಧ್ಯಯನಕ್ಕೆ ಒಳಪಡಿಸಿದೆ.

ತೀರ್ಥಹಳ್ಳಿ ಪರಿಸರದ ಇತಿಹಾಸವನ್ನು ಸಮಗ್ರವಾಗಿ ಬಿಂಬಿಸುವ ಪ್ರಯತ್ನದಲ್ಲ ಅಡಿ ಸೂಕ್ಷ್ಮ ಸಂಗತಿಗಳನ್ನು ಅರಿಯುವ ಕಾರ್ಯ ಮಾಡಲಾಗಿದೆ. ಈ ಪರಿಸರವು ಪ್ರಾಚೀನ ಮಾನವನಿಂದ ಮೊದಲ್ಗೊಂಡು ಇಂದಿನ ಮಾನವನ ಕಾರ್ಯ ವೈಖರಿಯವರೆಗೂ ತನ್ನ ಪ್ರಭಾವವನ್ನು ಬೀರುತ್ತಿದೆ ಎಂಬ ಅಂಶ ಈ ಪರಿಸರದ ಅಧ್ಯಯನದಿಂದ ತಿಳಿಯಬಹುದಾಗಿದೆ.

ತೀರ್ಥಹಳ್ಳಿ ಪರಿಸರದ ಶಾಸನಗಳು ಮತ್ತು ಸ್ಮಾರಕಗಳ ಅಧ್ಯಯನ ಎಂಬ ಅಧ್ಯಯನದ ವಿಷಯವನ್ನು ಆಯ್ದುಕೊಂಡು ವಿವರವಾಗಿ ಇದಕ್ಕೆ ಸಂಬಂಧಿಸಿದ ಕ್ಷೇತ್ರಕಾರ್ಯ ಕೈಗೊಳ್ಳಲಾಗಿದೆ. ಈ ಪರಿಸರದಲ್ಲಿ ಪ್ರಾಗೈತಿಹಾಸಕ್ಕೆ ಸಂಬಂಧಿಸಿದಂತೆ ಹಳೇ ಶಿಲಾಯುಗದಿಂದ ಇತಿಹಾಸ ಆರಂಭದ ಕಾಲದ ನೆಲೆಗಳನ್ನು ಇಲ್ಲಿ ಕಾಣಬಹುದು ನೂತನ ಶಿಲಾಯುಗದ ೨ ನೆಲೆಗಳನ್ನು ಕಂಡುಬಂದಿವೆ. ಇಂತಹ ಪ್ರಾಚೀನ ನೆಲೆಗಳಲ್ಲಿ ಇಂದಿನ ಮಾನವನು ತನ್ನ ಸ್ವಾರ್ಥಕ್ಕಾಗಿ ಈ ನೆಲೆಗಳನ್ನು ನಾಶಮಾಡುತ್ತಿದ್ದಾನೆ. ಅದೇ ರೀತಿಯಾಗಿ ಈ ಪರಿಸರಕ್ಕೆ ಸಂಬಂಧಿಸಿದಂತೆ ಬೃಹತ್ ಶಿಲಾಯುಗದಲ್ಲಿ ಗೋರಿಗಳು ಕಬ್ಬಿಣದ ಕಿಟ್ಟ ಮತ್ತು ಸಮಾಧಿಗಳನ್ನು ಕಾಣಬಹುದಾಗಿದೆ.

ಅದೇ ರೀತಿಯಲ್ಲಿ ಅಧ್ಯಯನವನ್ನು ಮುಂದುವರಿಸಿ ಚಾರಿತ್ರಿಕ ಘಟ್ಟಕ್ಕೆ ಕೊಂಡೊಯ್ಯುವುದಾದರೆ ಈ ಪರಿಸರದಲ್ಲಿ ಕಲ್ಯಾಣದ ಚಾಲುಕ್ಯರು, ಹೊಯ್ಸಳರು, ವಿಜಯನಗರದ ಅರಸರು, ಕೆಳದಿ, ಇಕ್ಕೇರಿ ನಾಯಕರು ಆಳ್ವಿಕೆ ನಡೆಸಿದ್ದು ಕಂಡುಬರುತ್ತದೆ. ಇವರ ಆಳ್ವಿಕೆಯ ಸಂದರ್ಭದಲ್ಲಿ ದೇವಾಲಯಗಳು, ಶಾಸನಗಳು, ಕೋಟೆಕೊತ್ತಲಗಳು, ಕೆರೆಕಟ್ಟೆಗಳನ್ನು ನಿರ್ಮಿಸಿದ್ದು ಅವುಗಳ ಸಹಾಯದಿಂದ ವಿವರಣಾತ್ಮಕ ಇತಿಹಾಸ ರಚಿಸಲು ಸಹಾಯಕವಾಗಿದೆ ಎಂದರೆ ತಪ್ಪಾಗಲಾರದು.

ತೀರ್ಥಹಳ್ಳಿ ಪರಿಸರದಲ್ಲಿ ಸಿಕ್ಕಿರುವ ಶಾಸನಗಳ ಪ್ರಮಾಣ ಹೆಚ್ಚು, ಅಧ್ಯಯನದ ದೃಷ್ಟಿಯಿಂದ ಶಾಸನಗಳನ್ನು ವರ್ಗೀಕರಣ ಮಾಡಿಕೊಂಡು ಇಲ್ಲಿನ ಶಾಸನಗಳು ಸಾಮಾಜಿಕ, ಧಾರ್ಮಿಕ, ಆಡಳಿತಾತ್ಮಕ ಅಂಶಗಳನ್ನು ತಿಳಿಸುತ್ತವೆ. ಚಟ್ಟಕೊಡಗಿನಲ್ಲಿ ದೊರೆತಿರುವ ಶಾಸನ ವಿಜಯನಗರ ಕಾಲದ ಪ್ರಮುಖವಾದ ಪ್ರಾಚೀನ ಶಾಸನವಾಗಿದೆ.

ಇಲ್ಲಿನ ಶಾಸನಗಳು ಕನ್ನಡ, ಸಂಸ್ಕೃತ ಭಾಷೆಯನ್ನು ಒಳಗೊಂಡಿವೆ. ಈ ಪರಿಸರದ ಸುತ್ತಮುತ್ತ ಹೆಚ್ಚಿನ ಪ್ರಮಾಣದಲ್ಲಿ ವೀರಗಲ್ಲುಗಳು ಹಾಗೂ ಮಾಸ್ತಿಗಲ್ಲುಗಳು ದೊರೆತಿದ್ದು ಅಂದಿನ ಸಮಾಜದ ಸ್ಥಿತಿಗತಿಗಳ ಬಗ್ಗೆ ಬೆಳಕು ಚೆಲ್ಲುತ್ತವೆ, ಇಲ್ಲಿನ ದೇವಾಲಯಗಳು ಚಾಲುಕ್ಯ, ಹೊಯ್ಸಳ, ವಿಜಯನಗರ ಪಾಳೇಗಾರರ ಕಾಲದಲ್ಲಿ ನಿರ್ಮಾಣಗೊಂಡವುಗಳಾಗಿವೆ. ಈ ದೇವಾಲಯಗಳ ರಚನೆ, ವಾಸ್ತು ಶೈಲಿಯನ್ನು ವಿವರವಾಗಿ ತಿಳಿಸಲಾಗಿದೆ.

ಸಾಮಾನ್ಯವಾಗಿ ರಕ್ಷಣೆ ಎಂಬುದು ಮುಖ್ಯವಾದದ್ದು ಈ ಹಿನ್ನಲೆಯಲ್ಲಿ ರಕ್ಷಣೆ ಎಂಬ ಮಾತ್ರಕ್ಕೆ ಕೋಟೆಗಳಷ್ಟೇ ಮುಖ್ಯವಲ್ಲ, ಅಂದಿನ ಮಾನವರು ಆಹಾರ ಸಂಗ್ರಹಿಸಲು ನಿರ್ಮಿಸಿದ ಕಣಜಗಳು ಸೇರುತ್ತವೆ, ಕೋಟೆಗಳ ಒಳಭಾಗದಲ್ಲಿ ಅರಮನೆ, ಮದ್ದಿನಮನೆ, ಗರಡಿ ಮನೆಗಳು ಸಹ ಮುಖ್ಯವಾಗಿರುತ್ತವೆ. ತೀರ್ಥಹಳ್ಳಿ ಪರಿಸರದಲ್ಲಿ ಇಂದಿಗೂ ಸುಭದ್ರವಾದ ಕೋಟೆಗಳನ್ನು ಕಾಣಬಹುದಾಗಿದೆ. ಅಂತಹ ಕೋಟೆಗಳ ರಚನೆ, ಬುರುಜು, ಬತೇರಿಗಳು, ಕೋಟೆಯೊಳಗಿನ ಸ್ಮಾರಕಗಳಾದ ತುಪ್ಪದ ಕಣಜ, ಈಜುಕೊಳದ ಬಗ್ಗೆ ಸಮಗ್ರವಾಗಿ ವಿವರಿಸಲಾಗಿದೆ.

ಈ ಪರಿಸರ ಭಾಗವು ಅಲ್ಲಲ್ಲಿ ಬೆಟ್ಟಗುಡ್ಡಗಳಿಂದ ಆವೃತ್ತವಾದ ಪ್ರದೇಶವಾಗಿದೆ. ಅಲ್ಲದೆ ಪರಿಸರದಲ್ಲಿ ತುಂಗಾ ಮತ್ತು ಬ್ರಾಹ್ಮಿ ಎಂಬ ಎರಡು ನದಿಗಳು ಹರಿಯುತ್ತವೆ. ಆದರೆ ವಿಪರ್ಯಾಸವೆಂದರೆ ಈ ಬ್ರಾಹ್ಮಿ ನದಿಯು ಮಳೆಗಾಲದಲ್ಲಿ ಮಾತ್ರ ಹರಿಯುತ್ತದೆ. ಈ ಪರಿಸರದಲ್ಲಿ ಆಳ್ವಿಕೆ ನಡೆಸಿದ ಅನೇಕ ಅರಸರು ಕೆರೆ ಕಟ್ಟೆಗಳನ್ನು ನಿರ್ಮಿಸಿ ಕೃಷಿಗೆ ಸಹಾಯಕವಾಗುವಂತೆ ಮಾಡಿದ್ದಾರೆ. ಇಂತಹ ಪ್ರಾಚೀನ ಕೆರೆಗಳು ಇಂದಿಗೂ ನೀರಿನ ಆಸರೆಯಾಗಿದೆ. ಕೆರೆಗಳ ಜೊತೆಗೆ ಬಾವಿಗಳು ಪ್ರಾಕೃತಿಕ ನೀರಿನ ಆಸರೆಯಾಗಿದ್ದು ಅವುಗಳ ಪ್ರಾಮುಖ್ಯತೆ ಅಧ್ಯಯನದಲ್ಲಿ ವಿವರಿಸಲಾಗಿದೆ.

ಅಧ್ಯಯನದಿಂದ ಕಂಡುಕೊಂಡ ಫಲಿತಗಳು

೧. ಮೃಗವಧೆ ಪರಿಸರದಲ್ಲಿ ದೊರೆತಿರುವ ಅಪ್ರಕಟಿತ ಶಾಸನ ಪ್ರಮುಖವಾದದ್ದು. ಈ ಶಾಸನವು ಎರಡು ಅಡಿ ಉದ್ದ, ಒಂದು ಅಡಿ ಅಗಲವಾಗಿದೆ. ೮ ಅಕ್ಷರಗಳಿದ್ದು ಅವುಗಳ ಮೇಲೆ ತಲೆಕಟ್ಟು ಬಂದಿದ್ದು ಇದು ಕದಂಬರ ಅರಸರ ಲಿಪಿಯಲ್ಲಿನ ತಲೆಕಟ್ಟುಗಳನ್ನು ಹೋಲುತ್ತವೆ.

ಗು ಮ ಕ ದ ಯ ಮ ಬಾ ದ ಎಂಬ ಅರ್ಥವನ್ನು ನೀಡುತ್ತವೆ. ಇದರ ಅರ್ಥದ ಬಗ್ಗೆ ಅಧ್ಯಯನಗಳು ನಡೆಯಬೇಕಿದೆ.

೨. ಈ ಪರಿಸರದಲ್ಲಿ ದೊರೆತಿರುವ ಶಾಸನಗಳನ್ನು ಧಾರ್ಮಿಕ, ಆರ್ಥಿಕ, ವೀರಗಲ್ಲು, ಮಾಸ್ತಿಗಲ್ಲು ಎಂದು ವಿಭಾಗಿಸಲಾಗಿದ್ದು, ಶಾಸನಗಳಿಗೆ ಸಂಬಂಧಿಸಿದಂತೆ ಈ ಹಿಂದೆ ಅಧ್ಯಯನಗಳು ನಡೆದಿದ್ದರೂ ಸಹ ವ್ಯವಸ್ಥಿತವಾಗಿ ಹಾಗೂ ಕ್ರಮಬದ್ಧವಾಗಿ ಅಧ್ಯಯನದಲ್ಲಿ ಬಳಸಿಕೊಂಡಿರಲಿಲ್ಲಾ. ಇಂತಹ ಕೊರತೆಯನ್ನು ನೀಗಿಸುವ ಪ್ರಯತ್ನ ಈ ಪ್ರಬಂಧದಲ್ಲಿ ಮಾಡಲಾಗಿದೆ.

೩. ದೇವಾಲಯಗಳ ವಾಸ್ತುಶಿಲ್ಪದ ಬಗ್ಗೆ ಈ ಪರಿಸರದಲ್ಲಿ ಅಧ್ಯಯನಗಳು ನಡೆದಿದ್ದು ವಿರಳ ಎಂದೇ ಹೇಳಬಹುದು. ಇಂತಹ ಕೊರತೆಯನ್ನು ನೀಗಿಸುವ ಪ್ರಯತ್ನ ಸಂಪ್ರಬಂಧದಲ್ಲಿ ಮಾಡಲು ಯತ್ನಿಸಲಾಗಿದೆ. ಈ ಪರಿಸರದಲ್ಲಿ ವೈಷ್ಣವ ಶಿಲ್ಪಗಳೇ ಹೆಚ್ಚು ಕಂಡುಬರುತ್ತವೆ. ಕಾರಣ ಇಲ್ಲಿನ ಪಾಳೇಗಾರರು ವಿಜಯನಗರದ ಅರಸರಿಗೆ ಸಾಮಂತರಾಗಿದ್ದರಿಂದ ಅವರ ಮಾರ್ಗವನ್ನು ಅನುಸರಿಸಿದ್ದನ್ನು ಕಾಣಬಹುದು.

೪. ಅದೇ ರೀತಿಯಲ್ಲಿ ಈ ಪರಿಸರವು ಗಿರಿದುರ್ಗಗಳಿಗೆ ಸೂಕ್ತವಾದ ಸ್ಥಳವಾಗಿದೆ. ಕಾರಣ ಇಲ್ಲಿ ಎತ್ತರವಾದ ಬೆಟ್ಟಗಳಿದ್ದು ಅದರ ಮೇಲ್ಭಾಗದಲ್ಲಿ ಕೋಟೆಗಳನ್ನೇ ನಿರ್ಮಿಸುತ್ತಿದ್ದರು. ಶತ್ರುಗಳು ಸುಲಭವಾಗಿ ಆಕ್ರಮಣ ಮಾಡುತ್ತಿರಲು ಸಾಧ್ಯವಾಗುತ್ತಿರಲಿಲ್ಲ. ಅಲ್ಲದೆ ಗೆರಿಲ್ಲಾ ಮಾದರಿಯ ಯುದ್ಧನೀತಿ ಅನುಸರಿಸಲು ಇಲ್ಲಿನ ಗಿರಿಗಳು ಸಹಾಯಕವಾಗಿದೆ. ತೀರ್ಥಹಳ್ಳಿ ಪರಿಸರದಲ್ಲಿ ಎತ್ತರವಾದ ಬೆಟ್ಟಗಳಿದ್ದು ಇಲ್ಲಿನ ಕೌಲೇದುರ್ಗಕೋಟೆ ಕಂಡುಬರುತ್ತದೆ. ಇವುಗಳ ಬಗ್ಗೆ ಸಮಗ್ರವಾದ ಮಾಹಿತಿಯನ್ನು ನೀಡಲು ಪ್ರಯತ್ನಿಸಲಾಗಿದೆ. ಅಲ್ಲದೆ ಕೋಟೆಯೊಳಗಿನ ಕಣಜ, ಮದ್ದಿನ ಮನೆ, ಅರಮನೆ ಕಟ್ಟಡಗಳ ಅವಶೇಷಗಳ ಬಗ್ಗೆ ಸಮಗ್ರವಾದ ವಿವರಣಾತ್ಮಕ ಹಾಗೂ ವಿಶ್ಲೇಷಣಾತ್ಮಕವಾಗಿ ಅಧ್ಯಯನ ಕೈಗೊಂಡು ಮಾಹಿತಿಯನ್ನು ನೀಡುವ ಪ್ರಯತ್ನ ನೀಡಲಾಗಿದೆ.

೫. ಈ ಪರಿಸರದ ಗಿರಿದುರ್ಗಗಳಲ್ಲಿ ಕೆರೆಕಟ್ಟೆಗಿಂತಲೂ ಪ್ರಾಕೃತಿಕ ದೋಣಿಗಳ ಹೆಚ್ಚು ನೀರಿನ ಆಶ್ರಯ ತಾಣಗಳಾಗಿವೆ. ಕಾರಣ ಕೋಟೆಯ ಒಳಭಾಗದಲ್ಲಿ ಮಳೆನೀರು ಒಂದು ಕಡೆ ಸಂಗ್ರಹಿಸುವ ಮೂಲಕ ಕೋಟೆಯೊಳಗಿನ ಜನತೆಗೆ ನೀರೊದಗುತ್ತಿದ್ದವು ಇಂದಿಗೂ ಸಹ ಪ್ರಾಕೃತಿಕ ದೋಣಿಗಳು ಕೋಟೆಯ ಒಳಭಾಗದಲ್ಲಿದ್ದು ನೀರನ್ನು ಹೊಂದಿವೆ. ಅಲ್ಲದೆ ಪಾಳೇಗಾರರ ಕಾಲದಲ್ಲಿ ನೀರಿನ ಆಸರೆಯಾಗಿ ಕೆರೆಕಟ್ಟೆಗಳು ಈ ಭಾಗದಲ್ಲಿ ಹೆಚ್ಚು ನಿರ್ಮಿಸಿರುವುದನ್ನು ಕಾಣಬಹುದು.

೬. ಸ್ಥಳೀಯ ಇತಿಹಾಸವು ಐತಿಹಾಸಿಕ ದೃಷ್ಟಿಕೋನದಿಂದ ಸ್ಥಳೀಯ ಸ್ಮಾರಕಗಳಿಗೆ ಐತಿಹಾಸಿಕ ಮಹತ್ವವನ್ನು ಒದಗಿಸಿಕೊಡುತ್ತದೆ. ಇಂತಹ ಪ್ರಮುಖ ಅಂಶಗಳನ್ನು ಹೊಂದಿರುವ ತೀರ್ಥಹಳ್ಳಿ ತಾಲ್ಲೂಕಿನ ಮೃಗವಧ ಗ್ರಾಮದಲ್ಲಿನ ಅವಶೇಷಗಳು ಪ್ರಾಗೈತಿಹಾಸದಿಂದ ಹಿಡಿದು ಇತಿಹಾಸ ಕಾಲದವರೆಗೂ ತಿಳಿಯಲು ಸಹಕಾರಿಯಾಗಿದೆ. "ತೀರ್ಥಹಳ್ಳಿ ಪರಿಸರದ ಶಾಸನ ಮತ್ತು ಸ್ಮಾರಕಗಳು" ಎಂಬ ವಿಷಯದ ಬಗ್ಗೆ ಮಂಡಿಸಿರುವ ಈ ಪ್ರಬಂಧದಲ್ಲಿ ಸ್ಥಳೀಯ ಇತಿಹಾಸಕ್ಕೆ ಮಹತ್ವ ನೀಡಲಾಗಿದೆ.

೭. ತೀರ್ಥಹಳ್ಳಿಯಿಂದ ಸುಮಾರು ೬ ಕಿ.ಮಿ ದೂರದಲ್ಲಿರುವ ಮೃಗವಧ ಹತ್ತಿರ ಬ್ರಾಹ್ಮಿ ನದಿಯ ದಂಡೆಯ ಬಂಡಗಲ್ಲಿನ ಮೇಲೆ ರೇಖಾಚಿತ್ರಗಳು ಕಂಡುಬಂದಿದ್ದು ಈ ರೇಖಾಚಿತ್ರಗಳಲ್ಲಿ ಕೆಲವು ಪ್ರಾಣಿಗಳು ಹಸು, ಜಿಂಕೆ, ಒಬ್ಬ ಮನುಷ್ಯ ಬಾಣವನ್ನು ಬಿಡುತ್ತಿರುವಂತಹ ರೇಖಾಚಿತ್ರಗಳು ಸುಂದರವಾಗಿ ಮೂಡಿಬಂದಿವೆ.

೮. ಪ್ರಸ್ತುತ ಕ್ಷೇತ್ರಕಾರ್ಯದಲ್ಲಿ ಮಡಿಕೆ ಚೂರುಗಳು ಕಂಡುಬಂದಿದ್ದು ಅವು ಕದಂಬರ ಕಾಲದ್ದಾಗಿರಬಹುದೆಂದು ತಿಳಿದುಬಂದಿದ್ದು ಈ ಪ್ರದೇಶದಲ್ಲಿ ಕದಂಬರು ಆಳ್ವಿಕೆ ಮಾಡಿರುವುದು ಕಂಡುಬರುತ್ತದೆ.

೯. ವೀರಗಲ್ಲುಗಳು ಮಹಾಸತಿಗಲ್ಲು ತ್ಯಾಗ ಬಲಿದಾನದ ಪ್ರತೀಕವಾಗಿದೆ. ಪ್ರಸ್ತುತ ಪ್ರದೇಶದಲ್ಲಿ ಶಿಲ್ಪಗಳಲ್ಲಿ ವೀರರ ತ್ಯಾಗ, ಸತಿಗಳ ಬಲಿದಾನವಾಗಿರುವುದು ಗೋಚರಿಸುತ್ತದೆ. ಈ ಶಿಲ್ಪಗಳಿಂದಾಗಿ ತೀರ್ಥಹಳ್ಳಿ ಪರಿಸರದ ಗತಕಾಲದ ಮಾನವನ ಚಾರಿತ್ರಿಕ ಬದುಕಿನ ವಿಭಿನ್ನ ಆಯಾಮಗಳ ಕೈಗನ್ನಡಿ ಎನ್ನಬಹುದು.

ಈ ಕುರಿತಂತೆ ಸಮಗ್ರ ಅಧ್ಯಯನಗಳು ಈ ಭಾಗದಲ್ಲಿ ನಡೆಯಬೇಕಾಗಿದೆ. ಪ್ರಸ್ತುತ ಸಂಪ್ರಬಂಧದಲ್ಲಿ ಪ್ರಾಚೀನ ಕಾಲದಲ್ಲಿಯೇ ನೀರಿನ ವ್ಯವಸ್ಥೆಗೆ ನೀಡಿದ ಪ್ರಾಮುಖ್ಯತೆಯನ್ನು ತಿಳಿಸಲಾಗಿದೆ. ತೀರ್ಥಹಳ್ಳಿ ಪರಿಸರದ ಶಾಸನ ಮತ್ತು ಸ್ಮಾರಕಗಳ ಅಧ್ಯಯನದ ಪ್ರಮುಖ ಉದ್ದೇಶ ಎಂದರೆ ಹಿಂದೆ ಅರಸರ ಆಳ್ವಿಕೆಗೆ ಒಳಪಟ್ಟ ಈ ಪರಿಸರವನ್ನು ಪುನರ್ ಪರಿಶೀಲಿಸುವ ಮೂಲಕ ಈ ಪರಿಸರದ ಸಂರಕ್ಷಣೆಯ ಮೇಲೆ ಬೆಳಕು ಚೆಲ್ಲುವುದಾಗಿದೆ.

ಸಮಷ್ಟಿಯಾಗಿ ಮಲೆನಾಡು ಪ್ರಾಂತೀಯ ರಾಜಧಾನಿಯ ನಾಡಾಗಿಯೂ, ವಾಣಿಜ್ಯ ಕೇಂದ್ರವೂ, ಆಡಳಿತ ವಿಭಾಗವಾಗಿಯೂ, ಸಾಂಸ್ಕೃತಿಕ ಕೇಂದ್ರವಾಗಿಯೂ ಪ್ರಾಮುಖ್ಯತೆಯನ್ನು ಪಡೆದುಕೊಂಡಿದ್ದು ಅದಕ್ಕಾಗಿಯೇ ರಾಜಕೀಯ, ಸಾಂಸ್ಕೃತಿಕ ಇತಿಹಾಸದಲ್ಲಿ ಸ್ಥಾನಕಲ್ಪಿಸಿಕೊಂಡಿರಬೇಕೆಂಬ ಉದ್ದೇಶದಿಂದ ಕೈಗೊಂಡ ಪ್ರಸ್ತುತ ಅಧ್ಯಯನವು ಹೊಸ ವಿಚಾರಗಳನ್ನು ಬೆಳಕಿಗೆ ತರುವ ಮೂಲಕ ಸಫಲವಾಗಿದೆ ಎಂದು ಭಾವಿಸುತ್ತೇನೆ.

ಈ ಭಾಗದತ್ತ ಸಂಶೋಧಕರ ಗಮನವನ್ನು ಸೆಳೆದು ಮತ್ತಷ್ಟು ಸಂಶೋಧನೆಗೆ ಹಾಗೂ ಅಭಿವೃದ್ಧಿಗೆ ತೊಡಗಲು ಈ ಪ್ರಬಂಧ ಪ್ರೇರೇಪಿಸಿದರೆ ಶ್ರಮ ಸಾರ್ಥಕ ಎಂದು ಅರಿಯುತ್ತೇನೆ.

ಅನುಬಂಧ

೧. ಕೋಷ್ಟಕ
೨. ಆಧಾರ ಗ್ರಂಥಗಳ
೩. ನಕ್ಷೆಗಳು
೪. ದೇವಾಲಯದ ತಲವಿನ್ಯಾಸ
೫. ಛಾಯಾಚಿತ್ರಗಳು

ಗ್ರಂಥ ಋಣ

ಕನ್ನಡ ಗ್ರಂಥಗಳು

೦೧. ಅಪರ್ಣ ಕೂ.ಸ., ೧೯೯೯, ದೇವಾಲಯದ ವಾಸ್ತು ಶಿಲ್ಪ ಪರಿಚಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೦೨. ಅರವಿಂದ ಮಾಲಗತ್ತಿ (ಪ್ರಸಂ)., ೨೦೦೫, ಕನ್ನಡ ವಿಷಯ ವಿಶ್ವಕೋಶ, ಕರ್ನಾಟಕ, ಸಂಪುಟ-೦೧, ಮೈಸೂರು ವಿಶ್ವವಿದ್ಯಾಲಯ, ಮೈಸೂರು

೦೩. ಕಲವೀರ ಪ್ರಭು ಕ್ಯಾಲಕೊಂಡ, ೧೯೯೭, ಚಾಲುಕ್ಯರ ವಾಸ್ತು ಶಿಲ್ಪ ವೈಭವ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೦೪. ಕಲಬುರ್ಗಿ ಎಂ.ಎಂ., ೧೯೯೪, ಕರ್ನಾಟಕದ ಕೈಫಿಯತ್ತುಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೦೫. ಕಲಬುರ್ಗಿ ಎಂ.ಎಂ., ೧೯೯೯, ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು, ಸಂಪುಟ-೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೦೬. ಕಲಬುರ್ಗಿ ಎಂ.ಎಂ., ೨೦೧೦, ಮಾರ್ಗ, ಸಂಪುಟ-೦೪, ಸಪ್ನ ಬುಕ್ ಹೌಸ್, ಬೆಂಗಳೂರು

೦೭. ಕೆಮ್ಮೂತ್ತೂರು ರಘುಪತಿಭಟ್ಟ, ೧೯೭೯, ತುಳುನಾಡಿನ ಸ್ಥಳನಾಮಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೦೮. ಕೊಟ್ರೇಶ್ ಎಂ., ೨೦೧೧, ಬಳ್ಳಾರಿ ಜಿಲ್ಲೆಯ ಕೋಟೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೦೯. ಚನ್ನಬಸಪ್ಪ ಎಸ್.ಪಾಟೀಲ, ೨೦೦೦, ಕರ್ನಾಟಕ ಕೋಟೆಗಳು, ಸಂಪುಟ-೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೦. ಚಿದಾನಂದ ಮೂರ್ತಿ ಎಂ., ೨೦೦೨, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಸಪ್ನ ಬುಕ್ ಹೌಸ್, ಬೆಂಗಳೂರು

೧೧. ಚಿದಾನಂದ ಮೂರ್ತಿ ಎಂ., ೨೦೧೦, ಹೊಸತು-ಹೊಸತು, ಸಪ್ನ ಬುಕ್ ಹೌಸ್, ಬೆಂಗಳೂರು

೧೨. ಚಿನ್ನಸ್ವಾಮಿ ಸೋಸಲೆ ಎಸ್., ೨೦೦೪, ಸಾಮ್ರಾಜ್ಯ ಮತ್ತು ಸಂಸ್ಥಾನ (ವಿಜಯನಗರ, ಮೈಸೂರು, ಇಕ್ಕೇರಿ), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೩. ತಿಪ್ಪೇರುದ್ರಸ್ವಾಮಿ ಎಚ್., ೨೦೦೩, ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಿ.ವಿ.ಕೆ, ಮೂರ್ತಿ ಪ್ರಕಾಶಕರು, ಮೈಸೂರು

೧೪. ಪರಮಶಿವಮೂರ್ತಿ ಡಿ.ವಿ., ೧೯೯೯, ಕನ್ನಡ ಶಾಸನಶಿಲ್ಪ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೫. ಪರಮಶಿವಮೂರ್ತಿ ಡಿ.ವಿ., ೨೦೧೧, ತುರುಗೊಳ್ ಸಂಕಥನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೬. ಪುಟ್ಟಣ್ಣ ಎಂ.ಎಸ್., ೧೯೯೭, ಚಿತ್ರದುರ್ಗದ ಪಾಳೇಯಗಾರರು, ಮದಕರಿ ಪ್ರಕಾಶನ, ಚಿತ್ರದುರ್ಗ

೧೭. ಬಾಗೂರು ಅರ್.ನಾಗರಾಜಪ್ಪ, ೨೦೦೪, ಹೊಸದುರ್ಗ ಸೀಮೆ ಜಾನಪದ, ಸಿ.ವಿ.ಜಿ.ಪಬ್ಲಿಕೇಷನ್, ಬೆಂಗಳೂರು
೧೮. ಮಹಂತೇಶ ಎನ್.ಎಸ್., ೨೦೦೮, ಚಿತ್ರದುರ್ಗ ಕೋಟೆ ಪರಿಸರದ ದೇವಾಲಯಗಳು : ಒಂದು ಸಾಂಸ್ಕೃತಿಕ ಅಧ್ಯಯನ, ರೇಣುಕ ಪ್ರಕಾಶನ, ಚಿತ್ರದುರ್ಗ
೧೯. ರಾಮಭಟ್ಟ ಬಿ.ಎಸ್., ೨೦೦೧, ಶಿವಮೊಗ್ಗ ಜಿಲ್ಲೆಯ ಇತಿಹಾಸ ಮತ್ತು ಸಂಸ್ಕೃತಿ, ರಾಷ್ಟ್ರೀಯ ಶಿಕ್ಷಣ ಸಮಿತಿ, ಶಿವಮೊಗ್ಗ
೨೦. ರಾಜಾರಾಮ ಹೆಗ್ಗಡೆ, ಅಶೋಕ್ ಶೆಟ್ಟರ್ (ಸಂ)., ೨೦೦೧, ಮಲೆಕರ್ನಾಟಕದ ಅರಸು ಮನೆತನಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
೨೧. ರಹಮತ್ ತರೀಕೆರೆ, ೨೦೦೬, ಕರ್ನಾಟಕದ ನಾಥಪಂಥ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
೨೨. ರಾಜಶೇಖರಪ್ಪ ಬಿ., ೨೦೦೧, ಇತಿಹಾಸ, ಸಿ.ವಿ.ಜಿ, ಪಬ್ಲಿಕೇಷನ್ಸ್, ಬೆಂಗಳೂರು
೨೩. ರಾಮಚಂದ್ರರಾವ್ ಎಸ್.ಕೆ., ೧೯೭೫, ಮೂರ್ತಿಶಿಲ್ಪ ನೆಲೆ–ಹಿನ್ನಲೆ, ಬೆಂಗಳೂರು, ವಿಶ್ವವಿದ್ಯಾಲಯ, ಬೆಂಗಳೂರು
೨೪. ರಾಮಚಂದ್ರರಾವ್ ಎಸ್.ಕೆ., ೧೯೮೦, ಭಾರತದ ದೇವಾಲಯ ನೆಲೆ–ಹಿನ್ನಲೆ, ಐ.ಬಿ.ಹೆಚ್.ಪ್ರಕಾಶನ, ಬೆಂಗಳೂರು
೨೫. ಲಕ್ಷ್ಮಣ ತೆಲಗಾವಿ., ೨೦೦೪, ಮೌರ್ಯ ಮತ್ತು ಶಾತವಾಹನ ಯುಗ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
೨೬. ಶಿವತಾರಕ್ ಕೆ.ಬಿ., ೨೦೦೧, ಕರ್ನಾಟಕದ ಪುರಾತತ್ವ ನೆಲೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
೨೭. ಶ್ರೀ ಶೈಲ ಆರಾಧ್ಯ ಎಚ್., ೧೯೮೩, ಸಂಶೋಧನೆಯ ಹಾದಿಯಲ್ಲಿ, ಆರೋಹಣ ಪ್ರಕಾಶನ, ಚಿತ್ರದುರ್ಗ
೨೮. ಶ್ರೀನಿವಾಸ್ ಎಲ್., ೨೦೦೧, ಹಂಪಿ ಪರಿಸರದ ಆದಿ ಮಾನವನ ನೆಲೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
೨೯. ಸುಂದರ ಅ., ೧೯೯೪, ಕರ್ನಾಟಕ ಪ್ರಾಗೈತಿಹಾಸ ಚಿತ್ರಕಲೆ, ಕರ್ನಾಟಕ ಚಿತ್ರಕಲಾ ಅಕಾಡೆಮಿ, ಬೆಂಗಳೂರು
೩೦. ಜ್ಞಾನಾನಂದ ಜಿ., ೨೦೦೧, ಶಿಲ್ಪಾದರ್ಶ, ಸಂಪುಟ–೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
೩೧. ಜ್ಞಾನಾನಂದ ಜಿ., ೨೦೦೨, ಶಿಲ್ಪಾದರ್ಶ, ಸಂಪುಟ–೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
೩೨. ಜ್ಞಾನಾನಂದ ಜಿ., ೨೦೦೬, ಶ್ರೀ ಕಾಶ್ಯಪ ಶಿಲ್ಪಶಾಸ್ತ್ರಂ, ಸಂಪುಟ–೩, ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು

ಲೇಖನಗಳು

ಅನುರಾಧ ವಿ., ೨೦೧೧, ಕರ್ನಾಟಕದ ದೇವಾಲಯಗಳಲ್ಲಿ ಮಕರ ತೋರಣಗಳು, ಇತಿಹಾಸ ದರ್ಶನ, ಸಂಪುಟ–೨೬, ನಾಗರಾಜು ಎಂ.ಜಿ., ಕೃಷ್ಣಮೂರ್ತಿ ಪಿ.ವಿ.(ಸಂ)., ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು

ಅಪರ್ಣ ಕೂ.ಸ., ೧೯೯೮, ವಾಸ್ತುಶಿಲ್ಪ ಶಾಸ್ತ್ರದ ಹಿನ್ನಲೆಯಲ್ಲಿ ದೇವಾಲಯದ ಮಂಟಪಗಳು ಇತಿಹಾಸ ದರ್ಶನ, ಸಂಪುಟ-೨೨, ನಾಗರಾಜು ಎಂ.ಟಿ., ಕೃಷ್ಣಮೂರ್ತಿ ಪಿ.ವಿ.(ಸಂ)., ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು

ರಾಮದಾಸರೆಡ್ಡಿ ಎಸ್.ಜಿ., ೨೦೧೦, ಇತಹಾಸ ಆರಂಭ ಕಾಲದ ಕ್ಯಾವಲೀನ್ ಪೈಂಟೆಡ್ ಮಡಿಕೆ ಚೂರುಗಳು, ಇತಿಹಾಸ ದರ್ಶನ, ಸಂಪುಟ-೨೫, ನಾಗರಾಜ್ ಎಂ.ಜಿ., ಕೃಷ್ಣಮೂರ್ತಿ ಪಿ.ವಿ.(ಸಂ), ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು

English Books

1. Annual Report of the Mysore Archaeological Department, 1918, University of Mysore.
2. Annual Report of the Mysore Archaeological Department, 1927, University of Mysore.
3. GururAj Rao B.K., 1972, The Megalithic Culture in South India, University of Mysore, Mysore.
4. Rice B.L. (Ed)., 1903, Epigraphy of Karnatika, Vol-XLLL (Inscription of the Tirtahalli Districk), Mysore Goverment Central Press, Bangalore.

ಅಪ್ರಕಟಿತ ಸಂಶೋಧನ ಪ್ರಬಂಧಗಳು

೧. ಅಮರೇಶ್ ಯತಗಲ್, ೨೦೦೫, ಕರ್ನಾಟಕ ನಾಯಕ ಅರಸು ಮನೆತನಗಳ ವಿಶಿಷ್ಟ ಸಾಂಸ್ಕೃತಿಕ ಆಚರಣೆಗಳು : ಒಂದು ಚಾರಿತ್ರಿಕ ಅಧ್ಯಯನ (ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨. ಕೃಷ್ಣಪ್ಪ ಎನ್., ೨೦೦೬, ಕರ್ನಾಟಕದಲ್ಲಿ ಉತ್ಖನನ ನೆಲೆಗಳು : ಸಾಂಸ್ಕೃತಿಕ ಅಧ್ಯಯನ, (ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩. ತಿಪ್ಪೇಸ್ವಾಮಿ ಎಸ್., ೨೦೦೪, ದಾವಣಗೆರೆ ಜಿಲ್ಲೆಯ ದೇವಾಲಯಗಳು, (ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೪. ತಿಪ್ಪೇಸ್ವಾಮಿ, ೨೦೦೪, ಚಿತ್ರದುರ್ಗ ಜಿಲ್ಲೆ : ರಕ್ಷಣಾ ವಾಸ್ತುಶಿಲ್ಪ, (ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೫. ಮಂಜುನಾಥ ಡಿ., ೨೦೦೪, ಮಧ್ಯಕಾಲದಲ್ಲಿ ದೇವಾಲಯದ ಆಶ್ರಯ ಪಾಲನೆ ಮತ್ತು ನಿರ್ವಹಣೆ ಹರಿಹರ ದೇವಾಲಯ ಒಂದು ಅಧ್ಯಯನ, ಶಾಸನಗಳ ಆಧಾರದಿಂದ, (ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೬. ಮಹಂತೇಶ್ ಎನ್.ಎಸ್., ೨೦೦೮, ಹೊಸದುರ್ಗ ಪರಿಸರದ ದೇವಾಲಯಗಳು, (ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕ್ರಸಂ. ಸ್ಥಳ	ತಾಲ್ಲೂಕು	ಕಲ್ಲು	ವೈಶಿಷ್ಟ್ಯತೆ	ಆರಾಧನೆ	ಅಂದಾಜು ಕಾಲ
೦೧. ಅಗಸರ ಕೊಪ್ಪ	ತೀರ್ಥಹಳ್ಳಿ	ಒಕ್ಕೈವೀರಮಾಸ್ತಿ	ಐದು ಬೆರಳುಗಳಿಗೂ ಉಂಗುರಗಳನ್ನು ಧರಿಸಿರುವುದು ವಿಶೇಷ	ಇದೆ	ಹೊಯ್ಸಳರ ಕಾಲ
೦೨. ಆರಗ ಆನೆಗಳನ್ನು	ತೀರ್ಥಹಳ್ಳಿ ಇಲ್ಲ	ಒಂದು ಆತ್ಮಬಲಿಕಲ್ಲು ಎರಡು ವಿಜಯನಗರ ವೀರಗಲ್ಲು ಲಿಪಿ ಸಹಿತ ನಾಲ್ಕು ಮಾಸ್ತಿಗಲ್ಲು	ಬಳಸಿದ್ದು ವೀರನ ರುಂಡವನ್ನು ಸ್ತ್ರೀಯೊಬ್ಬಳು ಕೈಯಲ್ಲಿ ಹಿಡಿದಿರುವುದು	ಯುದ್ಧದ	ಚಿತ್ರಾವಳಿ ಯುದ್ಧದಲ್ಲಿ (ಆರಗ ಓಡೆಯರ್)
೦೩. ಕಬಸೆ	ತೀರ್ಥಹಳ್ಳಿ	ವೀರಗಲ್ಲು ಲಿಪಿಸಹಿತ ನಾಲ್ಕು ಒಕ್ಕೈ ವೀರಮಾಸ್ತಿ	ಯುದ್ಧದ ದೃಶ್ಯಾವಳಿ	ಇಲ್ಲ	ವಿಜಯನಗರ ಕಾಲ
೦೪. ಕಣಿವೆ	ತೀರ್ಥಹಳ್ಳಿ	ಮೊದಲನೇ ಸಮಾಧಿಗಲ್ಲು ಎರಡನೇ ಸಮಾಧಿಗಲ್ಲು	ಮೇಲ್ಭಾಗದಲ್ಲಿ ಶಿಲ್ಪಗಳು ಕೆಳಭಾಗದಲ್ಲಿ ಶಾಸನಗಳಿರುವುದು	ಇದೆ	ಕ್ರಿ.ಶ.೧೧೯೦-೯೧ ಹೊಯ್ಸಳರ ಕಾಲ
೦೫. ಕೆಸ್ತೂರು	ತೀರ್ಥಹಳ್ಳಿ	ಆರು ಇಕ್ಕೈ ಮಾಸ್ತಿಕಲ್ಲು ಒಂದು ಮುಕ್ಕೈ ಮಾಸ್ತಿಗಲ್ಲು	ಕಲ್ಲುಗಳು ಸಾಲಾಗಿ ನಿಲ್ಲಿಸಿರುವುದು	ಇದೆ	ವಿಜಯನಗರ ಕಾಲ
೦೬. ಕೋಣಂದೂರು	ತೀರ್ಥಹಳ್ಳಿ	ವೀರಮಾಸ್ತಿ	ಹೋರಾಟದ ದೃಶ್ಯಗಳು	ಇಲ್ಲ	ವಿಜಯನಗರ ಕಾಲ
೦೭. ಜಗಳಗೋಡು	ತೀರ್ಥಹಳ್ಳಿ	ಹುಲಿಬೇಟೆ ವೀರಗಲ್ಲು	ಹುಲಿಯ ಜೊತೆ ವೀರ ಹೋರಾಡುತ್ತಿರುವುದು	ಇಲ್ಲ	ವಿಜಯನಗರ ಕಾಲ
೦೮. ತೀರಳೆಬೈಲು	ತೀರ್ಥಹಳ್ಳಿ	ವೀರಮಾಸ್ತಿಗಲ್ಲು ಇಕ್ಕೈ ಮಾಸ್ತಿಗಲ್ಲು	ಕಂಬದಿಂದ ಎರಡು ತೋಳುಗಳು ಹೊರಚಾಚಿರುವುದು	ಇಲ್ಲ	ವಿಜಯನಗರ ಕಾಲ
೦೯. ಬಳಗಟ್ಟೆ	ತೀರ್ಥಹಳ್ಳಿ	೭ ಮಾಸ್ತಿಗಲ್ಲು	ಉಬ್ಬುಶಿಲ್ಪಗಳು	ಇದೆ	

೧೦. ಬೆಜ್ಜವಳ್ಳಿ	ತೀರ್ಥಹಳ್ಳಿ	ವೀರಮಾಸ್ತಿ	ಯುದ್ಧದ ವರ್ಣನೆ	ಇಲ್ಲ	ಹೊಯ್ಸಳರ ಕಾಲ
೧೧. ಬೊಬ್ಬಿ	ತೀರ್ಥಹಳ್ಳಿ	ವೀರಗಲ್ಲು	ಯುದ್ಧದ ವರ್ಣನೆ	ಇಲ್ಲ	ವಿಜಯನಗರ ಕಾಲ
೧೨. ಹುಲ್ಲುಸಾಲೆ	ತೀರ್ಥಹಳ್ಳಿ	ಒಂದನೇ ವೀರಗಲ್ಲು ಎರಡನೇ ವೀರಗಲ್ಲು	ಯುದ್ಧದ ದೃಶ್ಯಾವಳಿ	ಇದೆ	ಕ್ರಿ.ಶ.೧೪೭೭
೧೩. ಹಾದಿಗಲ್ಲು	ತೀರ್ಥಹಳ್ಳಿ	ಸಮಾಧಿಗಲ್ಲು	ಸಮಾಧಿ ಮರಣದ ಚಿತ್ರಗಳು	ಇದೆ	ಕ್ರಿ.ಶ.೧೪೭೭
೧೪. ಹೀರೆಕಲ್ಲಹಳ್ಳಿ	ತೀರ್ಥಹಳ್ಳಿ	ಮೊದಲನೇ ವೀರಗಲ್ಲು ಎರಡನೇ ವೀರಗಲ್ಲು	ಯುದ್ಧದ ಸನ್ನಿವೇಶ	ಇಲ್ಲ	ಕ್ರಿ.ಶ.೧೧೩೧
೧೫. ಹುಲಿಸರ	ತೀರ್ಥಹಳ್ಳಿ	ಮೊದಲನೇ ವೀರಗಲ್ಲು ಎರಡನೇ ನಿಶಧಿಗಲ್ಲು	ಒಂದು ಎಂಟು ಅಡಿ ಎತ್ತರ ಎಲ್ಲ ಹಂತದಲ್ಲೂ ಬರವಣಿಗೆ ಇದೆ. ನಿಶಧಿಗಲ್ಲಿನಲ್ಲಿ ಸುಂದರವಾದ ಶಿಲ್ಪಕೃತಿಗಳಿವೆ	ಇದೆ	ಕ್ರಿ.ಶ.೧೩೦೨ ಸಾಂತರ ಕಾಲ
೧೬. ಹೆದ್ದೂರು	ತೀರ್ಥಹಳ್ಳಿ	ಜೋಡಿವೀರಗಲ್ಲು	ಯುದ್ಧದ ಚಿತ್ರಾವಳಿ	ಇಲ್ಲ	ಕ್ರಿ.ಶ.೧೨೫೪

ಶಾಸನಗಳ ಕೋಷ್ಟಕ


ಕ್ರಸಂ.	ಪಟ್ಟಣ/ಗ್ರಾಮ	ಶಾಸನ ದೊರೆತ ಸ್ಥಳ	ಮನೆತನ	ಕಾಲಮಾನ	ಸಾರಾಂಶ
೦೧.	ಕಣಿವೆ	ಬಸದಿಯ ಎಡಭಾಗದ ಕಲ್ಲಿನ ಮೇಲೆ	ಹೊಯ್ಸಳ	ಕ್ರಿ.ಶ.೧೧೯೧	ಹೊಯ್ಸಳ ದೇವನ ದಂಡಾಧಿಕಾರಿಯಾದಂತ ಭಂಡಾರಿ ಚಂದಿರಮ್ಯಯ್ಯನ ಹೆಂಡತಿ ಬೊಪ್ಪವ್ವೆ ಸನ್ಯಾಸ ವ್ರತ ಸ್ವೀಕರಿಸಿ ಸ್ವರ್ಗಸ್ಥವಾದ ವಿವರವಿದೆ
೦೨.	ಮೃಗವಧೆ	ಮಲ್ಲಿಕಾರ್ಜುನ ದೇವಾಲಯ	ಕಲ್ಯಾಣ ಚಾಲುಕ್ಯ	ಕ್ರಿ.ಶ.೧೧೪೯	ಉದ್ದೇಶ ತಿಳಿದುಬಂದಿಲ್ಲಾ
೦೩.	ಚಟ್ಟಕೊಡಗಿ	ಹೊಲದಲ್ಲಿ ದೊರೆತ ಶಾಸನ	ವಿಜಯನಗರ	ಕ್ರಿ.ಶ.೧೩೪೬	ನರಸಿಂಹ ದೇವರಿಗೆ ನೇವೆದ್ಯ ಸೇವೆಗೆ ಭೂಧಾನ ವಿತ್ತ ವಿವರವಿದೆ.
೦೪.	ಕವಲೇದುರ್ಗ	ಕಾಶೀವಿಶ್ವೇಶ್ವರ ದೇವಾಲಯದ ಹತ್ತಿರ	ವಿಜಯನಗರ	ಕ್ರಿ.ಶ.೧೩೪೨	ಮೈಲಾರೇಶ್ವರ ದೇವರ ಅಮೃತ ಪಡಿ ದಾನಬಿಟ್ಟ ವಿವರವಿದೆ.
೦೫.	ತೀರ್ಥಹಳ್ಳಿ	ಕಲ್ಲಾಳು ಗ್ರಾಮದ ತೋಟದಲ್ಲಿ	ವಿಜಯನಗರ	ಕ್ರಿ.ಶ.೧೩೬೯	ಜಾಟಿಗಾರು ಪ್ರದೇಶವನ್ನು ದಾನವಾಗಿ ನೀಡಿದ್ದು
೦೬.	ಹುಣಸವಳ್ಳಿ	ಗ್ರಾಮದೇವತೆಯ ಗುಡಿಯ ಬಳಿ	ವಿಜಯನಗರ	ಕ್ರಿ.ಶ.೧೩೭೭	ಗೋಸೆಟ್ಟಿ ಎಂಬಾತ ತನ್ನ ತಂದೆ ನಾಗಸೆಟ್ಟಿ ಸ್ಮರಣಾರ್ಥವಾಗಿ ೧೩೮೧ರಲ್ಲಿ ನಾಗಸಮುದ್ರ ಎಂಬ ಅಗ್ರಹಾರ ಸ್ಥಾಪಿಸಿದ ವಿವರವಿದೆ.
೦೭.	ವಿರೂಪಾಪುರ	ಕೊಲ್ಲಭಟ್ಟರಲ್ಲಿದ್ದ ತಾಮ್ರಪಟ	ವಿಜಯನಗರ	ಕ್ರಿ.ಶ.೧೩೬೪	ವಿಜಯನಗರ ವಂಶಾವಳಿಯನ್ನು ತಿಳಿಸುತ್ತದೆ. ಹಾಗೂ ಬುಕ್ಕನನ್ನ ಪಾಂಡವರಲ್ಲಿ ಅರ್ಜುನನಂತೆ ಪ್ರಖ್ಯಾತನಾದವನೆಂದೂ ಹೊಗಳಿದೆ
೦೮.	ತೀರ್ಥಹಳ್ಳಿ	ಹರಿಹರೇಶ್ವರ ದೇವಾಲಯ	ವಿಜಯನಗರ	ಕ್ರಿ.ಶ.೧೪೦೪	ವಿಜಯನಗರದ ಪ್ರಖ್ಯಾತ ದೊರೆ ಹರಿಹರನ ಮರಣದ ವಿವರವಿದೆ.
೦೯.	ಆರಗ	ಕಲಾನಾಥೇಶ್ವರ ದೇವಾಲಯ	ವಿಜಯನಗರ	ಕ್ರಿ.ಶ.೧೪೦೪	ಆರಗದ ಮೂಲ ದೇವರಾದ ಕಲಾನಾಥೇಶ್ವರ ಅಮೃತ ಪಡಿಗ ದಾನಬಿಟ್ಟ ವಿವರವಿದೆ.


೧೦.	ಆರಗ	ಬನಶಂಕರಿ ದೇವಾಲಯ	ವಿಜಯನಗರ	ಕ್ರಿ.ಶ.೧೪೦೪	ಬನದೇವಿಯ ಅಮೃತ ಪಡಿಗ ಮತ್ತು ಅಭಿಶೇಕಕ್ಕೆ ಭೂದಾನ ನೀಡಿದ ವಿವರವಿದೆ.
೧೧.	ತೀರ್ಥಹಳ್ಳಿ	ಅಂದಿಗದೆ ಗದ್ದೆಯಲ್ಲಿ	ವಿಜಯನಗರ	ಕ್ರಿ.ಶ.೧೪೦೪	ಕಲ್ಲಿನಾಥ ದೇವರ ನೇವೇದ್ಯಗಾಗಿ ೧೮ ಕಂಪಣ ಭೂದಾನ ನೀಡಿದ ವಿವರವಿದೆ.
೧೨.	ಮರಹಳ್ಳಿ	ಮರಹಳ್ಳಿ ಗ್ರಾಮದಲ್ಲಿರುವ ಶಾಸನ	ಹೊಯ್ಸಳ	ಕ್ರಿ.ಶ.೧೪೦೬	ರವಿಚಂದಿರಮಯ್ಯ ತಮ್ಮ ಅಮ್ಮಯ್ಯ ಎಂಬಾತನು ದೇಗುಲವನ್ನು ಕಟ್ಟಿಸಿ ಭೂದಾನ ನೀಡಿದ ವಿವರವಿದೆ.
೧೩.	ಮೇಗರವಳ್ಳಿ	ಮೇಗರವಳ್ಳಿ	ವಿಜಯನಗರ	ಕ್ರಿ.ಶ.೧೪೧೭	ಮೇಗರವಳ್ಳಿ ನಾಗಕ್ಕೆ ಮಹಾಸತಿ ಬಗ್ಗೆ ವಿವರವಿದೆ.
೧೪.	ಆರಗ	ಅಖಂಡೇಶ್ವರ ದೇವಾಲಯ	ವಿಜಯನಗರ	ಕ್ರಿ.ಶ.೧೪೨೨	ಅಖಂಡೇಶ್ವರ ದೇವಾಲಯದ ಅಮೃತ ಪಡಿ ನೇವೇದ್ಯ ಮತ್ತು ನಂದಾ ದೀಪಗಳ ಪೂಜೆಗೆ ದಾನ ನೀಡಿದ ವಿವರವಿದೆ.
೧೫.	ಅಳಗವಾಗಿಲು	ಸದಾಶಿವ ದೇವಾಲಯ	ವಿಜಯನಗರ	ಕ್ರಿ.ಶ.೧೫೫೭	ದೇವಾಲಯದ ಧಾರ್ಮಿಕ ಕಾರ್ಯಗಳಿಗೆ ದಾನಬಿಟ್ಟ ವಿವರವಿದೆ.
೧೬.	ಕವಲೇದುರ್ಗ	ಖಾಜಿ ಸೈಯದ್‌ರವರಲ್ಲಿದ್ದ ತಾಮ್ರ ಶಾಸನ	ಕೆಳದಿ	ಕ್ರಿ.ಶ.೧೬೨೭	ಮಸೀದಿಯ ದಿನನಿತ್ಯದ ಕಾರ್ಯ ನಡೆಸಿಕೊಂಡು ಹೋಗಲು ಹಲಸಿನ ಹಳ್ಳಿ ಗ್ರಾಮವನ್ನು ದಾನವಾಗಿ ನೀಡಿದ ವಿವರವಿದೆ.
೧೭.	ಆರಗ	ಚೆನ್ನಕೇಶವ ದೇವಾಲಯದ ಹತ್ತಿರ	ಕೆಳದಿ	ಕ್ರಿ.ಶ.೧೬೮೭	ಅಗ್ರಹಾರವನ್ನು ನಿರ್ಮಾಣ ಮಾಡಿದ ವಿವರವಿದೆ.
೧೮.	ಕವಲೇದುರ್ಗ	ಕವಲೇದುರ್ಗ ಮಠದಲ್ಲಿನ ತಾಮ್ರ ಶಾಸನ	ಕೆಳದಿ	ಕ್ರಿ.ಶ.೧೬೯೫	ವಿರೂಪಾಕ್ಷದೇವರಿಗೆ ಭೂಮಿ ದಾನನೀಡಿದ ವಿವರವಿದೆ.
೧೯.	ಮೃಗವಧೆ	ಮಲ್ಲಿಕಾರ್ಜುನ ದೇವಾಲಯದ ಬಳಿ	ಕೆಳದಿ	ಕ್ರಿ.ಶ.೧೭೧೪	ಕೆಳದಿ ಸೋಮಶೇಖರ ನಾಯಕನು ತೀರ್ಥಕ್ಷೇತ್ರ ಸಂದರ್ಶನ ಮಾಡಿ ಅವುಗಳ ಜೀರ್ಣೋದ್ದಾರ ಮಾಡಿದ ವಿವರವಿದೆ.
೨೦.	ಆಗುಂಬೆ	ಗೋಪಾಲಕೃಷ್ಣ ದೇವಾಲಯ	ಕೆಳದಿ	ಕ್ರಿ.ಶ.೧೭೫೩	ಗೋಪಾಲಕೃಷ್ಣ ದೇವಾಲಯವನ್ನು ದುರಸ್ಥಿ ಮಾಡಿದ ವಿವರಗಳಿವೆ.

ತೀರ್ಥಹಳ್ಳಿ ತಾಲ್ಲೂಕು

ಕ್ರಸಂ.	ಗ್ರಾಮ/ನೆಲೆಯ ಹೆಸರು	ಹಳೆ ಶಿಲಾಯುಗ			ಸೂಕ್ಷ್ಮ ಶಿಲಾಯುಗ	ನೂತನ ಶಿಲಾಯುಗ	ಶಿಲಾ ತಾಮ್ರಯುಗ	ಬೃಹತ್ ಶಿಲಾಯುಗ		ಇತಿಹಾಸ ಆರಂಭ ಕಾಲ	ಒಟ್ಟು	ಇತರೆ
		ಆದಿ	ಮಧ್ಯ	ಅಂತ್ಯ				ನೆಲೆ	ಗೋರಿ			
೧.	ಅರೆಹಳ್ಳಿ					✓			✓			
೨.	ತಳಲೆ				✓							
೩.	ತಿಟ್ಟಮತ್ತೂರು				✓							
೪.	ತೀರ್ಥಹಳ್ಳಿ				✓							
೫.	ನಡ್ಪೂರು				✓							
೬.	ಬಂಕ್ಲಾಪುರ								✓			
೭.	ಬಂಡೀಗಡಿ								✓			
೮.	ಮೇಳಿಗೆ					✓						
೯.	ಯಡಗುಡ್ಡೆ					✓						
೧೦.	ಸಿದ್ಗಲ್ಲ				✓							
ಒಟ್ಟು					೦೫	೦೩			೦೩		೧೧	

ಸಾಂತರ ವಂಶಾವಳಿ


ರಾಹ(ರಾಳ)
ಉಗವಂಶ
ಸಹಕಾರ
ಆನದತ್ತ
ಶ್ರೀಕೇಶಿ ಮತ್ತು ಜಯಕೇಶಿ
ರಣಕೇಶಿ
ವಿಕ್ರಮ ಶಾಂತರ
ಚಾಗಿ ಶಾಂತರ
ವೀರಶಾಂತರ
ಕನ್ನರಶಾಂತರ
ಕಾಮದೇವ
ತ್ಯಾಗಿಶಾಂತರ
ನನ್ನಿಶಾಂತರ
ರಾಯಶಾಂತರ
ಚಿಕ್ಕವೀರ ಶಾಂತರ
ಅಣ್ಣಮ್ಮ (ಅಮ್ಮಣ ದೇವ)
ಬೀರಬ್ಬರಸಿ
ತೈಲಪದೇವ
ಬೀರದೇವ (ಜೀರುಗ)
ಸಿಂಗಿದೇವ
ಬ್ರಹ್ಮದೇವ


ತ್ರೈಲೋಕ್ಯಮಲ್ಲ ವೀರಶಾಂತರ
ತೈಲ
ಗೊಗ್ಗಿಗ
ಒಡ್ಡುಗ
ಬಮ್ಮದೇವ
ತೈಲ
ರಾಯಶಾನ್ತರ
ಬೊಪ್ಪುಗ
ಪಂಪಾದೇವಿ
ಶ್ರೀವಲ್ಲಭ
ಅಮ್ಮಣ
ಸಿಂಗಿದೇವ
ತೈಲ ()
ಕಾಮಭೂಪ
ಸಿಂಹನೃಪ
ಅಮ್ಮಣ ಭೂಮಿಪ
ಜಗದೇವರಸ
ಸಿಂಗಿದೇವ
ಅಳಿಯಾದೇವಿ
ಜಯಕೇಸಿದೇವ

ಕೆಳದಿ ಸಂಸ್ಥಾನದ ಅರಸರು

ಚೌಡಪ್ಪ ಕ್ರಿ.ಶ.೧೫೦೦–೧೫೧೪

↓

ಸದಾಶಿವನಾಯಕ ಕ್ರಿ.ಶ.೧೫೧೪–೧೫೩೭

↓

ಇಮ್ಮಡಿ ಸದಾಶಿವನಾಯಕ ಕ್ರಿ.ಶ.೧೫೩೭–೧೫೪೬

↓

ದೊಡ್ಡ ಸಂಕಣ್ಣ ನಾಯಕ ಕ್ರಿ.ಶ.೧೫೪೬–೧೫೫೯

↓

ಚಿಕ್ಕ ಸಂಕಣ್ಣ ನಾಯಕ ಕ್ರಿ.ಶ. ೧೫೫೯–೧೫೭೧

↓

ರಾಮರಾಜ ನಾಯಕ ಕ್ರಿ.ಶ.೧೫೭೧–೧೫೮೩

↓

ಹಿರಿಯ ವೆಂಕಟಪ್ಪ ನಾಯಕ ಕ್ರಿ.ಶ.೧೫೮೩–೧೬೩೦

↓

ವೀರಭದ್ರ ನಾಯಕ ಕ್ರಿ.ಶ. ೧೬೩೦–೧೬೪೬

↓

ಶಿವಪ್ಪ ನಾಯಕ ಕ್ರಿ.ಶ.೧೬೪೬–೧೬೬೧

↓

ಕಿರಿಯ ವೆಂಕಟಪ್ಪ ನಾಯಕ ಕ್ರಿ.ಶ.೧೬೬೧–೧೬೬೨

↓

ಭದ್ರಪ್ಪ ನಾಯಕ ಕ್ರಿ.ಶ.೧೬೬೨–೧೬೬೪

↓

ಹಿರಿಯ ಸೋಮಶೇಖರನಾಯಕ ಕ್ರಿ.ಶ.೧೬೬೪–೧೬೭೨

↓

ಕುತ್ಸಿತ ಶಿವಪ್ಪ ನಾಯಕ ಕ್ರಿ.ಶ.೧೬೭೨

↓

ಚನ್ನಮ್ಮಾಜಿ ಕ್ರಿ.ಶ.೧೬೭೨–೧೬೯೮

↓

ಹಿರಿಯ ಬಸಪ್ಪ ನಾಯಕ ಕ್ರಿ.ಶ.೧೬೯೮–೧೭೧೫

↓

ಕಿರಿಯ ಸೋಮಶೇಖರನಾಯಕ ಕ್ರಿ.ಶ. ೧೭೧೫–೧೭೪೦

↓


ಚನ್ನಬಸವ ನಾಯಕ ಕ್ರಿ.ಶ.೧೭೫೫–೧೭೫೮

↓


ಚನ್ನವೀರಮ್ಮಾಜಿ ಕ್ರಿ.ಶ.೧೭೫೮–೧೭೬೩

↓


(ದತ್ತು ಪುತ್ರ ಮುಮ್ಮಡಿ ಸೋಮಶೇಖರ ನಾಯಕ)



ಮೃಗವಧೆ ಮಲ್ಲಿಕಾರ್ಜುನ ದೇವಾಲಯ ತಲನಕ್ಷೆ




ತೀರ್ಥಹಳ್ಳಿ ರಾಮೇಶ್ವರ ದೇವಾಲಯ ತಲನಕ್ಷೆ




ಕಪಿಲೇಶ್ವರ ದೇವಾಲಯ ತಲನಕ್ಷೆ

ತೀರ್ಥಹಳ್ಳಿ ತಾಲೂಕು



(ಕೃಪೆ: ಅಂತರ್ಜಾಲ)

ಶಿವಮೊಗ್ಗ ಜಿಲ್ಲೆ



(ಕೃಪೆ: ಅಂತರ್ಜಾಲ)

ಶಿವಮೊಗ್ಗ ಜಿಲ್ಲೆಯ ಭೂಪಟ



(ಕೃಪೆ: ಅಂತರ್ಜಾಲ)

ಬಿಡಿ ಶಿಲ್ಪಗಳು ಮತ್ತು ಶಾಸನಗಳು



ಶೈವ ದ್ವಾರಪಾಲಕ



ಕಾರ್ತಿಕೇಯ ಶಿಲ್ಪ



ಗಣೇಶ ಶಿಲ್ಪ



ಮಹಿಶಮರ್ಧಿನಿ

ಬಿಡಿ ಶಿಲ್ಪಗಳು ಮತ್ತು ಶಾಸನಗಳು



ಉಮಾಮಹೇಶ್ವರ



ಶಾಸನ



ಮೃಗವಧೆ ಮಲ್ಲಿಕಾರ್ಜುನ ದೇವಾಲಯದ ಮುಂಭಾಗದ ಶಾಸನ

ಬಿಡಿ ಶಿಲ್ಪಗಳು ಮತ್ತು ಶಾಸನಗಳು



ಕೋಟೆ ದ್ವಾರ



ಕೋಟೆ ರಸ್ತೆ

ಬಿಡಿ ಶಿಲ್ಪಗಳು ಮತ್ತು ಶಾಸನಗಳು



ಕಪಿಲೇಶ್ವರ ದೇವಾಲಯ ದಾವಣೇಬೈಲು





ಬಿಡಿ ಶಿಲ್ಪಗಳು ಮತ್ತು ಶಾಸನಗಳು



ವೆಂಕಟರಮಣ ದೇವಾಲಯ ತೀರ್ಥಹಳ್ಳಿ





ಶಿಖರೇಶ್ವರ ದೇವಾಲಯ ಕಾವಲುದುರ್ಗ

ಬಿಡಿ ಶಿಲ್ಪಗಳು ಮತ್ತು ಶಾಸನಗಳು







ಬಿಡಿ ಶಿಲ್ಪಗಳು ಮತ್ತು ಶಾಸನಗಳು



ರಾಮ ಮಂಟಪ ತೀರ್ಥಹಳ್ಳಿ




ಅರಮನೆ ನಿವೇಶನಕವಲೇದುರ್ಗ

ಬಿಡಿ ಶಿಲ್ಪಗಳು ಮತ್ತು ಶಾಸನಗಳು





ಅರಮನೆ ಅವಶೇಷ ಕವಲೇದುರ್ಗ



ಪುಷ್ಕರಣಿ ಕವಲೇದುರ್ಗ

ಬಿಡಿ ಶಿಲ್ಪಗಳು ಮತ್ತು ಶಾಸನಗಳು



ರಾಮೇಶ್ವರ ದೇವಾಲಯ





ಶೈವ ದ್ವಾರಪಾಲಕರು

ಶಾಸನಶಾಸ್ತ್ರ ವಿಭಾಗ